

# ಮನಸ್ಸಿನ ವಿಜಯ

**ಆಶಿಷ್ ರಾಯ್‌ಚೂರ್**

**ಉಚಿತವಾದ ಹಂಚಿಕೆಗಾಗಿ ಮಾತ್ರ**
ಮುದ್ರಣ ಮತ್ತು  ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಥಮ ಪ್ರತಿ: ಡಿಜಿಟಲ್ ಬಿಡುಗಡೆ ಮೇ 2021
ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ:ಕರುಣಾಜೆರೋಮ್, ಬೈಫೈಯ್ಡ್ ಡಿಸೈನ್ಸ್

Contact information:
All Peoples Church& World Outreach,
#319,2nd Floor, 7th Main, HRBR Layout,
2nd Block, Kalyan Nagar, Bangalore 560043
Karnataka INDIA

Phone:+91-80-25452617
Email:bookrequest@apcwo.org
Website:**apcwo.org**

Unless otherwise indicated, all Scripture quotations are taken from the Holy Bible, New king lames Version. Copyright @1982 by Thoms Nelson, inc., Used by permission. All right reserved.
Scriptures marked as" (MSG)" are taken from THE MESSAGE: The Bible in Contemporary Language copyright 2002 by Eugene H. Peterson.
Scripture marker as" (GNB)" are taken from the GNB-Second Edition ©1992 by American Bible Society Used by permission.

**ಉಚಿತ ವಿತರಣೆಗಾಗಿ**
ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

**ಮೇಲಿಂಗ್  ಪಟ್ಟಿ ಉಚಿತ ಹೆಚ್ಚುವರಿ ಪುಸ್ತಕಗಳಿಗಾಗಿ**
ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ನಾವು ನಿಮ್ಮ ಸಭೆಯಲ್ಲಿ ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿರಿ. ನಾವು ಅವುಗಳನ್ನು ನಿಮಗೆ ಕಳುಹಿಸುತ್ತೇವೆ.
(Kannada Book – The conquest of mind )

# ಮನಸ್ಸಿನ ವಿಜಯ

**ನಿಮ್ಮ ಆಲೋಚನೆಗೆ ತರಬೇತಿ ನೀಡುವುದು**

## ಸ್ವೀಕೃತಿ

ನಾವು ಹಲವಾರು ಮೂಲಗಳು ಮತ್ತು ವಿವಿಧ ವಿಧಾನಗಳ ಮೂಲಕ ಕಲಿಯುತ್ತೇವೆ. ಈ ಪುಸ್ತಕದಲ್ಲಿ ವಿವರಿಸಿರುವ ಸತ್ಯಗಳು ದೇವರ ವಾಕ್ಯ, ಜೀವನ ಅನುಭವಗಳು ಮತ್ತು ಇತರರಿಂದ ನಾನು ಕಲಿತ ವಿಷಯಗಳನ್ನು ಕೇಳುವ ಮೂಲಕ, ಅವರ ಕೃತಿಗಳನ್ನು ಓದುವ ಮೂಲಕ ಅಥವಾ ಅವರ ಜೀವನವನ್ನು ಗಮನಿಸುವುದರ ಮೂಲಕ ಹುಟ್ಟಿಕೊಂಡಿವೆ.

## ಈ ಅಧ್ಯಯನದ ರೂಪರೇಖೆಯನ್ನು ಹೇಗೆ ಬಳಸುವುದು

ಇದು ವೈಯಕ್ತಿಕ ಅಧ್ಯಯನ ಮಾರ್ಗದರ್ಶಿಯಾಗಿ, ಸಣ್ಣ ಗುಂಪು ಚರ್ಚೆಗಳಲ್ಲಿ ಅಥವಾ ಉಪನ್ಯಾಸ / ಸೆಮಿನಾರ್ / ಕಾನ್ಫರೆನ್ಸ್ ಟಿಪ್ಪಣಿಗಳಾಗಿ ಬಳಸಲು ಉದ್ದೇಶಿಸಿರುವ ಅಧ್ಯಯನದ ರೂಪರೇಖೆಯಾಗಿದೆ. ವೈಯಕ್ತಿಕ ಗುಂಪು ಅಧ್ಯಯನದಲ್ಲಿ ಬಳಸಿದಾಗ, ಈ ಕೆಳಗಿನವುಗಳನ್ನು ಮಾಡಲು ನಾವು ನಿಮಗೆ ಸೂಚಿಸುತ್ತೇವೆ:ಪಟ್ಟಿಮಾಡಲಾದ ಧರ್ಮಗ್ರಂಥಗಳನ್ನು ಓದಿ, ಯಾವುದನ್ನಾದರೂ ಓದಿಕಾಮೆಂಟ್‌ಗಳಜೊತೆಯಲ್ಲಿ,ಯೋಚಿಸಿಆಲೋಚಿಸಿ,(ಚರ್ಚಿಸಿ),ಪವಿತ್ರಾತ್ಮವನ್ನು ಆಲಿಸಿ, ಯಾವುದೇ ವೈಯಕ್ತಿಕ ಒಳನೋಟವನ್ನು ಬರೆಯಿರಿ, ಕಲಿತ ಸತ್ಯದ ವೈಯಕ್ತಿಕ ಅನ್ವಯವನ್ನುಪರಿಗಣಿಸಿಮತ್ತುಕಲಿತದ್ದಕ್ಕೆ ಪ್ರತಿಕ್ರಿಯೆಯಾಗಿ ಪ್ರಾರ್ಥಿಸಿ.

# ಪರಿವಿಡಿ


1 ಪೀಠಿಕೆ ........................................................................................ 1
2 ಮನಸ್ಸು – ಸತ್ಯವೇದದ ಒಂದು ದೃಷ್ಟಿಕೋನ............................. 2
3 ಮನಸ್ಸು ಒಂದು ಯುದ್ಧಭೂಮಿ ................................................... 7
4 ನಿಮ್ಮ ಮನಸ್ಸನ್ನು ನವೀಕರಿಸುವುದು ....................................... 25
5 ಒಂದು ಸಕಾರಾತ್ಮಕ ಮಾನಸಿಕ ಮನೋಭಾವವನ್ನು ಅಭಿವೃದ್ಧಿ ಪಡಿಸುವುದು ............................................................................ 44
6 ಆತ್ಮ ಮತ್ತು ಪ್ರಾಣದ ಸಮತೋಲನ............................................ 52

# 1. ಪೀಠಿಕೆ

**2 ಕೊರಿಂಥದವರಿಗೆ 5:17**
**ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು.**

ನಾವು ನೂತನವಾಗಿ ಹುಟ್ಟಿದಾಗ, ನಮ್ಮ ಆತ್ಮಗಳು ಮಾತ್ರವೇ ಹೊಸದಾಗಿ ಹುಟ್ಟುತ್ತವೆ. ದೇವರ ಸ್ವಾರೂಪ್ಯದಲ್ಲಿ ಪುನಃ ಸೃಷ್ಟಿಸಲ್ಪಡುತ್ತವೆ. ಮತ್ತು ದೇವರ ಸ್ವಭಾವ ಮತ್ತು ಜೀವದೊಡನೆ ತುಂಬಿಸಲ್ಪಡುತ್ತವೆ. ನಮ್ಮ ಮನಸ್ಸುಗಳು ಮತ್ತು ದೇಹಗಳು ಹುಟ್ಟುವುದಿಲ್ಲ.

ದೇವರು ಜೀವಾತ್ಮ ಅಥವಾ ದೇಹವನ್ನು ಬದಲಾವಣೆ ಮಾಡಲಿಲ್ಲ.




ಆತ್ಮದಲ್ಲಿ ಇರುವುದು ಹೊರಗಡೆ ತೋರಿಸಲ್ಪಡಬೇಕು, ಆಮೇಲೆ,

- ಪ್ರಾಣ (ಮನಸ್ಸು, ಚಿತ್ತ ಮತ್ತು ಭಾವನೆಗಳು) ನವೀಕೃತಗೊಳ್ಳುವುದು ಅವಶ್ಯಕ
- ದೇಹ (ಶರೀರ) ಶಿಲುಬೆಗೇರಿಸಲ್ಪಡುವುದು ಅವಶ್ಯಕ.

ದೇವರ ವಾಕ್ಯ ಮತ್ತು ಪವಿತ್ರಾತ್ಮನ ಮೂಲಕವಾಗಿ ನಮ್ಮ ಮನಸ್ಸನ್ನು ನವೀಕೃತಗೊಳಿಸಿಕೊಳ್ಳುವುದು ಮತ್ತು ಶರೀರವನ್ನು ಶಿಲುಬೆಗೇರಿಸುವುದರ ಜವಬ್ದಾರಿಯನ್ನು ದೇವರು ನಮ್ಮ ಮೇಲೆ ಇರಿಸಿದ್ದಾನೆ.

ಈ ಒಂದು ಅಧ್ಯಾಯದಲ್ಲಿ ಮನಸ್ಸಿನ ಮೇಲೆ ನಾವು ದೃಷ್ಟಿಸೋಣ- ಏನು ಮಾಡಬೇಕು ಮತ್ತು ಅದನ್ನು ಹೇಗೆ ಮಾಡಬೇಕೆಂಬುದನ್ನು ನೋಡೋಣ.

# 2 ಮನಸ್ಸು – ಸತ್ಯವೇದದ ಒಂದು ದೃಷ್ಟಿಕೋನ

## 2.1. ಮನಸ್ಸನ್ನು ವ್ಯಾಖ್ಯಾನಿಸುವುದು

**1 ಥೆಸಲೋನಿಕದವರಿಗೆ 5:23**
**ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಲಿ ನಮ್ಮ ಕರ್ತನಾದ ಯೇಸುಕ್ರಿಸ್ತನು ಪ್ರತ್ಯಕ್ಷನಾದಾಗ ನಿಮ್ಮ ಆತ್ಮ ಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ.**

ಪ್ರಾಣ- ಗ್ರೀಕ ಪಿಸುಚೆ (psuche)

ಆತ್ಮ-ಗ್ರೀಕ ಪಿನುಮ (pneuma)

ಪ್ರಾಣ- ಮನಸ್ಸು, ಚಿತ್ತ ಮತ್ತು ಭಾವನೆಗಳ ಮಾನವನ ಅರಿವಿನ ಅಂಗ ಮನಸ್ಸು- ಮೆದುಳು, ಯೋಚನೆ, ವಿವೇಕ, ಬುದ್ಧಿಶಕ್ತಿ, ಭಾವನೆ ಮತ್ತು ಜ್ಞಾಪಕದ ಕಾರ್ಯಗಳು.

## 2.2. ಮನಸ್ಸಿನ ಪ್ರಾಮುಖ್ಯತೆ

- ✓ ನಮ್ಮ ಯೋಚನೆಗಳು ನಮ್ಮ ಕ್ರಿಯೆಗಳನ್ನು ನಿಶ್ಚಯಿಸುತ್ತವೆ. ಕ್ರಿಯೆಗಳು ನಡವಳಕೆಯಾಗಿ ಬೆಳೆಯುತ್ತವೆ. ನಡವಳಿಕೆಯು ಜೀವ ಶೈಲಿಯನ್ನು ರೂಪಿಸುತ್ತದೆ.

- ✓ ನಮ್ಮ ಯೋಚನೆಗಳನ್ನು ನಮ್ಮ ಭಾವನೆಗಳ ಮೇಲೆ ಪರಿಣಾಮ ಬೀರುತ್ತವೆ. ನಮ್ಮ ಭಾವನೆಗಳು, ನಮ್ಮ ಆತ್ಮೀಕ ಮಾನಸಿಕ ಮತ್ತು ಸ್ಥಿತಿಗಳ ಮೇಲೆ ಪರಿಣಾಮ ಬೀರುತ್ತದೆ.

- ✓ ನಮ್ಮ ಕಲ್ಪನೆಗಳು ನಮ್ಮನ್ನು ಚೈತನ್ಯಗೊಳಿಸಬಹುದು ಅಥವಾ ಹಾಳುಮಾಡಬಹುದು.

- ✓ ನಮ್ಮ ಮಾನಸಿಕ ಸಹಜಶಕ್ತಿ ( ತಿಳುವಳಿಕೆ, ಕೇಂದ್ರಿಕರಣ, ಕಲ್ಪನೆ, ನೆನಪು ಮತ್ತು ಕಾರಣ, ಕಲಿಕೆಯ ಸಾಮರ್ಥ್ಯ) ಬಹಳ ಪ್ರಾಮುಖ್ಯವಾಗಿದೆ.

- ✓ ನಮ್ಮ ಆತ್ಮಗಳಲ್ಲಿ ಇರುವಂತದ್ದು ಸಾಮಾನ್ಯವಾಗಿ ನಮ್ಮ ಪ್ರಾಣಗಳು ಮತ್ತು ದೇಹಗಳ ಮೂಲಕ ಬಿಡುಗಡೆಗೊಳ್ಳುತ್ತವೆ.

- ✓ ನಮ್ಮ ಮಾನಸಿಕ ಸಹಜಶಕ್ತಿಗಳನ್ನು ನಮ್ಮೊಂದಿಗೆ ಆತನ ಸಂಪರ್ಕದ ಪ್ರಕ್ರಿಯೆಯಲ್ಲಿ-ಆಲೋಚನೆಗಳು, ವಿಚಾರಗಳು, ಚಿತ್ರಗಳು, ದರ್ಶನಗಳು ಮತ್ತು ಕನಸ್ಸುಗಳನ್ನು ದೇವರ ಉಪಯೋಗಿಸುತ್ತಾನೆ.

## 2.3. ಮನಸ್ಸಿನ ತೊಂದರೆಯ ಕ್ಷೇತ್ರಗಳು

ಅನೇಕ ಪ್ರಮಾಣಿಕ ವಿಶ್ವಾಸಿಗಳು ಆ ನಿಯಂತ್ರಿತ ಉದ್ದೇಶವನ್ನು ಹೊಂದಿದ್ದಾರೆ. ನಿರ್ಧಿಷ್ಟ, ಪಾಪಗಳು, ವ್ಯಸನಗಳು, ಹೋರಾಟಗಳು ಮತ್ತು ಬಂಧನಗಳಿಂದ ಹೊರಬರಲು ಸಾಧ್ಯವಾಗುತ್ತಿಲ್ಲ. ಅನೇಕ ವಿಶ್ವಾಸಿಗಳು, ಪ್ರಾಥಮಿಕವಾಗಿ ಮನಸ್ಸಿನೊಡನೆ ಸಂಪರ್ಕಿಸುವ ಇತರೆ ತೊಂದರೆಗಳಲ್ಲಿ ಬಾಧೆ ಪಡುತ್ತಿದ್ದಾರೆ.

- ಭಯ (ಜನರು, ಪರಿಸ್ಥಿತಿಗಳು, ಅಸ್ತಿತ್ವ-ಇಲ್ಲದಿರುವ ಸಂಗತಿಗಳು ಮುಂತಾದವು)
- ಏಕಾಗ್ರತೆಯ ಕೊರತೆ (ಅಲೆದಾಡುವ ಮನಸ್ಸು)
- ಗೊಂದಲಗಳು (ಎರಡು ಮನಸ್ಥಿಗಳು, ವಿಚಲ)
- ಕಳಪೆ ಸ್ವ-ಚಿತ್ರಣ (ಸಾಧಾರಣ ಸ್ವ-ಮಾರ್ಯದೆ)
- ನಿರಾಕರಣೆ
- ವಂಚನೆಗಳು ಮತ್ತು ತರ್ಕ
- ಭದ್ರವಾದ ಹಿಡಿತಗಳು ಮತ್ತು
- ಮನಸ್ಸಿನ ಖಾಯಿಲೆಗಳು (ಖಿನ್ನತೆ, ಚಿತ್ತಭ್ರಮೆ, ಮನೋವ್ಯಾಧಿ ಅಥವಾ ಒಡಕು ಮನಸ್ಸು ಮುಂತಾದವು).

## ಕ್ರಿಯೆಯ ಅಂಶ

ಪ್ರಸ್ತುತದಲ್ಲಿ ನೀವು ಎದುರಿಸುತ್ತಿರುವಂತಹ ಮೂರು ದೊಡ್ಡ ತೊಂದರೆಗಳನ್ನು ಬರೆಯಿರಿ.

## 2.4. ಮನಸ್ಸಿನ ಮೂರು ಸ್ಥಿತಿಗಳು

ನೈಸರ್ಗಿಕ ಮನಸ್ಸು, ಲೌಕಿಕ ಮನಸ್ಸು, ನವೀಕೃತ(ಆತ್ಮಿಕ) ಮನಸ್ಸು ಮನಸ್ಸಿನ ಮೂರು ಸ್ಥಿತಿಗಳು

## 2.4.1. ನೈಸರ್ಗಿಕ ಮನಸ್ಸು

**1 ಕೊರಿಂಥದವರಿಗೆ 2:4**
**ಪ್ರಾಕೃತ ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ. ಅವು ಅವನಿಗೆ ಹುಚ್ಚು ಮಾತಾಗಿ ತೋರುತ್ತವೆ ಅವು ಆತ್ಮ ವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು.**

ಇಲ್ಲಿ "ಪ್ರಾಕೃತ ಮನುಷ್ಯನ ತಿಳುವಳಿಕೆ" ಪ್ರತಿಯಾಗಿ "ಆತ್ಮಿಕ ತಿಳುವಳಿಕೆಯ" (ಸೂಕ್ಷ್ಮದೃಷ್ಟಿ) ಸತ್ಯವೇದದಲ್ಲಿನ ವ್ಯತಿರಕ್ತತೆಗಳನ್ನು ನೋಡುತ್ತೇವೆ. ಪ್ರಾಕೃತ ಮನುಷ್ಯನು ಅವನ ಪ್ರಾಕೃತ ಮನಸ್ಸಿನಿಂದ ಜೀವಿಸುತ್ತಾನೆ.

-ಆತ್ಮನ ವಿಷಯಗಳನ್ನು ಅವನ ಹೃದಯಕ್ಕೆ ಅನುಮತಿಸುವುದಿಲ್ಲ (ಯಾಕೆಂದರೆ ಅವುಗಳನ್ನು ಮೂರ್ಖತನವುಗಳೆಂದು ಪರಿಗಣಿಸುತ್ತಾನೆ.)

-ಆತ್ಮನ ಸಂಗತಿಗಳನ್ನು ತಿಳಿದುಕೊಳ್ಳಲು (ಗ್ರಹಿಸಲು, ಅರಿತುಕೊಳ್ಳಲು). ಶಕ್ತನಾಗಿರುವುದಿಲ್ಲ. (ಯಾಕೆಂದರೆ ಅವುಗಳು ಆತ್ಮಿಕವಾಗಿ ಗ್ರಹಿಸುವುದು. ಆತ್ಮನ ಸಹಾಯದೊಡನೆ ಪ್ರಶ್ನಿಸು, ಕೇಳಿತಿಳಿ, ವಿಚಾರಣೆ ಮಾಡು, ತನಿಖೆಮಾಡು, ಪರೀಕ್ಷಿಸುವುದು ಆಗಿದೆ.

## 2.4.2. ಲೌಕಿಕ ಮನಸ್ಸು

**ರೋಮಾಪುರದವರಿಗೆ 8:5-7**
**5 ಶರೀರಭಾವವನ್ನು ಅನುಸರಿಸುವವರು ಅದಕ್ಕೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ. ಪವಿತ್ರಾತ್ಮನನ್ನು ಅನುಸರಿಸುವವರು ಪವಿತ್ರಾತ್ಮನಿಗೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ**
**6 ಶರೀರಭಾವದವುಗಳ ಮೇಲೆ ಮನಸ್ಸಿಡುವದು ಮರಣ ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವುದು ಜೀವವೂ ಮನಶ್ಯಾಂತಿಯೂ ಆಗಿದೆ.**
**7 ಯಾಕೆಂದರೆ ಶರೀರಭಾವದವುಗಳ ಮೇಲೆ ಮನಸ್ಸಿಡುವದು ದೇವರಿಗೆ ಶತ್ರುತ್ವವು ಅಂಥ ಮನಸ್ಸು ದೇವರ ನಿಯಮಕ್ಕೆ ಒಳಪಡುವದೂ ಇಲ್ಲ.**

ಶರೀರ (ಗ್ರೀಕನಲ್ಲಿ ಸಾರ್ಕ್ಸ್ sarx ) – ಪ್ರಾಕೃತ ಹಸಿವುಗಳು, ಅನುರಾಗಗಳು, ಮತ್ತು ಶಾರೀರಿಕ ಇಚ್ಛೆಗಳನ್ನು ಉಲ್ಲೇಖಿಸುತ್ತದೆ.

ಲೌಕಿಕವಾಗಿ-ಗ್ರೀಕ್ ನಲ್ಲಿ ಸಾರ್ಕ್ಸ್ (sarx)

ದೇಹ- ಗ್ರೀಕ್ ನಲ್ಲಿ ಸೋಮಾ (soma).

| ***ಲೌಕಿಕ ಮನಸ್ಸು*** | ***ಆತ್ಮಿಕ ಮನಸ್ಸು*** |
|---|---|
| | |
| *ಮನಸ್ಸು(ಅಂದರೆ , ಆಸಕ್ತಿ,ಸ್ವತಃ ಮನರಂಜನೆ, ರುಚಿ, ಯೋಚಿಸು )* | *ಆತ್ಮನ ವಿಷಯಗಳ ಕುರಿತ ಮನಸ್ಸು* |
| *ಶರೀರದ ವಿಷಯಗಳು* | |
| *ಮರಣ ತರುತ್ತದೆ* | *ಜೀವ ಮತ್ತು ಶಾಂತಿ ತರುತ್ತದೆ.* |
| *ದೇವರಿಗೆ ವಿರುದ್ಧ ಶತ್ರುತ್ವ* | |
| *ದೇವರ ನಿಬಂಧನೆಗೆ ಅಧೀನವಲ್ಲ* | |
| *ದೇವರನ್ನು ಮೆಚ್ಚಿಸುವುದಿಲ್ಲ* | |

**1 ಕೊರಿಂಥದವರಿಗೆ 3:1-3**
**1 ಸಹೋದರರೇ ನೀನಂತೂ ದೇವರಾತ್ಮನಿಂದ ನಡಿಸಿಕೊಳ್ಳುವವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡಲಾರದೆ ಪ್ರಾಪಂಚಿಕರೂ ಕ್ರಿಸ್ತನ ವಿಷಯದಲ್ಲಿ ಎಳೆಗೂಸುಗಳೂ ಆಗಿರುವಂಥವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡಬೇಕಾಯಿತು**
**2 ನಿಮಗೆ ಹಾಲು ಕುಡಿಸಿದೆನು. ಅನ್ನಾ ಕೊಡಲಿಲ್ಲ ಅನ್ನಾ ತಿನ್ನುವದಕ್ಕೆ ನಿಮಗೆ ಇನ್ನೂ ಶಕ್ತಿ ಇರಲಿಲ್ಲ ಈಗಲಾದರೂ ಶಕ್ತಿಯಿಲ್ಲ**
**3 ಯಾಕೆಂದರೆ ಇನ್ನೂ ಶರೀರಾಧೀನ ಸ್ವಭಾವವುಳ್ಳವರಾಗಿದ್ದೀರಿ. ನಿಮ್ಮೊಳಗೆ ಹೊಟ್ಟೆ ಕಿಚ್ಚು ಜಗಳುಗಳು ಇರುವಲ್ಲಿ ನೀವು ಶರೀರಾಧೀನ ಸ್ವಭಾವವುಳ್ಳವರಾಗಿದ್ದು ಕೇವಲ ನರಪ್ರಾಣಿಗಳಂತೆ ನಡೆಯುತ್ತೀರಲ್ಲವೇ.**

- ✓ ಪ್ರಾಪಂಚಿಕ ಮನಸ್ಸು "ಕ್ರಿಸ್ತನಲ್ಲಿನ ಶಿಶುಗಳ" ಆತ್ಮಿಕ ಗುಣಲಕ್ಷಣಗಳಾಗಿವೆ.
- ✓ ಪ್ರಾಪಂಚಿಕ ಮನಸ್ಸು ದೇವರ ವಾಕ್ಯದಿಂದ ಗಟ್ಟಿಯಾದ ಮಾಂಸವನ್ನು ಪಡೆಯಲು ಅಶಕ್ತವಾಗಿದೆ.

- ✓ ಪ್ರಾಪಂಚಿಕ ಮನಸ್ಸು ಜಗಳ, ಅಸೂಯೆ, ಸ್ಪರ್ಧೆ, ಮತ್ತು ವಿಭಾಗಗಳಿಗೆ (ಗುಂಪುಗಳು) ನಮ್ಮನ್ನು ನಡೆಸುತ್ತದೆ.
- ✓ ಪ್ರಾಪಂಚಿಕ ಮನಸ್ಸು ದೇವರ ಜನರುಗಳಾಗಿರುವ ಬದಲಿಗೆ "ಮನುಷ್ಯ ಮಾತ್ರವೇ" ಆಗಿ ಜೀವಿಸಲು ಕಾರಣವಾಗುತ್ತದೆ.

## 2.4.3. ನವೀಕೃತ ಮನಸ್ಸು(ಆತ್ಮಿಕ ಮನಸ್ಸು)

**ರೋಮಾಪುರದವರಿಗೆ 12:2**
**ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮ ವಾದದ್ದು ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳಿಕೊಳ್ಳುವಿರಿ.**

ನಿಮ್ಮ ಮನಸ್ಸನ್ನು(ಗ್ರೀಕ್‌ನಲ್ಲಿ ನೌಸ್(nous), ಬುದ್ಧಿಶಕ್ತಿ, ತಿಳುವಳಿಕೆ) ನವೀಕರಿಸುವ ಮೂಲಕ (ನವೀಕರಣ, ಸುಧಾರಣೆ) ರೂಪಾಂತರಗೊಳಿಸಬೇಕು(ಗ್ರೀಕನಲ್ಲಿ ಮೆಟಮೊರಿಫೋವ್-metomorphoo)

ನವೀಕೃತಗೊಂಡ ಒಂದು ಮನಸ್ಸು "ಆತ್ಮಿಕ ಮನಸ್ಸಿಗೆ" ಸಮನಾರ್ಥಕವೆಂದು ಪರಿಗಣಿಸಬೇಕು.

## ಕ್ರಿಯೆಯ ಅಂಶ

ಒಂದು ಪ್ರಾಕೃತ ಮನಸ್ಸು, ಒಂದು ಲೌಕಿಕ ಮನಸ್ಸು, ಮತ್ತು ಒಂದು ನವೀಕೃತ ಮನಸ್ಸಿನಿಂದ ಸರಿಸುಮಾರು ಎಷ್ಟು ಸಮಯವನ್ನು ನೀವು ನಿರ್ವಹಿಸುತ್ತೀರಿ ಎಂಬುದನ್ನು ಬರೆದಿಟ್ಟುಕೊಳ್ಳಿರಿ ಮತ್ತು ನೀವೇ ನಿರ್ಣಯಿಸಿಕೊಳ್ಳಿರಿ

ಪ್ರಾಕೃತ____________%

ಲೌಕಿಕ____________%

ನೂತನ___________%

# 3 ಮನಸ್ಸು ಒಂದು ಯುದ್ಧಭೂಮಿ

## 3.1. ಆತ್ಮದ ಮೇಲೆ ಯುದ್ಧಮಾಡುವ ಶಾರೀರಿಕ ಅಭಿಲಾಷೆಗಳು

**1 ಪೇತ್ರನು 2:11**
**ಪ್ರಿಯರೇ ಪ್ರವಾಸಿಗಳೂ ಪರದೇಶಸ್ಥರೂ ಆಗಿರುವ ನೀವು ನಿಮ್ಮ ಆತ್ಮದ ಮೇಲೆ ಯುದ್ಧ ಮಾಡುವ ಶಾರೀರಕ ಅಭಿಲಾಷೆಗಳಿಗೆ ದೂರವಾಗಿರಬೇಕೆಂದು ನಿಮ್ಮನ್ನು ಎಚ್ಚರಿಸುತ್ತೇವೆ.**

ಶಾರೀರಿಕ ಅಭಿಲಾಷೆಗಳಿಗೆ ಒಳಗಾಗಿರುವುದು ಆತ್ಮಕ್ಕೆ ತೊಂದರೆಯನ್ನುಂಟು ಮಾಡುತ್ತದೆ. ನಾವು ಮಾಡುವಂತಹದ್ದರಿಂದ ಮನಸ್ಸು, ಚಿತ್ತ ಮತ್ತು ಭಾವನೆಗಳು ಹಾನಿಗೊಳಗಾಗುತ್ತವೆ. ಉದಾಹರಣೆಗೆ, ಒಬ್ಬ ವ್ಯಕ್ತಿಯು ಏಕಾಗ್ರತೆಯಿಂದ ಒಂದೆಡೆ ಗಮನ ಹರಿಸುವ ಸಾಮರ್ಥ್ಯ ಅಥವಾ ಆಲೋಚನೆಯಲ್ಲಿ-ತೀವ್ರವಾಗಿ ಚರ್ಚೆಯಲ್ಲಿ ತೊಡಗಿಸಿಕೊಳ್ಳುವ ಸಾಮರ್ಥ್ಯವು ಅವನ ತಪ್ಪು ವೈಯಕ್ತಿಕ ಹವ್ಯಾಸಗಳಿಂದ ಬಲಹೀನವಾಗಬಹುದು. ಒಂದು ಆತ್ಮಕ ದೃಷ್ಟಿಕೋನದಿಂದ ಇನ್ನಷ್ಟು ನೋಡುವುದಾದರೆ, ಪಾಪಯುತ ಜೀವನಶೈಲಿಯ ಮಾದರಿಗಳು ನಮ್ಮ ಆತ್ಮದ ಕ್ಷೇತ್ರದ ಮೇಲೆ ದುಷ್ಟ ಆತ್ಮಗಳು ತೊಂದರೆಪಡಿಸುವ ಅಥವಾ ಅದರ ಮೇಲೆ ನಿಯಂತ್ರಣ ಹೊಂದುವ ಮತ್ತು ಕಿರುಕುಳ ನೀಡುವಂತಹ ಬಾಗಿಲುಗಳನ್ನು ತೆರೆಯುತ್ತವೆ.

**ಜ್ಞಾನೋಕ್ತಿಗಳು 6:32,33**
**32 ವ್ಯಭಿಚಾರಿಯೋ ಕೇವಲ ಬುದ್ಧಿ ಶೂನ್ಯನು, ಇಂಥಾಕಾರ್ಯವನ್ನು ಮಾಡುವವನು ತನ್ನನ್ನೇ ನಾಶಪಡಿಸಿಕೊಳ್ಳುವನು**
**33 ಅವನಿಗೆ ಗಾಯವೂ ಅವಮಾನವೂ ಆಗುವವು ಅವನ ಕೆಟ್ಟ ಹೆಸರು ಎಂದಿಗೂ ಅಳಿಸಲ್ಪಡದು.**

ವ್ಯಭಿಚಾರ ಮಾಡುವುದು ಮನಸ್ಸು, ಚಿತ್ತ ಮತ್ತು ಭಾವನೆಗಳನ್ನು ನಾಶಗೊಳಿಸುತ್ತದೆ (ಹಾಳುಮಾಡು, ಭ್ರಷ್ಟಗೊಳಿಸುತ್ತದೆ ನಶಿಸುತ್ತದೆ).

## 3.2. ಶೋಧನೆಯ ಪ್ರಕಿಯೆ

**ಯಾಕೋಬನು 1:13-16**
**13 ಯಾವನಾದರೂ ಪಾಪಮಾಡುವದಕ್ಕೆ ಪ್ರೇರೇಪಿಸಲ್ಪಡುವಾಗ ಈ ಪ್ರೇರಣೆಯು ನನಗೆ ದೇವರಿಂದ ಉಂಟಾಯಿತೆಂದು ಹೇಳಬಾರದು ದೇವರು ಕೆಟ್ಟದ್ದಕ್ಕೇನೂ ಸಂಬಂಧಪಟ್ಟವನಲ್ಲ ಆತನು ಯಾರನ್ನು ಪಾಪಕ್ಕೆ ಪ್ರೇರೇಪಿಸುವದಿಲ್ಲ**

**14 ಆದರೆ ಪ್ರತಿಯೊಬ್ಬನೂ ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರುಳುಗೊಂಡವನಾಗಿ, ಪ್ರೇರೇಪಿಸಲ್ಪಡುತ್ತಾನೆ**
**15 ಆಮೇಲೆ ಆಶೆಯು ಬಸುರಾಗಿ ಪಾಪವನ್ನು ಹೆರುತ್ತದೆ. ಪಾಪವು ತುಂಬಾ ಬೆಳೆದು ಮರಣವನ್ನು ಹಡೆಯುತ್ತದೆ**
**16 ನನ್ನ ಪ್ರಿಯಸಹೋದರರೇ ಮೋಸಹೋಗಬೇಡಿರಿ.**

- ✓ ನಮ್ಮ ಸ್ವಂತ ಇಚ್ಛೆಗಳಿಂದ ಸೆಳೆಯಲ್ಪಟ್ಟಿದ್ದೇವೆ. ಸೆಳೆಯಲ್ಪಟ್ಟಿದ್ದೇವೆ.
- ✓ ಮರುಳುಗೊಂಡವವನಾಗು-ನಮ್ಮ ಚಿತ್ತಗಳು ಬಲಹೀನಗೊಂಡಿರುತ್ತವೆ. ಗ್ರೀಕ್‌ನಲ್ಲಿ “ಬಲೆಯಲ್ಲಿ ಸಿಕ್ಕಿಸು” ಎಂಬುದಾಗಿ ಅರ್ಥ.
- ✓ ಆಶೆಯು ಬಸುರಾಗಿ- ಆಶಾಪಾಶಗಳಿಗೆ ಒಳಗಾಗಿದೆ. ಇದು ಪಾಪದ ಫಲಿತಾಂಶ ನೀಡುತ್ತದೆ.

ಯಾವುದಾದರೂ ತಪ್ಪಾದದ್ದಕ್ಕೆ ನಮ್ಮ ಆಸೆಗಳು ಎಬ್ಬಿಸಲ್ಪಟ್ಟಿದ್ದರೆ ಮತ್ತು ನಮ್ಮ ಆಸೆಗಳಿಂದ ಸೆಳೆಯಲ್ಪಟ್ಟಿದ್ದರೆ ಇನ್ನೂ ಅದು ಪಾಪವಲ್ಲ. ನಾವು ಮರಳುಗೊಳ್ಳುವಂತಹ ಸಮೀಪಕ್ಕೆ ಬರಬಹುದು- ಅದು ಇನ್ನೂ ಸಹ ಪಾಪವಲ್ಲ. ಯಾವಾಗ ನಾವು ಆಶಾಪಾಶಗಳಿಗೆ ಶರಣಾಗುತ್ತೇವೊ ಆಗ ನಾವು ಪಾಪ ಮಾಡಿದವರಾಗುತ್ತೇವೆ.

ಅನೇಕ ಕ್ರೈಸ್ತರುಗಳು ಅವರಲ್ಲಿ ಎಬ್ಬಿಸಲ್ಪಟ್ಟಂತಹ ತಪ್ಪಾದ ಆಸೆಗಳಿಗೆ ಅನಗತ್ಯವಾಗಿ ತಮ್ಮನ್ನು ತಾವೇ ಖಂಡಿಸಿಕೊಳ್ಳುತ್ತಾರೆ. ಇದು ಸ್ವತಃ ಪಾಪವಲ್ಲ. ಅಂತಹ ಆಸೆಗಳಿಗೆ ಅವರು ಒಳಗಾಗುವಾಗ, ಅಂದರೆ ಒಂದು ತಪ್ಪು ಕೃತ್ಯ ಮಾಡುವಾಗ ಇಲ್ಲವೇ ಅಂತಹ ಆಸೆಗಳನ್ನು ಚಿತ್ತಪೂರ್ವಕವಾಗಿ ಉದ್ದಕ್ಕೂ ಆಲೋಚಿಸುತ್ತಿದ್ದರೆ ಅವರು ಪಾಪ ಮಾಡಿದವರಾಗುತ್ತಾರೆ.

## 3.3. ಸೈತಾನನ ತಂತ್ರೋಪಾಯಗಳನ್ನು ಬಹಿರಂಗಪಡಿಸುವುದು

ಸೈತಾನನ ಸಂಚುಗಳು ಪ್ರಾಥಮಿಕವಾಗಿ ಇವುಗಳನ್ನು ಒಳಗೊಂಡಿರುತ್ತವೆ:

### 3.3.1. ವಂಚನೆಗಳು

**2 ಕೊರಿಂಥದವರಿಗೆ 11:3**
**ಆದರೆ ಹೇಗೆ ಹವ್ವಳು ಸರ್ಪದ ಕುಯುಕ್ತಿಗೆ ಒಳಬಿದ್ದು ಮೋಸಹೋದಳೋ ಹಾಗೆಯೇ ನಿಮ್ಮ ಮನಸ್ಸು ಕ್ರಿಸ್ತನ ವಿಷಯದಲ್ಲಿರಬೇಕಾದ ಯಥಾರ್ಥತ್ವವನ್ನೂ ಪಾತಿವ್ರತ್ಯವನ್ನೂ ಬಿಟ್ಟು ಕೆಟ್ಟು ಹೋದಿತೆಂದು ನನಗೆ ಭಯವುಂಟು ಸೈತಾನನು ಹವ್ವಳನ್ನು ಮೋಸಗೊಳಿಸಿದನು (ಸಂಪೂರ್ಣವಾಗಿ ಪಾತವ್ರತ್ಯ ಕೆಡಿಸಿದನು) ಸೈತಾನನ ಅವನ ಕುಯುಕ್ತಿಗಳಿಂದ ನಮ್ಮ ಮನಸ್ಸುಗಳನ್ನು ಕೆಡಿಸಲು ಮತ್ತು ಮೋಸಗೊಳಿಸಲು ಪ್ರಯತ್ನಿಸುತ್ತಾನೆ.**

ಮನಸ್ಸಿನ ವಿಜಯ

ಸೈತಾನನು ಒಬ್ಬ ಮೋಸಗಾರ ಮತ್ತು ಸತ್ಯದಂತೆಯೇ ಕಾಣುವಂತಹ ಒಂದು ಸುಳ್ಳನ್ನು ಹೇಳುವುದರಿಂದ ಸತ್ಯದಿಂದ ನಮ್ಮನ್ನು ದೂರ ಸೆಳೆಯಲು ಪ್ರಯತ್ನಿಸುತ್ತಾನೆ.

**ಯೋಹಾನ 8:44**
**ನೀವು ಆ ತಂದೆಯಿಂದ ಹುಟ್ಟಿದವರಾಗಿದ್ದು ನಿಮ್ಮ ತಂದೆಯ ದುರಿಚ್ಛೆಗಳನ್ನೇ ನಡಿಸಬೇಕೆಂದಿದ್ದೀರಿ ಅವನು ಆದಿಯಿಂದಲೂ ಕೊಲೆಗಾರನಾಗಿದ್ದು ಸತ್ಯದಲ್ಲ ನಿಲ್ಲಲಿಲ್ಲ ಅವನಲ್ಲಿ ಸತ್ಯವು ಇಲ್ಲವೇ ಇಲ್ಲ ಅವನು ಸುಳ್ಳಾಡುವಾಗ ಸ್ವಭಾವಾನುಸಾರವಾಗಿ ಆಡುತ್ತಾನೆ. ಅವನು ಸುಳ್ಳುಗಾರನೂ ಸುಳ್ಳಿಗೆ ಮೂಲಪುರುಷನೂ ಆಗಿದ್ದಾನೆ.**

ಸೈತಾನನು ಸುಳ್ಳಿಗೆ ತಂದೆ ಎಂಬುದಾಗಿ ಕರೆಯಲ್ಪಡುತ್ತಾನೆ.

**ರೋಮಾಪುರದವರಿಗೆ 12:9**
**ಭೂಲೋಕದವರನ್ನೆಲ್ಲಾ ಮರುಳುಗೊಳಿಸುವ ಆ ಮಹಾ ಘಟಸರ್ಪನು ಅಂದರೆ ಪಿಶಾಚನೆಂತಲೂ ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪವು ದೊಬ್ಬಲ್ಪಟ್ಟು ಭೂಮಿಗೆ ಬಿದ್ದನು**.

ಸಂಪೂರ್ಣ ಪ್ರಪಂಚವನ್ನು ಅವನು ಮೋಸಗೊಳಿಸುತ್ತಾನೆ.

## 3.3.2. ಆಪಾದನೆಗಳು

ಸೈತಾನ (ಗ್ರೀಕ್‌ನಲ್ಲಿ-ಸತಾನಾಸ್-satanas) ಆರೋಪಗಾರನು

ಸೈತಾನನು.ಸಹೋದರರ ಆರೋಪಗಾರನಾಗಿದ್ದಾನೆ.

**ಪ್ರಕಟನೆ 12:9,10**
**9ಭೂಲೋಕದವರನ್ನೆಲ್ಲಾ ಮರುಳುಗೊಳಿಸುವ ಆ ಮಹಾ ಘಟಸರ್ಪವು ಅಂದರೆ ಪಿಶಾಚನೆಂತಲೂ ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪವು ದೊಬ್ಬಲ್ಪಟ್ಟು ಭೂಮಿಗೆ ಬಿದ್ದನು**
**10ಅವನ ದೂತರೂ ಅವನೊಂದಿಗೆ ದೂಬ್ಬಲ್ಪಟ್ಟರು ಆಗ ಪರಲೋಕದಲ್ಲಿ ಮಹಾ ಶಬ್ದವನ್ನು ಕೇಳಿದೆನು ಅದು ಈಗ ಜಯವೂ ಶಕ್ತಿಯೂ ರಾಜ್ಯವೂ ನಮ್ಮ ದೇವರಿಗೆ ಉಂಟಾಯಿತು. ಆತನು ಅಭಿಷೇಕಿಸಿದವನ ಅಧಿಕಾರವು ಈಗ ಸ್ಥಾಪಿತವಾಯಿತು. ಹಗಲಿರುಳು ನಮ್ಮ ಸಹೋದರನ ಮೇಲೆ ನಮ್ಮ ದೇವರ ಮುಂದೆ ದೂರು ಹೇಳಿದ ದೂರುಗಾರನು ದೊಬ್ಬಲ್ಪಟ್ಟಿದ್ದಾನೆ.**

ಸೈತಾನನು ನಮ್ಮ ವಿರುದ್ಧವಾಗಿ ಆರೋಪಗಳನ್ನು ಹಾಕುವ ಮೂಲಕವಾಗಿ ನಮ್ಮ ಮನುಸ್ಸುಗಳ ವಿರೋಧವಾಗಿ ಕಾರ್ಯಮಾಡುತ್ತಾನೆ.

ಅನೇಕ ವಿಶ್ವಾಸಿಗಳು ಒಂದು ಬಡ “ ಆತ್ಮಿಕ ಸ್ವ-ಸ್ವರೂಪ” ದಿಂದ ಬಳಲುತಿದ್ದಾರೆ. ಯಾವಾಗಲೂ ತಮ್ಮನ್ನು ತಾವೇ “ಪಾಪಿಗಳು, ತುಂಬಾ ಅಯೋಗ್ಯವೂ, ಅಶುದ್ದರು ಮತ್ತು ಅನರ್ಹರು, ಖಂಡನೆಯ ದೃಷ್ಟಿಯಿಂದ ನೋಡಿಕೊಳ್ಳುತ್ತಾರೆ. ಆದ್ದರಿಂದ ಇಂತಹ ಅನೇಕವಾದಂತವುಗಳು ವಿಶ್ವಾಸಿಗಳ ಮನಸ್ಸಿನ ಮೇಲೆ ಕಾರ್ಯ ಮಾಡುವ ದುಷ್ಟನ ಆತ್ಮಗಳ ಆಪಾದನೆಯಿಂದ ಸಾಮಾನ್ಯವಾಗಿ ಕಿಡಿಹೊತ್ತಿಸಲ್ಪಟ್ಟಿರುತ್ತವೆ. ವಿಶ್ವಾಸಿಗಳು ತಮಗೆ ಅರಿವಿಲ್ಲದೆ ಇಂತಹ ಆಲೋಚನೆಗಳನ್ನು ಅಂಗೀಕರಿಸುತ್ತಾರೆ. ಮತ್ತು ತಮ್ಮನ್ನು ಹಾಗೆಯೇ ಭಾವಿಸಿಕೊಳ್ಳುತ್ತಾರೆ. ಇದು ಅವರನ್ನು ಬಲಹೀನರಾಗಿ, ಅಪ್ರೇರಿತರಾಗಿ, ಸ್ವ-ಅನುಕಂಪದ ಸ್ಥಿತಿಯಲ್ಲ ಯಾವಾಗಲೂ ಇರುವಂತೆ ಖಂಡಿಸಿಕೊಂಡವರಾಗಿ, ಹಲವಾರು ಸಾರಿ ಅದೇ ಪಾಪದ ಕುರಿತು ಪಶ್ಚಾತ್ತಾಪಪಡುವುದು ಮುಂತಾದವುಗಳಿಗೆ ಒಳಪಡಿಸುತ್ತವೆ.

## 3.3.3 ಶೋಧನೆಗಳು

**1 ಥೆಸಲೋನಿಕದವರಿಗೆ 3:5**
**ಆದದರಿಂದ ನಾನು ಇನ್ನು ತಡೆಯಲಾರದೆ ಒಂದು ವೇಳೆ ಶೋಧಕನು ನಿಮ್ಮನ್ನು ಶೋಧಿಸಿದ್ದರಿಂದ ನಮ್ಮ ಪ್ರಯಾಸವು ವ್ಯರ್ಥವಾಯಿತೋ ಏನೋ ಎಂದು ನಿಮ್ಮ ನಂಬಿಕೆಯ ವಿಷಯದಲ್ಲಿ ತಿಳಿದುಕೊಳ್ಳುವದಕ್ಕೆ ಅವನನ್ನು ಕಳುಹಿಸಿದೆನು**.

**ಮತ್ತಾಯ 4:3**
**ಆಗ ಆ ಶೋಧಕನು ಆತನ ಬಳಿಗೆ ಬಂದು ನೀವು ದೇವರ ಮಗನಾಗಿದ್ದರೆ ಈಕಲ್ಲುಗಳ ರೊಟ್ಟಿಯಾಗುವಂತೆ ಅಪ್ಪಣೆಕೊಡು ಎಂದು ಹೇಳಲು**

ಸೈತಾನನು ಶೋಧಕನು, ನಮ್ಮನ್ನು ಮೋಹಕ್ಕೆ ಸಿಲುಕಿಸಲು ಪ್ರಯತ್ನಿಸುತ್ತಾನೆ ಮತ್ತು ದೇವರ ಗುಣಮಟ್ಟದಿಂದ ದೂರ ಸೆಳೆಯುತ್ತಾನೆ. ಹೀಗೆ ಪಾಪಕ್ಕೆ ನಮ್ಮನ್ನು ನಡೆಸುತ್ತಾನೆ.

## 3.4. ವೈರಿಯು ನಮ್ಮನ್ನು ಹೇಗೆ ಶೋಧಿಸುತ್ತಾನೆ ಎಂಬುದನ್ನು ತಿಳಿಯುವುದು

**2 ಕೊರಿಂಥದವರಿಗೆ 2:11**
**ಸೈತಾನನು ನಮ್ಮನ್ನು ವಂಚಿಸಿ ನಷ್ಟ ಪಡಿಸಬಾರದು ಅವನ ಯೋಚನೆಗಳನ್ನು ನಾವು ಅರಿಯದವರಲ್ಲವಲ್ಲಾ**.

ಸಾಧನಗಳು (ಗ್ರೀಕ್‌ನಲ್ಲಿ ನೊಎಮ(noema ) ಒಂದು ಗ್ರಹಿಕೆ, ಬುದ್ದಿಶಕ್ತಿ, ಪ್ರವೃತ್ತಿ, ಸಾಧನ, ಮನಸ್ಸು ಆಲೋಚನೆ, ಮನಸ್ಸಿನ ಸಂಚು.

ಮನಸ್ಸಿನ ವಿಜಯ

ಸೈತಾನನ ಸಂಚುಗಳು ನಿಜವಾಗಿಯು ಮನಸ್ಸಿನ ಆಟಗಳು ಅವುಗಳ ಮನಸ್ಸಿಗೆ ವಿರುದ್ಧವಾಗಿ ದಾಳಿಗಳನ್ನು ಮಾಡಬೇಕು.

**ಇಬ್ರಿಯರಿಗೆ 4:15**
**ಯಾಕೆಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು. ಪಾಪ ಮಾತ್ರ ಮಾಡಲಿಲ್ಲ.**

ಯೇಸುವು ಎಲ್ಲಾ ಕ್ಷೇತ್ರಗಳಲ್ಲೂ ಶೋಧಿಸಲ್ಪಟ್ಟನು, ಮತ್ತ ಅದೇ ರೀತಿಯಲ್ಲಿಯೇ ನಾವು ಸಹ ಶೋಧಿಸಲ್ಪಡುತ್ತೇವೆ.

**ಲೂಕ 4:1-13**
**1 ಯೇಸು ಪವಿತ್ರಾತ್ಮ ಭರಿತನಾಗಿ ಯೊರ್ದನ್ ಹೊಳೆಯಿಂದ ಹಿಂತಿರುಗಿ ದೇವರಾತ್ಮನಿಂದ ನಾಲ್ವತ್ತು ದಿವಸ ಅಡವಿಯಲ್ಲಿ ನಡಿಸಲ್ಪಡುತ್ತಾ**
**2 ಸೈತಾನನಿಂದ ಶೋಧಿಸಲ್ಪಟ್ಟನು. ಆ ದಿವಸಗಳಲ್ಲಿ ಆತನು ಏನೂ ತಿನ್ನಲಿಲ್ಲ. ಅವು ಕಳೆದ ಮೇಲೆ ಆತನಿಗೆ ಹಸಿವಾಯಿತು.**
**3 ಆಗ ಸೈತಾನನು ಆತನಿಗೆ ನೀನು ದೇವರ ಮಗನಾಗಿದ್ದರೆ ಈ ಕಲ್ಲು ರೊಟ್ಟಿಯಾಗುವಂತೆ ಇದಕ್ಕೆ ಅಪ್ಪಣೆ ಕೊಡು ಎಂದು ಹೇಳಲು**
**4 ಯೇಸು ಅವನಿಗೆ ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವದಿಲ್ಲ ಎಂದು ಬರೆದದೆ ಎಂತ ಉತ್ತರಕೊಟ್ಟನು**
**5 ಬಳಿಕ ಸೈತಾನನು ಆತನನ್ನು ಮೇಲಕ್ಕೆ ಕರೆದುಕೊಂಡು ಹೋಗಿ ಕ್ಷಣ ಮಾತ್ರದಲ್ಲಿ ಲೋಕದ ಎಲ್ಲಾ ರಾಜ್ಯಗಳನ್ನು ಆತನಿಗೆ ತೋರಿಸಿ ಇವೆಲ್ಲವುಗಳ ಅಧಿಕಾರವನ್ನೂ**
**6 ಇವುಗಳ ವೈಭವವನ್ನೂ ನಿನಗೆ ಕೊಡುತ್ತೇನೆ ಇದೆಲ್ಲಾ ನನಗೆ ಕೊಟ್ಟದೆ ಇದನ್ನು ನನ್ನ ಮನಸ್ಸು ಬಂದವನಿಗೆ ಕೊಡುತ್ತೇನೆ**
**7 ನೀನು ನನ್ನ ಮುಂದೆ ಅಡ್ಡ ಬಿದ್ದರೆ ಇದೆಲ್ಲಾ ನಿನ್ನದಾಗುವದು ಎಂದು ಆತನಿಗೆ ಹೇಳಿದನು**
**8 ಅದಕ್ಕೆ ಯೇಸು ನಿನ್ನ ದೇವರಾಗಿರುವ ಕರ್ತನಿಗೆ ಅಡ್ಡಬಿದ್ದು ಆತನೊಬ್ಬನನ್ನೇ ಆರಾಧಿಸಬೇಕು ಎಂಬುದಾಗಿ ಬರೆದದೆ ಎಂದು ಉತ್ತರಕೊಟ್ಟನು**
**9 ಇದಲ್ಲದೆ ಅವನು ಆತನನ್ನು ಯೆರೂಸಲೇಮಿಗೆ ಕರೆದುಕೊಂಡು ಹೋಗಿ ದೇವಾಲಯದ ಶಿಖರದ ಮೇಲೆ ನಿಲ್ಲಿಸಿ ಆತನಿಗೆ ನೀನು ದೇವರ ಮಗನಾಗಿದ್ದರೆ ಇಲ್ಲಿಂದ ಕೆಳಕ್ಕೆ ಧುಮುಕು.**
**10 ನಿನ್ನನ್ನು ಕಾಯುವುದಕ್ಕೆ ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆ ಕೊಡುವನು**
**11 ಮತ್ತು ನಿನ್ನ ಕಾಲು ಕಲ್ಲಿಗೆ ತಗಲೀತೆಂದು ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು ಎಂಬುದಾಗಿ ಬರೆದದೆಯಲ್ಲಾ ಎಂದು ಹೇಳಿದನು.**
**12 ಅದಕ್ಕೆ ಯೇಸು ನಿನ್ನ ದೇವರಾಗಿರುವ ಕರ್ತನನ್ನು ಪರೀಕ್ಷಿಸಬಾರದೆಂದು ಹೇಳಿಯದೆ ಎಂತ ಉತ್ತರಕೊಟ್ಟನು**
**13 ಸೈತಾನನು ಸಕಲವಿಧವಾದ ಶೋಧನೆಯನ್ನು ಮುಗಿಸಿ ಸ್ವಲ್ಪಕಾಲ ಆತನನ್ನು ಬಿಟ್ಟು ಹೊರಟು ಹೋದನು.**

ಸೈತಾನನು ಕ್ಷಣಮಾತ್ರದಲ್ಲಿ ಲೋಕದ ಎಲ್ಲಾ ರಾಜ್ಯಗಳನ್ನು ಯೇಸುವಿಗೆ ತೋರಿಸಿದ್ದು ಕಲ್ಪನೆಯ ಮೂಲಕವಾಗಿದ್ದಾಗಿತ್ತು.

ಯೇಸುವು ಮರುಭೂಮಿಯಲ್ಲಿದ್ದನು ಆದದರಿಂದ ಯೇಸುವನ್ನು ಯೆರೂಸಲೇಮಿಗೆ ತೆಗೆದುಕೊಂಡು ಹೋಗುವುದು ಮತ್ತು ದೇವಾಲಯದ ಶಿಖರದ ಮೇಲೆ ನಿಲ್ಲಿಸುವುದು ಕಲ್ಪನೆಯ ಮೂಲಕವಾದದ್ದಾಗಿತ್ತು.

ನಮ್ಮ ಸಾಮಾನ್ಯ ಆಲೋಚನೆಗಳು, ವಿಚಾರಗಳು, ಚಿತ್ರಗಳು, ಕಲ್ಪನೆಗಳು, ಸಲಹೆಗಳ ಪ್ರಕ್ರಿಯೆಯನ್ನು ಅವನ ಆಲೋಚನೆಯೊಡನೆ ಪ್ರತಿಬಂಧಿಸುವುದರಿಂದ ನಮ್ಮ ಮನಸ್ಸಿನ ಕ್ಷೇತ್ರದಲ್ಲಿ ನಮಗೆ ವಿರುದ್ಧವಾಗಿ ಕೆಲಸ ಮಾಡುವುದು ಸೈತಾನನ ಪ್ರಾಥಮಿಕ ಮಾರ್ಗ ಎಂಬುದಾಗಿ ನಾವು ತೀರ್ಮಾನಿಸಬಹುದು.

**ಯಾಕೋಬನು 1:13-16**
**13 ಯಾವನಾದರೂ ಪಾಪಮಾಡುವದಕ್ಕೆ ಪ್ರೇರೇಪಿಸಲ್ಪಡುವಾಗ ಈ ಪ್ರೇರಣೆಯು ನನಗೆ ದೇವರಾದ ಉಂಟಾಯಿತೆಂದು ಹೇಳಬಾರದು ದೇವರು ಕೆಟ್ಟದ್ದಕ್ಕೇನೂ ಸಂಬಂಧಪಟ್ಟವನಲ್ಲ ಆತನು ಯಾರನ್ನೂ ಪಾಪಕ್ಕೆ ಪ್ರೇರೇಪಿಸುವುದಿಲ್ಲ**
**14 ಆದರೆ ಪ್ರತಿಯೊಬ್ಬನು ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರುಳುಗೊಂಡವನಾಗಿ ಪ್ರೇರೇಪಿಸಲ್ಪಡುತ್ತಾನೆ.**
**15 ಆ ಮೇಲೆ ಆಕೆಯು ಬಸುರಾಗಿ ಪಾಪವನ್ನು ಹೆರುತ್ತದೆ. ಪಾಪವು ತುಂಬಾ ಬೆಳೆದು ಮರಣವನ್ನು ಹೆಡೆಯುತ್ತದೆ**
**16 ನನ್ನ ಪ್ರಿಯ ಸಹೋದರರೇ ಮೋಸ ಹೋಗಬೇಡಿರಿ.**

ಸೈತಾನನ ಆಲೋಚನೆಗಳು, ಚಿತ್ರಗಳು, ಕಲ್ಪನೆಗಳು ಮುಂತಾದವು ನಮ್ಮ ಸ್ವಂತ ಶಾರೀರಿಕ ಆಶಾಪಾಶಗಳನ್ನು, ಹಸಿವೆಗಳನ್ನು ಮತ್ತು ಭಾವೋದ್ರೇಕಗಳನ್ನು ಪ್ರೇರೇಪಿಸುವ ಉದ್ದೇಶದೊಡನೆ ನಮ್ಮ ಮನಸ್ಸುಗಳಿಗೆ ಬರುತ್ತವೆ.

ನಮ್ಮ ಸ್ವಂತ ಆಶಾಪಾಶಗಳು ಪ್ರೇರೇಲಪಿಸಲ್ಪಟ್ಟಾಗ, ಅವುಗಳಿಂದ ನಾವು ಸೆಳೆಯಲ್ಪಡುತ್ತೇವೆ, ನಮ್ಮ ಚಿತ್ತವು ಬಲಹೀನತೆ ಎದುರಿಸುತ್ತದೆ ಮತ್ತು ನಾವು ಸಂಯಮವನ್ನು ಅಭ್ಯಾಸಿಸದಿದ್ದರೆ, ಶರಣಾಗುತ್ತೇವೆ ಮತ್ತು ಪಾಪಕ್ಕೆ ನಡೆಸಲ್ಪಡುತ್ತೇವೆ.

ಒಂದು ಕೆಟ್ಟ ಆಲೋಚನೆ, ಚಿತ್ರ ಅಥವಾ ಕಲ್ಪನೆ ಹೊಂದಿರುವುದು ನಮ್ಮ ಮನಸ್ಸಿನಲ್ಲಿ ಬರುವಂತದ್ದು ಒಂದು ಪಾಪ ರೂಪಗೊಳಿಸುವುದಿಲ್ಲ. ದುರಾಲೋಚನೆ ಅಥವಾ ಆಲೋಚನೆ ಮೇಲೆ ಕ್ರಿಯೆ ಮಾಡುವುದು ಪಾಪವಾಗಿದೆ.

ಇಂತಹ ಆಲೋಚನೆಗಳು ಬರುವುದನ್ನು ನಾವು ತಡೆಯಲಾಗುವುದಿಲ್ಲ ಆದರೆ ಅವುಗಳಿಂದ ದೂರವಿರುವುದರಿಂದ ತಡೆಗಟ್ಟಬಹುದು.

## 3.5. ಆಸೆಗಳ ಮೂರು ಕ್ಷೇತ್ರಗಳು

ಹವ್ವಳ ಶೋಧನೆ

**ಆದಿಕಾಂಡ 3:6**
**ಆಗ ಸ್ತ್ರೀಯು – ಆ ಮರದ ಹಣ್ಣು ತಿನ್ನುವುದಕ್ಕೆ ಉತ್ತಮವಾಗಿಯೂ ನೋಡುವುದಕ್ಕೆ ರಮ್ಯವಾಗಿಯೂ ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿಯೂ ಇದೆ ಎಂದು ತಿಳಿದು ಅದನ್ನು ತೆಗೆದುಕೊಂಡು ತಿಂದಳು, ಸಂಗಡ ಇದ್ದ ಗಂಡನಿಗೂ ಕೊಡಲು ಅವನೂ ತಿಂದನು**

**1 ಯೋಹಾನ. 2:15,16**
**15 ಲೋಕವನ್ನಾಗಲೀ ಲೋಕದಲ್ಲಿರುವವುಗಳನ್ನಾಗಲಿ ಪ್ರೀತಿಸಬೇಡಿರಿ. ಯಾವನಾದರೂ ಲೋಕವನ್ನು ಪ್ರೀತಿಸಿದರೆ ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ**
**16 ಲೋಕದಲ್ಲಿರುವ ಶರೀರದಾಶೆ, ಕಣ್ಣಿನಾಶೆ ಬದುಕುಬಾಳಿನ ಡಂಬ ಈ ಮೊದಲಾದವುಗಳೆಲ್ಲವೂ ತಂದೆಯಿಂದ ಹುಟ್ಟದೆ ಲೋಕದಿಂದ ಹುಟ್ಟಿದವುಗಳಾಗಿವೆ**

### 3.5.1. ಶರೀರದಾಶೆ

ಇಂದ್ರಿಯ ಆಸೆಗಳು, ಹಸಿವು ಮತ್ತು ಭಾವೋದ್ರೇಕಗಳನ್ನು ದೇವರು ಅನುಮತಿಸುವುದಿಲ್ಲ.

ಹವ್ವಳು ಮರವನ್ನು ನೋಡಿ ತಿನ್ನುವುದಕ್ಕೆ ಒಳ್ಳೆಯದಾಗಿದೆ ಅಂದುಕೊಂಡಳು.

### 3.5.2. ಕಣ್ಣಿನಾಶೆ

“ಕಣ್ಣಿನಾಶೆ” ಸ್ವಾಧೀನಪಡಿಸಿಕೊಳ್ಳುವುದನ್ನು ಒಳಗೊಂಡಿರುವುದಿಲ್ಲ. ಇದು ಆಲೋಚಿಸುವುದರಲ್ಲಿ ತೃಪ್ತಿಗೊಂಡಿರುತ್ತದೆ.ಇದು ಶರೀರದಾಶೆಗಿಂತ ಹೆಚ್ಚಿನ ರೀತಿಯ ಬಯಕೆಯನ್ನು ಪ್ರತಿನಿಧಿಸುತ್ತದೆ.

ಹವ್ವಳು ನೋಡಲು “ಕಣ್ಣಿಗೆ ಅಹ್ಲಾದಕರವಾಗಿತ್ತು”.

### 3.5.3. ಬದುಕುಬಾಳಿನ ಡಂಭ

ಮಾನಸಿಕ ಆನಂದವು ಇತರ ದೈಹಿಕ ತೃಪ್ತಿಯನ್ನು ಬಯಸುತ್ತದೆ (ವಿನಸೆಂಟ್‌ರ ವಾಕ್ಯ ಅಧ್ಯಯನ).

ವ್ಯರ್ಥ ಮಹಿಮೆ, ಮನುಷ್ಯನ ಹೆಮ್ಮೆ. ಹೆಮ್ಮೆಯು, ನಾವು ಎಲ್ಲವನ್ನು ನನ್ನಿಂದಲೇ ಮಾಡುತ್ತೇನೆ ಮತ್ತು ದೇವರಿಂದ ಸ್ವತಂತ್ರನನ್ನಾಗಿ ಮಾಡುತ್ತದೆ ಎಂದು ಅಂದುಕೊಳ್ಳುವಂತೆ ಮಾಡುತ್ತದೆ.

ಹವ್ವಳು ನೋಡಲು "ಒಬ್ಬನನ್ನು ಬುದ್ದಿವಂತನನ್ನಾಗಿ ಮಾಡಲು ಅಪೇಕ್ಷಣೀಯವಾದ ಮರ" ಅಂದುಕೊಂಡಳು.

ಸೈತಾನನ ಪ್ರಲೋಭನೆಗಳು ಈ ಬಯಕೆಯ ಕ್ಷೇತ್ರಗಳನ್ನು ಗುರಿಯಾಗಿಸುತ್ತವೆ.

## ಕ್ರಿಯೆಯ ಬಿಂದು

ಸ್ವಯಂ ಮೌಲ್ಯಮಾಪನದ ಉದ್ದೇಶಗಳಿಗಾಗಿ, ಅಂದಾಜು ಶೇಕಡಾವಾರು ಪ್ರಕಾರ ಮೂರುಕ್ಷೇತ್ರಗಳಲ್ಲಿ ನೀವು ಹೇಗೆ ಅನುಮಾನಾಸ್ಪದವಾಗಿ ಒಳಗಾಗುತ್ತೇರಿ?

%ಶರೀರದಾಶೆ____ %ಕಣ್ಣಿನಾಶೆ _____%ಬದುಕುಬಾಳಿನ ಡಂಬ.________

## 3.6. ಭದ್ರಕೋಟೆಗಳ ರಚನೆಯನ್ನು ಅರ್ಥೈಸಿಕೊಳ್ಳುವುದು.

**2 ಕೊರಿಂಥದವರಿಗೆ. 10:3–6**
**3 ನಾವು ಲೋಕದಲ್ಲಿದ್ದರೂ ಲೋಕಾನುಸಾರವಾಗಿ ಯುದ್ಧಮಾಡುವವರಲ್ಲ.**
**4 ನಾವು ಉಪಯೋಗಿಸುವ ಆಯುಧಗಳು ಲೋಕಸಂಬಂಧವಾದ ಆಯುಧಗಳಲ್ಲ; ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು, ಕೋಟೆಗಳನ್ನು ಕೆಡವಿಹಾಕುವಂತಹವುಗಳಾಗಿವೆ.**
**5 ನಾವು ವಿತರ್ಕಗಳನ್ನೂ ದೇವಜ್ಞಾನವನ್ನು ವಿರೋಧಿಸುವುದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲುಗಳನ್ನು ಕೆಡವಿಹಾಕಿ ಎಲ್ಲಾ ಯೋಚನೆಗಳನ್ನು**
**6 ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆಹಿಡಿದು ನಿಮ್ಮ ವಿಧೇಯತ್ವವು ಪರಿಪೂರ್ಣವಾದ ಮೇಲೆ ಎಲ್ಲಾ ಅವಿಧೇಯತ್ವಕ್ಕೆ ಶಿಕ್ಷೆಮಾಡುವುದಕ್ಕೆ ಸಿದ್ಧರಾಗಿದ್ದೇವೆ.**

- ಮಾತು,
- ತರ್ಕ (ವಾದಿಸುವುದು),
- ಕಲ್ಪನೆ,
- ಭದ್ರಕೋಟೆ – ಕೋಟೆ ಅಥವಾ ಶ್ರೀಮಂತ ಗೃಹ. ಇದು ನಮ್ಮ ಮನಸ್ಸಿನ ಯಾವುದೇ ಕ್ಷೇತ್ರವನ್ನು ಸೂಚಿಸುತ್ತದೆ, ಅದು ದುರಾತ್ಮಗಳಿಂದ ಆಕ್ರಮಿಸಲ್ಪಟ್ಟು ಭದ್ರಕೋಟೆಯಾಗಮಾಡಿದೆ. ಅದು ಸಾಧಾರಣ ಆಲೋಚನೆಯಿಂದ ಆರಂಭವಾಗುತ್ತದೆ.

ಆಲೋಚನೆಯು ಒಂದು ಕಲ್ಪನೆ, ಸಲಹೆ, ಪದ ಅಥವಾ ಚಿತ್ರ ದುಷ್ಟ ಆತ್ಮಗಳಿಂದ ನೇರವಾಗಿ ನಮ್ಮ ಸಾಮಾನ್ಯ ಆಲೋಚನೆಗಳನ್ನು ಬೇರ್ಪಡಿಸಲಾಗುತ್ತದೆ. ಅದು ಯಾರೋ ಒಬ್ಬರಿಂದ ಕೇಳುವುದರಿಂದಲೋ ಅಥವಾ ನೋಡುವುದರಿಂದಲೋ ನಮ್ಮ ಬಳಿಗೆ ಬರುತ್ತದೆ. ತಪ್ಪಾದ ಆಲೋಚನೆಯನ್ನು ಆ ಕ್ಷಣದಲ್ಲೇ ಬಂಧಿಸದೇ ಹೋದರೆ, ವಾದ-ವಿವಾದಕ್ಕೆ ವಿಕೃತವಾಗಿ ತಿರುಗಿಬಿಡುತ್ತದೆ. ಅದು ಸತ್ಯಕ್ಕೆ ಮತ್ತು ದೇವರ ಸುಂದರವಾದ ವಾಕ್ಯಕ್ಕೆ ("ದೇವರ ತಿಳುವಳಿಕೆ")ವಿರೋಧವಾಗಿ ವಾದಮಾಡಲಾರಂಭಿಸುತ್ತದೆ.

ದೇವರ ವಾಕ್ಯದಿಂದ ನಮ್ಮ ಮನಸ್ಸುಗಳನ್ನು ಬೇರ್ಪಡಿಸಿ, ವಾದ ಕಲ್ಪನೆಯೆಡೆಗೆ ತಿರುಗಿಬಿಡುತ್ತದೆ, ಅಲ್ಲಿ ನಮ್ಮ ದುರಾಲೋಚನೆಗಳು ಹೇಳಿದಂತೆ ನಾವು

ಕೇಳಲಾರಂಭಿಸಿಬಿಡುತ್ತೇವೆ. ಇದು ನಿಜ ಜೀವನದ ಹತ್ತಿರದಲ್ಲಿದ್ದು ಬಹುತೇಕ ನೈಜ್ಯವೆನಿಸುತ್ತದೆ. ಕಲ್ಪನೆಯನ್ನು ತೆಗೆದುಹಾದೇಹೋದರೆ, ಅದು ಪುನರಾವರ್ತಿತ ಚಟುವಟಿಕೆ ಅಥವಾ ಪುನರಾವರ್ತಿ ಗಮನ (ಆಲೋಚನೆ) ಇದು ಒಬ್ಬ ವ್ಯಕ್ತಿಯ ಮನಸ್ಸಿನ ಮೇಲೆ ಪ್ರಬಲ ಕಾರಣವಾಗಿಬಿಡುತ್ತದೆ. ಭದ್ರಕೋಟೆಯು ಆಲೋಚನೆಗಳಿಂದ, ತರ್ಕ, ವಾದಗಳು ಮತ್ತು ಕಲ್ಪನೆಗಳಿಂದ ಮಾಡಿದ ಮನೆಯಾಗಿರುತ್ತದೆ. ಇದು ನಮ್ಮ ಆತ್ಮಗಳಲ್ಲಿ ಒಂದು ಪ್ರದೇಶ (ಮನಸ್ಸು, ಚಿತ್ತ ಮತ್ತು ಭಾವನೆಗಳು) ಇವುಗಳನ್ನು ಶತೃವು ಸ್ವಾಧಿನದಲ್ಲಿ ಪಡೆದಿರುತ್ತಾನೆ ಆದದರಿಂದ ಅದು ನಮ್ಮನ್ನು ಅವಿಧೇಯತ್ವಕ್ಕೆ ನಡೆಸುತ್ತವೆ.

ವಿಧೇಯತೆಯನ್ನು ಪೂರೈಸಲು, ಅಂದರೆ, ದೇವರಿಗೆ ವಿಧೇಯತೆಯ ಮೂಲಕ ನಮ್ಮ ಜೀವಿತಗಳನ್ನು ಕೊಂಡುಬರುವಂಥದ್ದು, ಕಲ್ಪನೆಗಳನ್ನು ತೂರಿ ಭದ್ರಕೋಟೆಗಳನ್ನು ಕೆಡವಲು, ನಮ್ಮ ಯುದ್ದದ ಆಯುಧಗಳನ್ನು ಉಪಯೋಗಿಸಬೇಕು.ತರ್ಕಗಳು ಪ್ರತೀ ಆಲೋಚನೆಯನ್ನು ದೇವರ ವಾಕ್ಯಕ್ಕೆ ಮತ್ತು ಕ್ರಿಸ್ತನ ಪ್ರಭುತ್ವಕ್ಕೆ ಸೆರೆಹಿಡಿಯುತ್ತವೆ.

## ಉದಾಹರಣೆ:-

ಒಬ್ಬ ಯೌವನಸ್ಥನನ್ನು ನೋಡೋಣ, ಆತನು ಎಂದೂ ಮಧ್ಯಪಾನವನ್ನು (ಅಥವಾ ಯಾವುದೇ ಹಡುಸ್ವಾದ ಮಧ್ಯವನ್ನು) ಸೇವಿಸಿರುವುದಿಲ್ಲಾ. ಆದರೆ ಎಲ್ಲೋ ಒಂದು ದಿನ ಒಬ್ಬ ದೇವರ ಸೇವಕರು/ಪಾಸ್ಟರ್ ಅವರ ಆಪ್ತರ ಮದುವೆಯ ಸಂಭ್ರಮದಲ್ಲಿ ಒಂದು ಚಿಕ್ಕ ಲೋಟದಲ್ಲಿ ಸ್ವಲ್ಪ ಸಾಧಾರಣವಾದ ಮಧ್ಯವನ್ನು ಸೇವಿಸುತ್ತಿರುವಾಗ ಈ ಯೌವನಸ್ಥನು ನೋಡಿಬಿಡುತ್ತಾನೆ. ವೈರಿಯು(ಸೈತಾನನು) ಈ ಒಂದು ಸಣ್ಣ ಘಟನೆಯನ್ನೇ ಉಪಯೋಗಿಸಿ ಆ ಯೌವನಸ್ಥನ ಮನದಲ್ಲಿ ಬಲವಾಗಿ ಕಾರ್ಯಮಾಡಿಬಿಡುತ್ತಾನೆ. ಆ ಯೌವನಸ್ಥನು ಕಾಲಕ್ರಮೇಣವಾಗಿ ಕುಡಿಯಲು ಆರಂಭಿಸಿಬಿಡುತ್ತಾನೆ. – "ಪಾಸ್ತರ್/ಸೇವಕರು ವಿವಾಹ ಮಹೋತ್ಸವದಲ್ಲಿ ಅಲ್ಪ ಮಧ್ಯ ಸೇವಿಸಿದ್ದರಲ್ಲಿ ತಪ್ಪೇನಿರುವುದೇ ಇಲ್ಲ".

ಆ ಯೌವನಸ್ಥನು ತನ್ನ ಮನದಲ್ಲಿ ಈ ಆಲೋಚನೆಯೊಂದಿಗೆ ಆಟವಾಡಲು ಆರಂಭಿಸುತ್ತಾನೆ. ಅಂದಿನಿಂದ ತನ್ನ ಮನದಲ್ಲಿ ತರ್ಕ-ವಾದವಿವಾದಗಳಲ್ಲಿ ತೊಡಗುತ್ತಾನೆ. "ಕರ್ತನ ಮೇಜಿನಲ್ಲಿ ವೈನ್ ಅನ್ನು ಕೊಡುತ್ತಾರಲ್ಲ. ಯೇಸು ಸ್ವಾಮೀ ಸ್ವತ ನೀರನ್ನು ವೈನ್ ಆಗಿ ಬದಲಿಸಿದನಲ್ಲಾ.. ನಾನು ನೋಡಿದಂತೆ ಸಭಾಪಾಲಕತು ವ ವಿವಾಹ ಮಹೋತ್ಸವದಲ್ಲಿ ಕುಡಿಯುವುದನ್ನು ನಾನು ನೋಡಿದೆನಲ್ಲಾ, ನನ್ನ ಎಲ್ಲಾ ಸ್ನೇಹಿತರೂ ಕುಡಿಯುತ್ತಾರೆ ಆದರೂ ಅವರುಗಳು ಒಳ್ಳೆಯವರೇ ಇದ್ದಾರೆ. ಹಾಗೇ ನಾನು ಕೂಡಾ ಕುಡಿದು ಮತ್ತನಾಗುವುದಿಲ್ಲಾ ಬಹಳ ಎಚ್ಚರ ವಹಿಸುತ್ತೇನೆ, ಸಂತೋಷ ಸಮಾರಂಭಗಳಲ್ಲಿ ಮಾತ್ರ ಮಧ್ಯ ಸೇವಿಸುತ್ತೇನೆ". ಹೀಗೆ, ಆತನ ಮನದಲ್ಲಿ ನಿಧಾನವಾಗಿ ತರ್ಕಗಳು ಆರಂಭಗೊಳ್ಳುತ್ತವೆ., ಅವು ದೇವರ ತಿಳುವಳಿಕೆಗೆ ವಿರೋಧವಾಗಿ ಕಟ್ಟಿಕೊಡುತ್ತವೆ.

ತಕ್ಷಣವೇ ಆತನ ಮನದಲ್ಲಿ ಕಲ್ಪನೆಗಳು ಬಣ್ಣಹಚ್ಚಲ್ಪಡುತ್ತದೆ. ಆಗ ಆ ಯೌವನಸ್ಥನು ತಾನು ತನ್ನ ಸ್ನೇಹಿತರೊಂದಿಗೆ ಬಾರ್ನಲ್ಲಿ ತನ್ನ ಸ್ನೇಹಿತರೊಂದಿಗೆ ಆಗಾಗ್ಗೆ ಮತ್ತು ಎಲ್ಲಾಸಮಯದಲ್ಲಿ ಮಧ್ಯ ಸೇವಿಸಲು ಆರಂಭಿಸುತ್ತಾನೆ. ಹಾಗೇ ಮಾಡುತ್ತಾ ಅದು ದಿನೇ

ದಿನೇ ಒಂದು ದೊಡ್ಡ ಅಭ್ಯಾಸವಾಗಿಬಿಡುತ್ತದೆ ಮತ್ತು ಕಡೇಗೆ ಮದ್ಯ ಅವಶ್ಯಕವಾಗಿಬಿಡುತ್ತದೆ. ದೊಡ್ಡ ಕೋಟೆ ಕಟ್ಟಲ್ಪಟ್ಟು ದಾಸತ್ವಕ್ಕೊಳಗಾಗಿಬಿಡುತ್ತಾನೆ.

## 3.7. ಅಪಾಯಕಾರಿ ಪ್ರಗತಿ.

- **ವಂಚನೆ:** ದೇವರ ವಾಕ್ಯಕ್ಕೆ ಅಥವಾ ಸಾಮಾನ್ಯವಾದ ನಡುವಳಿಕೆ ಅದು ಹಿಂಜರಿತ, ದಮನ, ನಿಗ್ರಹ, ಅನಿಯಂತ್ರಿತ ವರ್ತನೆ ಎಡೆಗೆ ನಡೆಸುತ್ತದೆ.

- **ಖಿನ್ನತೆ:** ಕತ್ತಲೆ, ನಿರಾಕರಣೆ, ದುಃಖ, ಕಡಿಮೆಯಾದ ಚಟುವಟಿಕೆ, ಹತಾಶೆ, ಅಸಮರ್ಪಕತೆ.

- **ಶೋಷಣೆ**: ಜಜ್ಜಲ್ಪಡುವುದು ಅಥವಾ ಸೋಲಿಸಲ್ಪಡುವುದು (ನಿರ್ಭಂಧಿಸಿದ ಆಲೋಚನೆಗಳು, ನಿರ್ಭಂಧಿಸಿದ ಭಾವನೆಗಳು, ನಿರ್ಭಂಧಿಸಿದ ನಡವಳಿಕೆ,ಅಸಹಜ ಸಮಸ್ಯೆಗಳು).

- **ಭ್ರಾಂತಿ:** ಮುತ್ತಿಗೆ, ಭಯಭೀತತೆ, ಒಂದೇ ಕಲ್ಪನೆ ಮೇಲೆ ಅವಿವೇಕದ ಮಟ್ಟಕ್ಕೆ ನಿವಾರಿಸಲಾಗಿದೆ.

- **ಸ್ವಾಧೀನತೆ:** ವಾಸಿಸಲು, ಆಕ್ರಮಿಸಲು, ನಿಯಂತ್ರಿಸಲು, ಪ್ರಾಬಲ್ಯಪಡಿಸುವುದು, ಆಳ್ವಿಕೆ.

## 3.8. ನಮ್ಮ ಯುದ್ದದ ಆಯುಧಗಳು.

**2 ಕೊರಿಂಥ. 10:4**
**ನಾವು ಉಪಯೋಗಿಸುವ ಆಯುಧಗಳು ಲೋಕಸಂಬಂಧವಾದ ಆಯುಧಗಳಲ್ಲ; ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿಹಾಕುವಂಥವುಗಳಾಗಿವೆ.**

ದೇವರು ನಮಗೆ ಕೊಟ್ಟ ಆತ್ಮೀಕ ಆಯುಧಗಳಿಂದ, ನಾವು ಹೀಗೆ ಮಾಡಬಹುದು:

- ಪ್ರತೀ ಆಲೋಚನೆಗಳನ್ನು ಸೆರೆಹಿಡಿಯಿರಿ,
- ದೇವರ ವಾಕ್ಯಕ್ಕೆ ವಿರುದ್ದವಾದ ವಾದಗಳನ್ನು (ತಾರ್ಕಿಕ) ಬಿಟ್ಟುಬಿಡಬೇಕು,
- ಕಲ್ಪನೆಗಳನ್ನು ಬಿತ್ತರಿಸಿ ಮತ್ತು
- ಭದ್ರಕೋಟೆಗಳನ್ನು ಎಳೆದುಬಿಡಿರಿ,

ನಮ್ಮಲ್ಲಿರುವ ಆಯುಧಗಳು ನಮಗೆ ತಿಇಳಿದಿರುತ್ತದೆ:

- ಮಾತನಾಡಲ್ಪಟ್ಟ ದೇವ ವಾಕ್ಯ

ಯೇಸುವಿನ ಉದಾಹರಣೆ (ಮತ್ತಾಯ. 4:1–11).

**ಎಫೆಸದವರಿಗೆ 6:17**
**ಇದಲ್ಲದೆ ರಕ್ಷಣೆಯೆಂಬ ಶಿರಸ್ತ್ರಾಣವನ್ನು ಇಟ್ಟುಕೊಂಡು ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿಯಿರಿ**

**ಪ್ರಕಟಣೆ 12:11.**
**ಅವರು ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಮರಣಕ್ಕೆ ಹಿಂತೆಗೆಯದೆ ಯಜ್ಞದ ಕುರಿಯಾದಾತನ ರಕ್ತದ ಬಲದಿಂದಲೂ ತಮ್ಮ ವಾಕ್ಯದ ಬಲದಿಂದಲೂ ಅವನನ್ನು ಜಯಿಸಿದರು**

- ಯೇಸುವಿನ ನಾಮ

**ಮಾರ್ಕ 16:17**
**ಇದಲ್ಲದೆ ನಂಬುವವರಿಂದ ಈ ಸೂಚಕಕಾರ್ಯಗಳು ಉಂಟಾಗುವವು; ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು; ಹೊಸಭಾಷೆಗಳಿಂದ ಮಾತಾಡುವರು; ಹಾವುಗಳನ್ನು ಎತ್ತುವರು**

- ಯಜ್ಞದಕುರಿಮರಿಯ ರಕ್ತ

**ಪ್ರಕಟಣೆ 12:11**
**ಅವರು ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಮರಣಕ್ಕೆ ಹಿಂತೆಗೆಯದೆ ಯಜ್ಞದ ಕುರಿಯಾದಾತನ ರಕ್ತದ ಬಲದಿಂದಲೂ ತಮ್ಮ ವಾಕ್ಯದ ಬಲದಿಂದಲೂ ಅವನನ್ನು ಜಯಿಸಿದರು**

**ಕೀರ್ತನೆಗಳು 8:2 ( ಮತ್ತಾಯ. 21:16 ನ್ನೂ ನೋಡಿರಿ )**
**ನಿನಗೆ ವಿರೋಧವಾಗಿ ನಿಂತು ಮುಯ್ಯಿ ತೀರಿಸುವ ವೈರಿಗಳ ಬಾಯನ್ನು ಕಟ್ಟುವದಕ್ಕೋಸ್ಕರ ನೀನು ಬಾಲಕರ ಮತ್ತು ಮೊಲೆಕೂಸುಗಳ ಬಾಯಿಂದ ಬಲವಾದ ಸಾಕ್ಷಿ ಉಂಟಾಗುವಂತೆ ಮಾಡಿದ್ದೀ**

**ಕೀರ್ತನೆಗಳು 149:6,7**
**6 ಅವರ ಬಾಯಲ್ಲಿ ಯೆಹೋವನ ಸ್ತೋತ್ರವೂ ಕೈಯಲ್ಲಿ ಇಬ್ಬಾಯಿಕತ್ತಿಯೂ ಇರಲಿ**
**7 ಅವರು ಜನಾಂಗಗಳಿಗೆ ಮುಯ್ಯಿತೀರಿಸುವರು; ಅನ್ಯಜನಗಳನ್ನು ದಂಡಿಸುವರು**

ಯಾವಾಗ ಕೆಟ್ಟ ಆಲೋಚನೆಗಳು, ವಾದ-ವಿವಾದಗಳು ಅಥವಾ ಕಲ್ಪನೆಗಳು ನಮ್ಮ ಮನದಲ್ಲಿ ಬರುವಾಗ, ನಾವು ದೇವರ ವಾಕ್ಯವನ್ನು ಮಾತಾಡುವ ಮೂಲಕ (ಅಥವಾ ಯೂಚಿಸುವ ಮೂಲಕ) ಅವುಗಳನ್ನು ನಿರಾಕರಿಸಬಹುದು ಅವುಗಳ ಉದ್ದೇಶವನ್ನು ಪ್ರತಿರೋಧಿಸಬಹುದು.

## 3.9. ರಕ್ಷಣೆಯ ಶಿರಸ್ತ್ರಾಣ.

**ಎಫೆಸದವರಿಗೆ 6:13–17**
**13 ಆದದರಿಂದ ಕಠಿನ ಯುದ್ಧವು ನಡೆಯುವ ದಿವಸದಲ್ಲಿ ಆ ವೈರಿಗಳನ್ನು ಎದುರಿಸುವುದಕ್ಕೂ ಮಾಡಬೇಕಾದದ್ದೆಲ್ಲವನ್ನೂ ಮಾಡಿ ಜಯಶಾಲಿಗಳಾಗಿ ನಿಲ್ಲುವುದಕ್ಕೂ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ.**

**14 ಸತ್ಯವೆಂಬ ನಡುಕಟ್ಟನ್ನು ಕಟ್ಟಿಕೊಂಡು ನೀತಿಯೆಂಬ ವಜ್ರಕವಚವನ್ನು ಧರಿಸಿಕೊಂಡು**
**15 ಸಮಾಧಾನದ ವಿಷಯವಾದ ಸುವಾರ್ತೆಯನ್ನು ತಿಳಿಸುವುದರಲ್ಲಿ ಸಿದ್ಧವಾದ ಮನಸ್ಸೆಂಬ ಕೆರಗಳನ್ನು ಮೆಟ್ಟಿಕೊಂಡು ನಿಲ್ಲಿರಿ.**
**16 ಮತ್ತು ನಂಬಿಕೆಯೆಂಬ ಗುರಾಣಿಯನ್ನು ಹಿಡಿದುಕೊಳ್ಳಿರಿ; ಅದರಿಂದ ನೀವು ಕೆಡುಕನ ಅಗ್ನಿಬಾಣಗಳನ್ನೆಲ್ಲಾ ಆರಿಸುವುದಕ್ಕೆ ಶಕ್ತರಾಗುವಿರಿ.**
**17 ಇದಲ್ಲದೆ ರಕ್ಷಣೆಯೆಂಬ ಶಿರಸ್ತ್ರಾಣವನ್ನು ಇಟ್ಟುಕೊಂಡು ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿಯಿರಿ**

ರಕ್ಷಣೆಯೆಂಬ ಶಿರಸ್ತ್ರಾಣವು ನಮ್ಮ ಮನಗಳನ್ನು ಕಾಯುತ್ತದೆ.

ಒಬ್ಬ ಸೈನಿಕನು ತನ್ನ ಶಿರಸ್ತ್ರಾಣ ಧರಿಸದಿದ್ದರೆ, ಅವನು ಸುಲಭವಾಗಿ ವ್ಯಾಪಕವಾದ ಯುದ್ಧಕೊಡಲಿ ಅಥವಾ ಶತ್ರುಗಳ ಕತ್ತಿಗೆ ಬೇಟೆಯಾಡಲ್ಪಡುತ್ತಾನೆ. ಅವನ ತಲೆ ಉರುಳುತ್ತಿತ್ತು!
ನಮ್ಮ ಮನಸ್ಸುಗಳನ್ನು (ಆಲೋಚನೆಗಳನ್ನು, ತರ್ಕಗಳನ್ನು ಮತ್ತು ಕಲ್ಪನೆಗಳನ್ನು) ಸರಿಯಾಗಿ ಜೋಡಿಸಿಕೊಂಡ ರಕ್ಷಣೆಯಂಬ ಶಿರಸ್ತ್ರಾಣವನ್ನು ಧರಿಸಿಕೊಂಡವಾರಾಗಿದ್ದೇವೆ ಅದು ದೇವರು ನಮಗಾಗಿ ಮಾಡಿದ ರಕ್ಷಣೆಯ ಕಾರ್ಯದ ನಿಮಿತ್ತವಾಗಿ.

- ✓ ರಕ್ಷಣೆ ಮತ್ತು ಅದು ಒಳಗೊಂಡಿರುವ ಎಲ್ಲದರ ತಿಳುವಳಿಕೆಯನ್ನು ಹೊಂದಿರಿ.
- ✓ ನಮ್ಮ ರಕ್ಷಣೆಯ ವಾಸ್ತವತೆಯ ಬಗ್ಗೆ ನಮ್ಮ ಮನಸ್ಸಿನಲ್ಲಿ ಮನವರಿಕೆಯಾಗಿರಬೇಕು.
- ✓ ದೇವರು ನಮಗೆ ಕೊಟ್ಟಿರುವ ರಕ್ಷಣೆಯೊಂದಿಗಿನ ಒಪ್ಪಂದದ ವಿಷಯದಲ್ಲಿ ಆಲೋಚಿಸಿರಿ.
- ✓ ರಕ್ಷಣೆಯ ಶಿರಸ್ತ್ರಾಣವನ್ನು ನಾವು ಹೊಂದಿದ್ದೇವೆಂದು ಇದು ಖಚಿತಪಡಿಸುತ್ತದೆ.

ನಮ್ಮ ರಕ್ಷಣೆಯ ಮತ್ತು ಅದಕ್ಕೆ ನಮ್ಮ ಮನಸ್ಸನ್ನು ಸರಿಯಾಗಿ ಹೊಂದಿಸಿಕೊಂಡು ಇರುವಾಗ, ಸೈತಾನನು ನಮ್ಮ ಮನಸ್ಸಿನ ಮೇಲೆ ಮಾಡುವ ದಾಳಿಯ
ವಿರುದ್ಧ ನಾವು ಬಹಳ ಜಾಗರೂಕತೆಯಿಂದಿರುತ್ತೇವೆ.

## 3.10. ಮನದಲ್ಲಿ ಕಾರ್ಯಪ್ರವೃತ್ತತೆಯನ್ನು ಹೊಂದುವುದು.

**1 ಪೇತ್ರ 1:13**
**ಆದದರಿಂದ ನೀವು ಮನಸ್ಸಿನ ನಡುವನ್ನು ಕಟ್ಟಿಕೊಂಡು ಸ್ವಸ್ಥಚಿತ್ತರಾಗಿದ್ದು ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ ದೊರಕುವ ಭಾಗ್ಯದ ಮೇಲೆ ನಿಮ್ಮ ನಿರೀಕ್ಷೆಯನ್ನು ಸಂಪೂರ್ಣವಾಗಿ ಇಡಿರಿ**

ಮನಸ್ಸು (ಗ್ರೀಕ್ ಭಾಷೆಯಲ್ಲಿ ಡಯಾನೊಯಾ) = ಆಳವಾದ ಆಲೋಚನೆ, ಕಲ್ಪನೆ, ಮನಸು, ಅರ್ಥೈಸಿಕೊಳ್ಳು ಎಂದರ್ಥ.

ನಿಮ್ಮ ಮನಸ್ಸಿನ ನಡುವನ್ನು ಕಟ್ಟಿಕೊಂಡು ("ನಿಮ್ಮ ಧೋತಿಯನ್ನು ಎಳೆದುಹಾಕಿ")

**1 ಅರಸುಗಳು 18:46**
**ಯೆಹೋವನ ಹಸ್ತವಯ ಎಲಿಯನ ಸಂಗಡ ಇದ್ದದರಿಂದ ಅವನು ನಡುಕಟ್ಟಿಕೊಂಡು ಆಹಾಬನ ಮುಂದೆ ಓಡುತ್ತಾ ಇಜ್ರೇಲನ್ನು ಸೇರಿದನು**

ನಮ್ಮ ಮನಸ್ಸಿನ ಮೇಲೆ ಹತೋಟಿ ಇರಬೇಕು.

- ✓ ನನ್ನ ಮನಸ್ಸು ನನ್ನದೇ.
- ✓ ನನ್ನ ಮನಸ್ಸಿನಲ್ಲಿ ಯಾವ ರೀತಿಯ ಆಲೋಚನೆಗಳನ್ನು ನಾನು ಮಾಡಬೇಕು ಎಂಬುದು ನನ್ನ ನಿರ್ಧಾರವಾಗಿರಬೇಕು.
- ✓ ಗುರಿರಹಿತವಾಗಿ ಸುತ್ತಾಡಲು ನನ್ನ ಮನಸ್ಸಿಗೆ ಅವಕಾಶ ನೀಡಬಾರದು.

ನಾವು ನಿಷ್ಕ್ರಿಯತೆಯನ್ನು ತಪ್ಪಿಸಬೇಕು, ಖಾಲಿಯಾಗಿ ಇಡಬಾರದು.
ಖಾಲಿಯಾಗಿರು ಮನದ ಸ್ಥಿತಿಯು ಸೈತಾನನ \ ಕಾರ್ಯಾಗಾರವಾಗಿಬಿಡುತ್ತದೆ.

## 3.11. ನಮ್ಮ ಮನಸ್ಸುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದು- ಶರೀರದಾಶೆಗಳಿಗೆ ವಿರೋಧವಾಗಿ ಹೋರಾಡುವುದು

**ಗಲಾತ್ಯ 5:24**
**ಕ್ರಿಸ್ತ ಯೇಸುವಿನವರು ತಮ್ಮ ಶರೀರಭಾವವನ್ನು ಅದರ ವಿಷಯಾಭಿಲಾಷೆ ಸ್ವೇಚ್ಛಾಭಿಲಾಷೆ ಸಹಿತ ಶಿಲುಬೆಗೆ ಹಾಕಿದವರು**

**ರೋಮಾ. 8:13**
**ನೀವು ಶರೀರಭಾವವನ್ನು ಅನುಸರಿಸಿ ಬದುಕಿದರೆ ಸಾಯುವುದು ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವುದಾದರೆ ಜೀವಿಸುವಿರಿ.**

ನಾವು ಏನನ್ನು ಬಿತ್ತುತ್ತೇವೋ ಅದನ್ನೇ ಕೊಯ್ಯುತ್ತೇವೆ. ನಾವು ಯಾವುದಕ್ಕಾಗಿ ಹಸಿದವರಾಗಿರುತ್ತೇವೋ ಅದು ಸಾಯುತ್ತದೆ. ನಾವು (ಶರೀರದಾಶೆಗಳಿಗೆ), ನಮ್ಮ ಶರೀರದ ಮತ್ತು ಮನಸ್ಸಿನ ಅದ್ಯೈವೀಕ ಕಾರ್ಯಗಳಿಗಾಗಿ ಹಸಿವುಗೊಳ್ಳಬಾರದು.

ಆದರೆ ಎಲ್ಲವನ್ನೂ ಪರಿಶೋಧಿಸಿ ಒಳ್ಳೇಯದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ. (1ಥೆಸಲೋನಿಕ. 5:21)

## 3.12. ನಮ್ಮ ಮನಸ್ಸುಗಳ ಮೇಲೆ ಸ್ವಾಧೀನವಹಿಸುವುದು- ಉರಿಯುತ್ತಿರುವ ಭರ್ಜಿಗಳ ವಿರುದ್ಧ ಹೋರಾಡುವುದು

ನಾನು ಒಂದು ತಿಳಿದಿರಬೇಕು ನನ್ನ ಮನಸ್ಸು ನನ್ನದೇ ಎಂದು.

ಧರ್ಮಶಾಸ್ತ್ರದ ಬೆಳಕಿನಲ್ಲಿ ನನು ಪ್ರತೀ ಆಲೋಚನೆ, ತಾರ್ಕಿಕತೆ, ಮತ್ತು ಪ್ರತಿಯೊಂದನ್ನು ನಿರ್ಣಯಿಸಬೇಕು ಅಥಾವಾ ಮೌಲ್ಯಮಾಪನ ಮಾಡಬೇಕಾಗಿದೆ. ವಿವೇಚನೆ, ಶಿಸ್ತು ಮತ್ತು ಪ್ರತೀ ಆಲೋಚನೆಯೊಂದಿಗೆ (ಅಭಿವೃದ್ದಿ ಅಥವಾ ನಾಶ) ಆಗಬೇಕು.

ನನ್ನ ಸ್ವ-ಮನಸ್ಸಿನಿಂದ ದೇವರ ವಾಕ್ಯವನ್ನು ಮಾತಾಡಬೇಕು, ಪ್ರತೀ ನಕರಾತ್ಮಕ ಆಲೋಚನೆಗಳಿಗೆ ನನ್ನಲ್ಲಿ ಹತ್ತು ಸಕರಾತ್ಮಕ ಆಲೋಚನೆಗಳಿರಬೇಕು, ಆಗ ದುರಾಲೋಚನೆಗಳಿಂದ ದೂರವಿರಲು ಸಾಧ್ಯ.

ನನ್ನ ಮನಸ್ಸಿನಲ್ಲಿ ಹೊಸ ಚಿತ್ರಗಳನ್ನು ಚಿತ್ರಿಸಿಕೊಳ್ಳಬೇಕು ನನ್ನ ಜೀವಿತದ ಪ್ರತಿಯೊಂದು ಕ್ಷೆತ್ರಕ್ಕೆ ಸಂಬಂಧಿಸಿದಂತೆ ,ದೇವರ ವಾಕ್ಯದ ಆಧಾರದ ಮೇಲೆ ಹೊಸ ಚಿತ್ರಗಳು ಮತ್ತು ಕಲ್ಪನೆಗಳನ್ನು ನಾನು ಚಿತ್ರಿಸಿಕೊಳ್ಳಬೇಕು

## 3.13. ಜನರು ಮಾತನಾಡುವ ಪದಗಳು

**ಕೀರ್ತನೆಗಳು 64:3**
**ಅವರು ನಾಲಿಗೆಯೆಂಬ ಕತ್ತಿಯನ್ನು ಮಸೆದಿದ್ದಾರೆ; ವಿಷವಚನವೆಂಬ ಬಾಣವನ್ನು ಹೂಡಿದ್ದಾರೆ**.

**ಜ್ಞಾನೋಕ್ತಿಗಳು 12:18**
**ಕತ್ತಿ ತಿವಿದ ಹಾಗೆ ದುಡುಕಿ ಮಾತಾಡುವವರುಂಟು; ಮತಿಪಂತರ ಮಾತೇ ಮದ್ದು.**

**ಜ್ಞಾನೋಕ್ತಿಗಳು 16:24**
**ಸವಿನುಡಿಯು ಜೇನುಕೊಡ; ಅದು ಆತ್ಮಕ್ಕೆ ಸಿಹಿ, ಎಲುಬಿಗೆ ಕ್ಷೇಮ.**

**ಜ್ಞಾನೋಕ್ತಿಗಳು 19:20,27**
**20 ಬುದ್ಧಿವಾದವನ್ನು ಕೇಳು; ಉಪದೇಶವನ್ನಾಲಿಸು, ಮುಂದೆ ಜ್ಞಾನಿಯಾಗುವಿ.**
**27 ಮಗನೇ, ಬುದ್ಧಿವಾದಗಳನ್ನು ಅನುಸರಿಸಲಿಕ್ಕೆ ಮನಸ್ಸಿಲ್ಲದಿದ್ದರ ಉಪದೇಶ ಕೇಳುವದನ್ನೇ ಬಿಟ್ಟುಬಿಡು.**

ಜನಗಳು ಹೇಳುವ ಮಾತುಗಳನ್ನು ಅಂಗೀಕರಿಸುವ ಮತ್ತು ನಿರಾಕರಿಸುವ ಸಾಮರ್ಥ್ಯವನ್ನು ಹೊಂದಿರಬೇಕು.

ಜನಗಳು ಆಡುವ ಮಾತುಗಳು ಆತ್ಮಕ್ಕೆ ಆದರಣೆಯನ್ನೂ ದುಃಖವನ್ನೂ ಮಾಡಬಹುದು – ಮನಸ್ಸು, ಚಿತ್ತ ಮತ್ತು ಭಾವನೆಗಳು

.

ಆದದರಿಂದ, ನಮಗೆ ಪ್ರತಿರೋಧಮಾಡಲು ಮತ್ತು ನಕರಾತ್ಮಕ ಪದಗಳನ್ನು ನಿಯಮಿತಗೊಳಿಸಲು ಸಾಮರ್ಥ್ಯವಿರಬೇಕು.

ಜನಗಳು ಮಾತನಾಡುವ ನಕರಾತ್ಮಕ ಪದಗಳನ್ನು ಪ್ರತಿರೋಧಿಸಬೇಕು, ಅದನ್ನೇ ದೇವರು ಆಗಲೇ ನಿಮ್ಮ ವಿಷವಾಗಿ ಮಾತನಾಡಿರುತ್ತಾನೆ.

“ನಾನು ದೇವರಾಗಿರುವ ನಾನೇ ಎಂದು ಹೇಳುತ್ತಾನೆ, ದೇವರು ಏನನ್ನು ಮಾಡಲು ಹೇಳುವವನಾಗಿದ್ದಾನೋ ಅದನ್ನು ನಾನು ಮಾಡ ಬಲ್ಲೆನು, ದೇವರು ವಗ್ದಾನಮಾಡಿದ್ದೆಲ್ಲವನ್ನೂ ನಾನು ಆಗಬಲ್ಲೆನು” ಈ ರೀತಿಯ ಆಲೋಚನೆ ನಮಗಿರಬೇಕು.

## 3.14. ಚಿಂತೆಗಳನ್ನು ಜಯಿಸುವುದು.

**ಯೆಶಾಯ 26:3**
**ಸ್ಥಿರಚಿತ್ತವನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ; ಅವನಿಗೆ ನಿನ್ನಲ್ಲಿ ಭರವಸವಿದೆ.**

ಪರಿಪೂರ್ಣ ಶಾಂತಿ (ಶಾಲೋಂ ಶಾಲೋಂ)

ಮನಸ್ಸು (ಇಬ್ರಿಯ ಭಾಷೆಯಲ್ಲಿ ‘ಯೆಸ್ಟರ್’) = ಪರಿಕಲ್ಪನೆ, ಚೌಕಟ್ಟು, ವಸ್ತು ಚೌಕಟ್ಟು, ಕಲ್ಪನೆ, ಮನಸ್ಸು, ಕೆಲಸ.

ಉಳಿಯಿತು (ಇಬ್ರಿಯ) = ಒರಗು, ನೆಲಿಸು.

ಪರಿಪೂರ್ಣ ಶಾಂತಿಯಿಂದ ನಡೆಯಲು ನಾವು ವಿಶ್ರಾಂತಿ ಪಡೆಯಲು ನಮ್ಮ ಮನಸ್ಸನ್ನು ದೇವರಲ್ಲಿ ಶಿಸ್ತು ಮತ್ತು ಅವಲಂಬನೆ ಮಾಡಬೇಕು.
ನಾವು ನಮ್ಮ ಅವಲಂಬನೆಯನ್ನು ವ್ಯಕ್ತಪಡಿಸುವ ಆಲೋಚನೆಗಳನ್ನು ಕರ್ತನಲ್ಲಿ ಕಾಪಾಡಿಕೊಳ್ಳಬೇಕು ಮತ್ತು ನಾವು ಕರ್ತನ ಮೇಲೆ ಅವಲಂಬಿತರಾಗಿರುವುದರ ಬಗ್ಗೆಯೂ.

**ಮತ್ತಾಯ 11:28–30**
**28 ಎಲೈ ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿಕೊಡುವೆನು.**
**29 ನಾನು ಸಾತ್ವಿಕನೂ ದೀನಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ;**
**30 ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು. ಯಾಕಂದರೆ ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯು ಹೌರವಾದದ್ದು ಅಂದನು.**

**1 ಪೇತ್ರ. 5:7**
**ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ, ಆತನು ನಿಮಗೋಸ್ಕರ ಚಿಂತಿಸುತ್ತಾನೆ.**

ಯಾವ ಸಂಬಂಧವಾಗಿಯೂ ಚಿಂತೆ ಮಾಡದೆ ಸರ್ವ ವಿಷಯಗಳಲ್ಲಿ ದೇವರ ಮುಂದೆ ಕೃತಜ್ಞತಾ ಸ್ತುತಿಯನ್ನೂ ಪ್ರಾರ್ಥನೆ ವಿಜ್ಞಾಪನೇಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ. ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಕ್ರಿಸ್ತಯೇಸುವಿನಲ್ಲಿ ಕಾಯುವುದು. (ಫಿಲಿಪ್ಪಿ. 4:6,7)

ಪ್ರಾರ್ಥನೆಯ ಮೂಲಕ ನಮ್ಮ ಚಿಂತೆಗಳನ್ನು ಆತನ ಸಮಾಧಾನಕ್ಕಾಗಿ ಬದಲಾಯಿಸಿಕೊಳ್ಳಬಹುದು ಅದು ನಮ್ಮ ಹೃದಯಗಳನ್ನೂ ಮನಸ್ಸನ್ನೂ ದಂಡಿನ ಪಟ್ಟಣವಾಗಮಾಡುತ್ತದೆ.

ಈ ಸಮಯದಲ್ಲಿ ನಿಮ್ಮ ಜೀವನದಲ್ಲಿ ಮೂರು ದೊಡ್ಡ ಚಿಂತೆಗಳು ಯಾವುವು?

1.

2.

3.

ಶಾಂತವಾಗಿರಿ, ಪ್ರಾರ್ಥಿಸಿರಿ ಮತ್ತು ಆತನ ಸಮಾಧಾನಕ್ಕಾಗಿ ನಿಮ್ಮ ಚಿಂತೆಗಳೆನ್ನೆಲ್ಲಾ ಬದಲಾಯಿಸಿಕೊಳ್ಳಿರಿ.

## 3.15. ಭದ್ರಕೋಟೆಗಳನ್ನು ಎಳೆದುಬಿಡುವುದು.

ಭದ್ರಕೋಟೆಗಳನ್ನು ಎಳೆದುಬಿಡುವುದರಲ್ಲಿ ಇನ್ನೂ ಅಧಿಕ ಕಾರ್ಯ ಮಾಡಬೇಕು. ಅನುದಿನವೂ ಆಲೋಚನೆಗಳು, ತರ್ಕಗಳು ಮತ್ತು ಕಲ್ಪನೆಗಳು ಬರುತ್ತವೆ-ಹೋಗುತ್ತವೆ. ಆದರೆ ಕೆಲವೇ ಅವಧಿಯಲ್ಲೇ ಭದ್ರಕೋಟೆಗಳು ಕಟ್ಟಲ್ಪಡುತ್ತದೆ.

- ಪಶ್ಚಾತ್ತಾಪ. ಪಶ್ಚಾತ್ತಾಪ ಸಾಧರನವಾಗಿಹೇಳಬೇಕೆಂದರೆ, ನಿಮ್ಮ ಆಲೋಚನೆಗಳಲ್ಲಿ ಬದಲಾಗುವುದು. ವಿಭಿನ್ನವಾಗಿ ಆಲೋಚಿಸಲು ಪ್ರಾರಂಭಿಸುವುದು.
- ಆ ಪ್ರಾಂತ್ಯವನ್ನು ದೇವರಿಗೆ ಒಪ್ಪಿಸಿರಿ.

**ಯಾಕೋಬ 4:7**
**ಆದದರಿಂದ ದೇವರಿಗೆ ಅಧೀನಪಡಿಸಿರಿ. ಸೈತಾನನನ್ನು ಎದುರಿಸಿ ಆತನು ನಿಮ್ಮನ್ನು ಬಿಟ್ಟು ಓಡಿಹೋಗುವನು**

- ಒಂದು ವೇಳೆ ಪ್ರವೇಶವನ್ನು ಪಡೆದೆರಬಹುದಾದ ಅನುಗುಣವಾದ ದುಷ್ಟಶಕ್ತಿಗಳನ್ನು ನಿರಾಕರಿಸಿ (ಎದುರಿಸಿ).

- ದುಷ್ಟಾತ್ಮಗಳ ಪ್ರಭಾವಗಳಿಗೆ ಬಾಗಿಲು ತೆರೆಯುವ ಪ್ರತಿಯೊಂದು ಚಟುವಟಿಕೆಯನ್ನು ತ್ಯಜಿಸಿ.

- ಇಟ್ಟಿಗೆಗಳನ್ನು ತೆಗೆದುಬಿಡಿರಿ. ಭದ್ರಕೋಟೆಯು ಆಲೋಚನೆಗಳಿಂದ ಮಾಡಲ್ಪಟ್ಟ ಗೃಹವಾಗಿದೆ. ಪ್ರತಿಯೊಂದೂ ಈ ಇಟ್ಟಿಗೆಗಳಲ್ಲಿ ಒಂದು ಭದ್ರಕೋಟೆಯಲ್ಲಿ ನಿರ್ಮಿಸಲಾಗಿದೆ ಅವುಗಳು ಸ್ಥಳಾಂರಿಸಲ್ಪಡಬೇಕು. ವಾಕ್ಯದಿಂದ ತೆಗೆಯಲ್ಪಟ್ಟಿದೆ, ದೇವರ ವಾಕ್ಕು ಸುತ್ತಿಗೆಯಂತೆ ಅದು ಒಡೆದುಬಿಡುತ್ತದೆ. (ಯೆರೆಮೀಯ. 23:29)

## 3.16. ಧರ್ಮಶಾಸ್ತ್ರವು ನಮಗೆ ಸಹಾಯಮಾಡುತ್ತದೆ.

ವಿರೋಧವಾಗಿ ಎದುರಿಸುವುದು

- ಸ್ತ್ರೀಯರ ಮೇಲೆ ದುರಿಚ್ಛೆ

**ಜ್ಞಾನೋಕ್ತಿಗಳು 6:25**
**ನಿನ್ನ ಹೃದಯು ಅವಳ ಬೆಡಗನ್ನು ಮೋಹಿಸದಿರಲಿ**

**ಜ್ಞಾನೋಕ್ತಿಗಳು 31:3**
**ನಿನ್ನ ತ್ರಾಣವನ್ನು ಸ್ತ್ರೀಯರಲ್ಲಿ ಒಪ್ಪಿಸದಿರು, ರಾಜರಿಗೆ ವಿನಾಶಕರವಾದ ದಾರಿಗೆ ತಿರುಗಬೇಡ**

- ಭಯ

**2 ತಿಮೋಥೆಯನಿಗೆ 1:7**
**ದೇವರು ನಮಗೆ ಕೊಟಿರುವ ಆತ್ಮವು ಬಲ ಪ್ರೀತಿ ಶಿಕ್ಷಣಗಳ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ**

**ಜ್ಞಾನೋಕ್ತಿ 28: 1**
**ಹಿಂದಟ್ಟದಿದ್ದರೂ ದುಷ್ಟನು ಹೆದರಿ ಓಡುವನು; ಶಿಷ್ಟನು ಸಿಂಹದಂತೆ ಧೈರ್ಯದಿಂದಿರುವನು**

- ತಿರಸ್ಕಾರ

**ಕೀರ್ತನೆಗಳು 5: 12**
**ಆದಕಾರಣ ನಿನ್ನ ಮೊರೆಹೊಕ್ಕವರೆಲ್ಲರೂ ಸಂತೋಷಪಡುವರು; ನೀನು ಕಾಪಾಡುವವನೆಂದು ಅವರು ಯಾವಾಗಲೂ ಆನಂದಧ್ವನಿಮಾಡುವರು. ನಿನ್ನ ನಾಮವನ್ನು ಪ್ರೀತಿಸುವವರು ನಿನ್ನಲ್ಲಿ ಉಲ್ಲಾಸಗೊಳ್ಳುವರು**

**ಕೀರ್ತನೆಗಳು 119: 74**
**ನಿನ್ನಲ್ಲಿ ಭಯಭಕ್ತಿಯುಳ್ಳವರು ನನ್ನನ್ನು ನೋಡಿ ಸಂತೋಷಿಸಲಿ; ನಾನು ನಿನ್ನ ವಾಕ್ಯವನ್ನೇ ನಿರೀಕ್ಷಿಸಿಕೊಂಡಿದ್ದೇನಲ್ಲಾ**

- ಚಿಂತೆ

**ಫಿಲಿಪ್ಪಿಯವರಿಗೆ 4:6-7**

**6 ಯಾವ ಸಂಬಂಧವಾಗಿಯೂ ಚಿಂತೆಮಾಡದೇ ಸರ್ವವಿಷಯದಲ್ಲಿ ದೇವರ ಮುಂದೆ ಕೃತಜ್ಞತಾ ಸ್ತುತಿಯನ್ನೂ ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ.**
**7 ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವುದು"**

- ಗೊಂದಲ

**1 ಕೊರಿಂಥದವರಿಗೆ 14: 33**
**ದೇವರು ಸಮಾಧಾನಕ್ಕೆ ಕಾರಣನೇ ಹೊರತು ಗಲಿಬಿಲಿಗೆ ಕಾರಣನಲ್ಲ**

- ಏಕಾಗ್ರತೆಯ ಕೊರತೆ

**2 ತಿಮೊಥೆಯನಿಗೆ 1:7**
**ದೇವರು ನಮಗೆ ಕೊಟ್ಟಿರುವ ಆತ್ಮವು ಬಲ ಪ್ರೀತಿ ಶಿಕ್ಷಣಗಳ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ**

ಉತ್ತಮ ಮನಸ್ಸು, ಉತ್ತಮ ಸ್ಮರಣೆ, ಉತ್ತಮ ಏಕಾಗ್ರತೆ ಮತ್ತು ಉತ್ತಮ ತಿಳುವಳಿಕೆಯನ್ನು ಹೊಂದಿರುತ್ತದೆ.
ಖಂಡನೆ (ಆರೋಪ,ಅಪರಾಧ,ಅನರ್ಹತೆ)

**ರೋಮಾಪುರದವರಿಗೆ 8:1,33,34**
**1 ಆದದರಿಂದ ಕ್ರಿಸ್ತ ಯೇಸುವಿನಲ್ಲಿರುವವರಿಗೆ ಅಪರಾಧನಿರ್ಣಯವು ಈಗ ಇಲ್ಲವೇ ಇಲ್ಲ.**
**33 ದೇವರು ಆದುಕೊಮಡವರ ಮೇಲೆ ಯಾರು ತಪ್ಪು ಹೊರಿಸಾರು? ದೇವರೇ ನಮ್ಮನ್ನು ನೀತಿವಂತರೆಂದು ನಿರ್ಣಯಿಸುವವನಾಗಿದ್ದಾನೆ.**
**34 ಅಪರಾಧಿಗಳೆಂದು ನಿರ್ಣಯಿಸುವವರ್ಯಾರು? ಕ್ರಿಸ್ತ ಯೇಸು ಮರಣವನ್ನು ಹೊಂದಿದ್ದಲ್ಲದೆ ಜೀವಿತನಾಗಿ ಎದ್ದು ದೇವರ ಬಲಗಡೆಯಲ್ಲಿದ್ದು ನಮಗೋಸ್ಕರ ಬೇಡುವವನಾಗಿದ್ದಾನೆ**

# 4 ನಿಮ್ಮ ಮನಸ್ಸನ್ನು ನವೀಕರಿಸುವುದು

,

## 4.1. ನಾವು ಹೊಸದಾಗಿ ಹುಟ್ಟುವುದಕ್ಕೆ ಮೊದ ಲು ನಮ್ಮ ಮನಸ್ಸಿನ ಸ್ಥಿತಿ

- ✓ ಕುರುಡುತನ

**2 ಕೊರಿಂಥದವರಿಗೆ 3; 14**
**ಆದರೆ ಅವರ ಬುದ್ಧಿ ಮಂದವಾಯಿತು. ಈದಿನದವರೆಗೂ ಹಳೇ ಒಡಂಬಡಿಕೆಯ ಪಾರಾಯಣವಾಗುವಾಗ ಅದು ಕ್ರಿಸ್ತನಲ್ಲಿ ಗತಿಸಿ ಹೋಗುತ್ತವೆಂಬುದು ಅವರಿಗೆ ಪ್ರಕಟವಾಗದೆ ಇದುವದರಿಂದ ಅದೇ ಮುಸುಕು ಎತ್ತಲ್ಪಡದೆ ಇರುತ್ತದೆ.**

**2 ಕೊರಿಂಥದವರಿಗೆ 4 : 3, 4**
**3 ನಾವು ಸಾರುವ ಸುವಾರ್ತೆಯು ಕೆಲವರಿಗೆ ಮರೆಯಾಗಿರುವದಾದರೆ ನಾಶನ ಮಾರ್ಗದಲ್ಲಿರುವವರಿಗೆ ಮರೆಯಾಗಿರುವುದು.**
**4 ಇದರಲ್ಲಿ ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗಬಾರದೆಂಬುದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸು ಮಂಕು ಮಾಡಿದನು.**

- ✓ ಅಶುದ್ಧ ಮತ್ತು ಭ್ರಷ್ಟ

**ಎಫೆಸದವರಿಗೆ 2 : 1- 3**
**1 ಆತನು ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಸಹ ಬದುಕಿಸಿದನು.**
**2 ನೀವು ಪೂರ್ವದಲ್ಲಿ ಅಪರಾಧಗಳನ್ನು ಪಾಪಗಳನ್ನೂ ಮಾಡುವವರಾಗಿದ್ದು ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ. ವಾಯುಮಂಡಲದಲ್ಲಿ ಅಧಿಕಾರ ನಡಿಸುವ ಅಧಿಪತಿಗೆ ಆಂದರೆ ನಂಬಲೊಲ್ಲದವರನ್ನು ಅವಿಧೇಯತಿಗೆ ಈ ಪ್ರೇರೇಪಿಸುವ ಆತ್ಮನಿಗೆ ಅನುಸಾರವಾಗಿ ನಡೆದುಕೊಂಡಿರಿ.**
**3 ನಾವೆಲ್ಲರೂ ಪೂರ್ವದಲ್ಲಿ ಅವಿಧೇಯರಾಗಿದ್ದು ಶರೀರಭಾವದ ಆಶೆಗಳಿಗೆ ಚಿಆಧೀನರಾಗಿ ಶರೀರಕ್ಕೂ ಮನಸ್ಸಿಗೂ ಸಂಬಂಧಪಟ್ಟ ಇಚ್ಛೆಗಳನ್ನು ನರೆವೇರಿಸುತ್ತಾ ನಡೆದು ಮಿಕ್ಕಾದವರಂತೆ ಸ್ವಭಾವಸಿದ್ಧವಾಗಿ ದೇವರ ಕೋಪಕ್ಕೆ ಗುರಿಯಾಗಿದ್ದೆವು.**

- ✓ ವ್ಯರ್ಥ

**ಎಫೆಸದವರಿಗೆ 4:17**
**ಆದುದರಿಂದ ಅನ್ಯಜನರು ನಡೆದುಕೊಳ್ಳುವ ಪ್ರಕಾರ ನೀವು ಇನ್ನು ಮೇಲೆ ನಡೆದುಕೊಳ್ಳಬಾರದೆಂದು ಕರ್ತನಲ್ಲಿರುವವನಾಗಿ ನಿಮಗೆ ಖಂಡಿತವಾಗಿ ಹೇಳುತ್ತೇನೆ.**

- ✓ ಪ್ರಾಪಂಚಿಕ

**ರೋಮಾಪುರದವರಿಗೆ 8:5-8**
**5 ಶರೀರಭಾವವನ್ನು ಅನುಸರಿಸುವವರು ಅದಕ್ಕೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ. ಪವಿತ್ರಾತ್ಮನನ್ನು ಅನುಸರಿಸುವವರು ಪವಿತ್ರಾತ್ಮನಿಗೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ.**
**6 ಶರೀರಭಾವದವುಗಳ ಮೇಲೆ ಮನಸ್ಸಿಡುವುದು ಮರಣ. ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವುದು ಜೀವವೂ ಮನಶ್ಶಾಂತಿಯೂ ಆಗಿದೆ.**
**7 ಯಾಕೆಂದರೆ ಶರೀರಭಾವದವುಗಳ ಮೇಲೆ ಮನಸ್ಸಿಡುವುದು ದೇವರಿಗೆ ಶತ್ರುತ್ವವು ಅಂಥ ಮನಸ್ಸು ದೇವರ ನಿಯಮಕ್ಕೆ ಒಳಪಡುವದೂ ಇಲ್ಲ**
**8 ಶರೀರಭಾವಧೀನರು ದೇವರಿಗೆ ಮೆಚ್ಚಿಕೆಯಾಗಿರಲಾರರು**.

- ✓ ನಮ್ಮ ಮನಸ್ಸಿನಲ್ಲಿನ ವೈರಿಗಳು.

**ಕೊಲೊಸ್ಸೆಯವರಿಗೆ 1: 21**
**ಇದಲ್ಲದೆ ನೀವು ಹಿಂದಿನ ಕಾಲದಲ್ಲಿ ಅನ್ಯರೂ ದುಷ್ಕೃತ್ಯಗಳನ್ನು ಮಾಡುವವರಾಗಿ ದ್ವೇಷ ಮನಸ್ಸುಳ್ಳವರೂ ಆಗಿದ್ದರೂ ಆತನು ನಿಮ್ಮನ್ನು ಸಹ ತನ್ನ ಕುಮಾರನ ಸ್ಥೂಲ ದೇಹದಲ್ಲಿ ಉಂಟಾದ ಮರಣದ ಮೂಲಕ ಈಗ ಸಂಧಾನಪಡಿಸಿಕೊಂಡಿದ್ದಾನೆ.**

- ✓ ನೀತಿಗೆಟ್ಟ ( ಭ್ರಷ್ಟ) ಮನಸ್ಸು

**ರೋಮಾಪುರದವರಿಗೆ 1: 28**
**ಇದಲ್ಲದೆ ದೇವರ ಜ್ಞಾನವು ಅವರಿಗೆ ಇಷ್ಟವಿಲ್ಲದ್ದರಿಂದ ಅಲ್ಲದ ಕೃತ್ಯಗಳನ್ನು ನಡಿಸುವವರಾಗುವಂತೆ ದೇವರು ಅವರನ್ನು ಅನಿಷ್ಟ ಭಾವಕ್ಕೆ ಒಪ್ಪಿಸಿದನು**.

- ✓ ಇಹಲೋಕದ – ಮನಸ್ಸು

**ಫಿಲಿಪ್ಪಿಯವರಿಗೆ 3 : 19**
**ನಾಶನವೇ ಅವರ ಅಂತ್ಯಾವಸ್ಥೆ ಹೊಟ್ಟೆಯೇ ಅವರ ದೇವರು ನಾಚಿಕೆ ಕೆಲಸಗಳಲ್ಲಿಯೇ ಅವರ ಗೌರವವು ಅವರು ಪ್ರಪಂಚದ ಕಾರ್ಯಗಳ ಮೇಲೆ ಮನಸ್ಸಿಡುವವರು ನಾವಾದರೋ ಪರಲೋಕ ಸಂಸ್ಥಾನದವರು.**

- ✓ ನಮ್ಮ ಶಾರೀರಿಕ ಮನಸ್ಸುಗಳಿಂದ ವ್ಯರ್ಥವಾಗಿ ಉಬ್ಬಿಕೊಂಡಿರುವುದು ( ಗರ್ವ, ಆಡಂಬರದ )

**ಕೊಲೊಸ್ಸೆಯವರಿಗೆ 2 : 18**
**ಕೆಲವರು ಅತಿ ವಿನಯದಲ್ಲಿಯೂ ದೇವದೂತರ ಪೂಜೆಯಲ್ಲಿಯೂ ಆಸಕ್ತರಾಗಿದ್ದಾರೆ. ತಮಗೆ ದರ್ಶನಗಳಾದವೆಂದು ಕೊಚ್ಚಿಕೊಳ್ಳುತ್ತಾರೆ ಮತ್ತು ಪ್ರಾಪಂಚಿಕ ಬುದ್ಧಿಯಿಂದ ನಿರಾಧಾರವಾಗಿ ಉಬ್ಬಿಕೊಂಡಿದ್ದಾರೆ.**

- ✓ ಅಪವಿತ್ರ ಮನಸ್ಸು

**ತೀತನು 1 : 15**
**ಶುದ್ಧರಿಗೆ ಎಲ್ಲವೂ ಶುದ್ಧವೇ ಆದರೆ ಮಲಿನವಾದವರಿಗೂ ನಂಬಿಕೆಯಿಲ್ಲದವರಿಗೂ ಯಾವದೂ ಶುದ್ಧವಲ್ಲ ಅವರ ಬುದ್ಧಿಯೂ ಮನಸ್ಸಾಕ್ಷಿಯೂ ಎರಡೂ ಮಲಿನವಾಗಿದೆ.**

ಹೊಸದಾಗಿ – ತಿರುಗಿ ಹುಟ್ಟಿದಾಗಲೂ, ಒಬ್ಬ ವಿಶ್ವಾಸಿಯು ಅವನ \ ಅವಳ ಮನಸ್ಸಿನಲ್ಲಿ ಇಂತಹ ಸ್ಥಿತಿಗಳನ್ನು ಹೊಂದಿರುತ್ತಾರೆ.

## 4.2. ನಮ್ಮ ಮನಸ್ಸುಗಳನ್ನು ನೂತನಗೊಳಿಸುವುದು ಎಂಬುದರ ಅರ್ಥವೇನು?

**ರೋಮಾಪುರದವರಿಗೆ 12 : 2**
**ಇಹಲೋಕದ ನಡುವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ.**

ನಿಮ್ಮ ಮನಸ್ಸುಗಳನ್ನು ನೂತನಗೊಳಿಸುವುದರಿಂದ (ನವೀಕರಣ, ಸುಧಾರಣೆ). ರೂಪಾಂತರಗೊಂಡಿದೆ. ( ನಿಮ್ಮ ಮನಸ್ಸುಗಳನ್ನು (ಗ್ರೀಕ್ ನಲ್ಲಿ, ನೌಸ್ = ಬುದ್ಧಿಶಕ್ತಿ, ತಿಳುವಳಿಕೆ) ನೂತನಗೊಳಿಸುವುದರಿಂದ (ನವೀಕರಣ, ಸುಧಾರಣೆ ) ರೂಪಾಂತರಗೊಂಡಿದೆ. (ಗ್ರೀಕ್ ನಲ್ಲಿ ಮೆಟಮಾರಿಪೋವಾ)

**ಎಫೆಸದವರಿಗೆ 4 :22 – 24**
**22 ಯೇಸುವಿನಲ್ಲಿರುವ ಸತ್ಯೋಪದೇಶವು ಯಾವದೆಂದರೆ - ನೀವು ನಿಮ್ಮ ಹಿಂದಿನ ನಡತೆಯನ್ನು ಅನುಸರಿಸದೆ ಪೂರ್ವಸ್ವಭಾವವನ್ನು ತೆಗೆದು ಹಾಕಿಬಿಡಬೇಕು. ಅದು ಮೋಸಕರವಾದ ದುರಾಶೆಗಳಿಂದ ಕೆಟ್ಟು ಹೋಗುವಂಥದು**
**23 ನೀವು ನಿಮ್ಮ ಅಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ.**

**24 ಈ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವ ಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ.**

ನಮ್ಮ ಮನಸ್ಸುಗಳ ವರ್ತನೆಗಳಲ್ಲಿ ನಾವು ನೂತನ ಗೊಂಡಿರಬೇಕು.

**ಯೆಶಾಯ 55 : 7 – 9**
**7 ದುಷ್ಟನು ತನ್ನ ದುರ್ಮಾರ್ಗವನ್ನು ಬಿಡಲಿ. ಕೆಡುಕನು ತನ್ನ ದುರಾಲೋಚನೆಗಳನ್ನು ತ್ಯಜಿಸಲಿ. ಯೆಹೋವನ ಕಡೆಗೆ ತಿರುಗಿಕೊಂಡು ಬರಲಿ. ಆತನು ಅವನನ್ನು ಕರುಣಿಸುವನು. ನಮ್ಮ ದೇವರನ್ನು ಆಶ್ರಯಿಸಲಿ ಆತನು ಮಹಾ ಕೃಪೆಯಿಂದ ಕ್ಷಮಿಸುವನು.**
**8 ಯೆಹೋವನು ಹೀಗನ್ನುತ್ತಾನೆ ನನ್ನ ಅಲೋಚನೆಗಳು ನಿಮ್ಮ ಆಲೋಚನೆಗಳಲ್ಲ ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ**
**9 ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ.**

ಮಾರ್ಗಗಳು ( ಇಬ್ರಿಯ. ಡೆರೆಕ್ ) = ಒಂದು ರಸ್ತೆ ( ತುಳಿದು ಹಾಕುವಂತೆ ) : ಸಾಂಕೇತಿಕವಾಗಿ, ಕ್ರಿಯೆ, ರೂಢಿ, ವಿಧಾನ, ಪ್ರಮಾಣದ ರೀತಿ ಅಥವಾ ಜೀವನದ ಒಂದು ಚಲನೆ. ನಮ್ಮ ಮನಸ್ಸುಗಳನ್ನು ನೂತನ ಪಡಿಸಿಕೊಳ್ಳುವುದರಲ್ಲಿ – ನಮ್ಮ ಆಲೋಚನೆಗಳನ್ನು ಮತ್ತು ಲೌಕಿಕ, ಪ್ರಾಪಂಚಿಕ, ಭ್ರಷ್ಟ ಮಾರ್ಗಗಳನ್ನುನಾವು ತ್ಯಜಿಸಬೇಕು ಮತ್ತು ದೇವರ ಆಲೋಚನೆಗಳು ಮತ್ತು ದೇವರ ಮಾರ್ಗಗಳನ್ನು ತೆಗೆದುಕೊಳ್ಳಬೇಕು.

**ಇಬ್ರಿಯರಿಗೆ 10 : 15, 16 (ಇಬ್ರಿಯರಿಗೆ 8 : 10 – 12 ಸಹ ನೋಡಿರಿ)**
**15 ಪವಿತ್ರಾತ್ಮನು ಸಹ ನಮಗೆ ಸಾಕ್ಷಿಕೊಡುವವನಾಗಿ**
**16 ಆ ದಿನಗಳು ಬಂದ ಮೇಲೆ ನಾನು ಅವರ ಸಂಗಡ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವುದು ನನ್ನ ಆಜ್ಞೆಗಳನ್ನು ಅವರ ಹೃದಯದಲ್ಲಿ ಇಡುವೆನು. ಅವರ ಮನಸ್ಸಿನ ಮೇಲೆ ಅವುಗಳನ್ನು ಬರೆಯುವೆನು ಎಂದು ಕರ್ತನು ನುಡಿಯುತ್ತಾನೆ. ಎಂಬುದಾಗಿ ಹೇಳಿದ ಮೇಲೆ ಇನ್ನು**

ನಮ್ಮ ಆಲೋಚನೆಗಳು ಮತ್ತು ಕಲ್ಪನೆಗಳ ಮೇಲೆ ಆತನ ವಾಕ್ಯವು ಕೆತ್ತಲ್ಪಡಬೇಕೆಂಬುದಾಗಿ ದೇವರು ಅಪೇಕ್ಷಿಸುತ್ತಾನೆ. ನಮ್ಮ ಮನಸ್ಸುಗಳು ನವೀಕರಿಸುವುದು ಪ್ರಗತಿಯಲ್ಲಿರುವ, ಮರುಕಳುಹಿಸುವ ಪ್ರಕ್ರಿಯೆಯಾಗಿದೆ. ಕಾಲಾನಂತರದಲ್ಲಿ ಅದನ್ನು ಉಳಿಸಿಕೊಳ್ಳಬೇಕು.

ವಾಕ್ಯದಿಂದ ಏನಾದರೂಂದನ್ನು ತಿಳಿದುಕೊಳ್ಳುವುದು ನಮ್ಮ ಮನಸ್ಸುಗಳನ್ನು ನವೀಕರಿಸಿಕೊಂಡ ರೀತಿಯಲ್ಲೇ ಇರುವುದಿಲ್ಲ.

ನಿರ್ದಿಷ್ಟ ಕ್ಷೇತ್ರದಲ್ಲಿ ನಮ್ಮ ಮನಸ್ಸುಗಳು ನೂತನಗೊಂಡಿರುವುದು ಎಂಬುದಾಗಿ ನಾವು ಹೇಳುವಾಗ ನಮ್ಮ ಜೀವಿತಗಳು ( ನಡವಳಿಕೆಗಳು ) ಅಂತಹ ಕ್ಷೇತ್ರದಲ್ಲಿ ರೂಪಾಂತರಗೊಂಡಿರುತ್ತದೆ. ಕ್ರಿಸ್ತನಲ್ಲಿ ನಾವು ನಂಬಿಕಿಯಿಟ್ಟಿರುವಾಗ ರಕ್ಷಣೆಯು

ಜರುಗುತ್ತದೆ. ನಮ್ಮ ಮನಸ್ಸುಗಳು ಆತ್ಮ ಮತ್ತು ವಾಕ್ಯದ ಕೆಲಸದ ಮೂಲಕವಾಗಿ ರೂಪಾಂತರ ಉಂಟಾಗುತ್ತದೆ.

## 4.3. ನಮ್ಮ ಮನಸ್ಸುಗಳ ಮೇಲೆ ದೇವರ ವಾಕ್ಯದ ಪರಿಣಾಮ.

**ಇಬ್ರಿಯರಿಗೆ 4 : 12 .**
**ಯಾಕಂದರೆ ದೇವರ ವಾಕ್ಯವು ಸಜೀವವಾದದ್ದು ಕಾರ್ಯಸಾಧಕವಾದದ್ದು ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು ಪ್ರಾಣ ಆತ್ಮಗಳನ್ನೂಕೀಲು ಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದು ಹೃದಯದ ಆಲೋಚನೆಗಳನ್ನೂ ಉದ್ದೇಶಗಳನ್ನೂ ವಿವೇಚಿಸುವಂಥದು ಆಗಿದೆ.**

ದೇವರ ವಾಕ್ಯವು ನಮ್ಮ ಆಲೋಚನೆಗಳು, ಕಲ್ಪನೆಗಳು, ಮತ್ತು ಪ್ರತಿಬಿಂಬಗಳನ್ನು ನ್ಯಾಯತೀರಿಸುತ್ತಾನೆ. ( ಮೌಲ್ಯವನ್ನು ನಿರ್ಧರಿಸುತ್ತಾನೆ ). ದೇವರ ವಾಕ್ಯದಿಂದ ನಮ್ಮ ಎಲ್ಲಾ ಆಲೋಚನೆಗಳು. ತರ್ಕಗಳು, ಕಲ್ಪನೆಗಳು ಸಮವರ್ತಿಯಾಗಿ ನ್ಯಾಯ ತೀರ್ಪುಹೊಂದಲ್ಪಡುತ್ತವೆ ( ಮೌಲ್ಯೀಕರಿಸಲ್ಪಟ್ಟಿವೆ, ತೂಗಿಸಲ್ಪಟ್ಟಿವೆ )

**ಯಾಕೊಬನು 1 : 21**
**ಆದಕಾರಣ ಎಲ್ಲಾ ನೀಚತನವನ್ನೂ ಎಲ್ಲಾ ದುಷ್ಟತನವನ್ನೂ ತೆಗೆದುಹಾಕಿ ಮನಸ್ಸಿನೊಳಗೆ ಬೇರೂರಿರುವ ವಾಕ್ಯಕ್ಕೆನಮ್ರತೆಯಿಂದ  ಎಡೆಗೊಡಿರಿ ಅದು ನಿಮ್ಮ ಆತ್ಮಗಳನ್ನು ರಕ್ಷಿಸುವುದಕ್ಕೆ ಸಾಮ ರ್ಥ್ಯವುಳ್ಳದ್ದಾಗಿದೆ.**

ದೇವರ ವಾಕ್ಯವು ನಮ್ಮಲ್ಲಿ ಕೆತ್ತಲ್ಪಡಬೇಕು. ( ಬೇರೂರಲ್ಪಡಬೇಕು ) ಇದು ನಡೆಯುವಾಗ ಇದು ನಮ್ಮ ಆತ್ಮಗಳನ್ನು ರಕ್ಷಿಸುತ್ತದೆ. ( ಗ್ರೀಕನಲ್ಲಿ - ಸೋಡ್ಜೋ = ಬಿಡುಗಡೆ, ಸಂರಕ್ಷಿಸು, ಸ್ವಸ್ಥಗೊಳಿಸು, ಸಂಪೂರ್ಣವಾಗಿ ಮಾಡುವುದಾಗಿದೆ ).

**ಯೋಹಾನ 15 : 3**
**ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ   ಈಗ ಶುದ್ಧರಾಗಿದ್ದೀರಿ**.

**ಯೋಹಾನ 17 : 17**
**ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಟೆಪಡಿಸು, ನಿನ್ನ ವಾಕ್ಯವೇ ಸತ್ಯವು.**

**ಎಫೆಸದವರಿಗೆ 5 : 26**
**ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ ಆತನು ಅದನ್ನು ಪ್ರತಿಷ್ಟೆಪಡಿಸುವುದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು.**

ದೇವರ ವಾಕ್ಯವು ನಮ್ಮ ಮನಸ್ಸುಗಳು ಮತ್ತು ಆಲೋಚನೆಗಳ ಮೇಲೆ “ ತೊಳೆಯುವ “ ಮತ್ತು “ಶುದ್ಧೀಕರಿಸುವ”   ಪರಿಣಾಮ ಹೊಂದಿವೆ.

**1 ಪೇತ್ರನು 1 : 22**
**ನೀವು ಸತ್ಯೋಪದೇಶಕ್ಕೆ ವಿಧೇಯರಾಗಿದ್ದು ನಿಮ್ಮ ಆತ್ಮಗಳನ್ನುಶುದ್ಧಮಾಡಿಕೊಂಡದ್ದರಿಂದ ನಿಷ್ಕಪಟವಾದ ಸಹೋದರ ಸ್ನೇಹವುಳ್ಳವರಾಗಿರತಕ್ಕದ್ದು ಹೀಗಿರುವಾಗ ಒಬ್ಬರನ್ನೊಬ್ಬರು ಹೃದಯಪೂರ್ವಕವಾಗಿಯೂ ಯಥಾರ್ಥವಾಗಿಯೂ ಪ್ರೀತಿಸಿರಿ.**

**2 ಪೇತ್ರನು 3 : 1**
**ಪ್ರಿಯರೇ ನಿಮಗೀಗ ಬರೆಯುವುದು ಎರಡನೆಯ ಪತ್ರಿಕೆ (ಈ ಎರಡು ಪತ್ರಿಕೆಗಳಲ್ಲಿಯೂ ಜ್ಞಾಪಕಕೊಟ್ಟು ನಿಮ್ಮ ಸರಳ ಮನಸ್ಸನ್ನು ಪ್ರೇರಿಸಿದ್ದೇನೆ.**

ದೇವರ ವಾಕ್ಯದಲ್ಲಿ ಧ್ಯಾನ ಮಾಡುವುದು ಮತ್ತು ಸತ್ಯಕ್ಕೆ ವಿಧೇಯರಾಗುವುದರಿಂದ ನಾವು ಶುದ್ಧವಾದ ಮನಸ್ಸುಳ್ಳವರಾಗುತ್ತೇವೆ.

ಶುದ್ಧವಾದ ಮನಸ್ಸುಳ್ಳವರಾಗಿರುವುದು ಸೈತಾನನ ಆ ದಾಳಿಯಿಂದ ವಿನಾಯಿತಿಯನ್ನು ನಾವು ಪಡೆದಿದ್ದೇವೆಂಬುದಾಗಿಯಲ್ಲ ಆದರೆ ಸೈತಾನನ ಆಲೋಚನೆಗಳು ವಾಸಿಸಲು ಸ್ಥಳವನ್ನು ನೀಡದಂತಹ ಒಂದು ಮನಸ್ಸು ಇದಾಗಿರುತ್ತದೆ.

## 4.4. ನಮ್ಮ ಮನಸ್ಸುಗಳನ್ನು ನವೀಕರಿಸುವುದು ಏಕೆ ಪ್ರಾಮುಖ್ಯವಾಗಿದೆ?

- ✓ ದೇವರನ್ನು ಪ್ರೀತಿಸಲು ಮತ್ತು ಆರಾಧಿಸಲು

**ಮಾರ್ಕನು 12 : 29 – 31**
**29 ಆತನನ್ನು ಕೇಳಿದ್ದಕ್ಕೆ ಯೇಸು ಇಸ್ರಾಯೇಲ್ ಜನವೇ ಕೇಳು**
**30 ನಮ್ಮ ದೇವರಾದ ಕರ್ತನನ್ನು ಪೂರ್ಣಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು ಎಂಬುದೇ ಮೊದಲನೆಯ ಆಜ್ಞೆ**
**31 ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬುದೇ ಎರಡನೆಯ ಆಜ್ಞೆ ಇವುಗಳಿಗಿಂತ ಹೆಚ್ಚಿನ ಆಜ್ಞೆಮತ್ತೊಂದಿಲ್ಲ ಎಂದು ಉತ್ತರ ಕೊಟ್ಟನು.**

ಮಾರ್ಕ 12 : 30 ರಲ್ಲಿ "ಮನಸ್ಸು" ಎಂಬ ಪದವು ( ಗ್ರೀಕ್ ನಲ್ಲಿ ಡಯಾನೋಯಾ ) = ಆಳವಾದ ಆಲೋಚನೆ, ಕಲ್ಪನೆ, ಮನಸ್ಸು, ತಿಳುವಳಿಕೆ.

- ✓ ಒಂದು ರೂಪಾಂತರ ಜೀವಿತ ಜೀವಿಸಲು

**ರೋಮಾಪುರದವರಿಗೆ 12 : 1-2**
**1 ಆದದರಿಂದ ಸಹೋದರರೇ ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನೆಂದರೆ ನೀವು ನಿಮ್ಮ ನಿಮ್ಮದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು**
**2 ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ.**

ದೇವರ ವಾಕ್ಯದಿಂದ ನಮ್ಮ ಮನಸ್ಸು ನೂತನಗೊಂಡಾಗ, ನಮ್ಮ ಆಲೋಚನೆ ಮಾದರಿಗಳು, ಭಾವನೆಗಳು, ಪ್ರತಿಕ್ರಿಯೆಗಳು ನಡವಳಿಕೆ ಮತ್ತು ಜೀವನ ಶೈಲಿಯು ಕ್ರಿಸ್ತನ ಸ್ವಾರೂಪ್ಯಕ್ಕೆ ರೂಪಾಂತರಗೊಳ್ಳುತ್ತದೆ.

- ✓ ದೇವರ ಚಿತ್ತ ತಿಳಿಯುವುದು ಮತ್ತು ಸಾಬೀತು ಪಡಿಸುವುದು.

**ರೋಮಾಪುರದವರಿಗೆ 12 : 1- 2**
**1 ಆದದರಿಂದ ಸಹೋದರರೇ ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಮ್ಮನ್ನು ಬೇಡಿಕೊಳ್ಳುವದೇನೆಂದರೆ ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ. ಇದೇ ನಿಮ್ಮ ವಿವೇಕ ಪೂರ್ವಕವಾದ ಆರಾಧನೆಯು**
**2 ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹಾಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ.**

**ಎಫೆಸದವರಿಗೆ 5 : 10, 17**
**10 ಕರ್ತನಿಗೆ ಮೆಚ್ಚಿಗೆಯಾದದ್ದು ಏನೆಂಬದನ್ನು ಪರಿಶೋಧಿಸಿ ತಿಳುಕೊಳ್ಳಿರಿ**
**17 ಮತ್ತು ಬುದ್ಧಿಹೀನರಾಗಿ ನಡೆಯದೆ ಕರ್ತನ ಚಿತ್ತವೇನೆಂಬದನ್ನು ವಿಚಾರಿಸಿ ತಿಳಿದವರಾಗಿರ್ರಿ.**

- ✓ ಒಳ್ಳೆಯದು ( ಸರಿ ) ಮತ್ತು ಕೆಟ್ಟದ್ದು ( ತಪ್ಪು ) ಗ್ರಹಿಸುವುದು.

**ಇಬ್ರಿಯರಿಗೆ 5 : 13, 14**
**13 ಹಾಲು ಬೇಕಾದವನು ಕೂಸಿನಂತಿದ್ದು ನೀತಿವಾಕ್ಯದಲ್ಲಿ ಅನುಭವವಿಲ್ಲದವನಾಗಿದ್ದಾನೆ**
**14 ಗಟ್ಟಿಯಾದ ಆಹಾರವು ಪ್ರಾಯಸ್ಥರಿಗೋಸ್ಕರ ಅಂದರೆ ಜ್ಞಾನೇಂದ್ರಿಯಗಳನ್ನು ಸಾಧನೆಯಿಂದ ಶಿಕ್ಷಿಸಿಕೊಂಡು ಇದು ಒಳ್ಳೇದು ಅದು ಕೆಟ್ಟದ್ದು ಎಂಬ ಭೇದವನ್ನು ತಿಳಿದವರಿಗೋಸ್ಕರವಾಗಿದೆ.**

ಮನಸ್ಸಿನ ವಿಜಯ

ನಿರಂತರವಾದ ದೇವರ ವಾಕ್ಯದ ಉಪಯೋಗದ ಮೂಲಕವಾಗಿ, ನಮ್ಮ ಜ್ಞಾನೇಂದ್ರಿಯಗಳು ತಕ್ಷಣವೇ ಕೆಟ್ಟದ್ದರಿಂದ ಒಳ್ಳೆಯದನ್ನು ಗ್ರಹಿಸಲು ತರಬೇತಿ ಹೊಂದುತ್ತವೆ.

- ✓ ದೇವರ ವಾಕ್ಯವನ್ನು ಅರ್ಥಮಾಡಿಕೊಳ್ಳುವುದು.

**ಮತ್ತಾಯ 13 : 23**
**ಒಬ್ಬನು ವಾಕ್ಯವನ್ನು ಕೇಳಿ ತಿಳುಕೊಂಡು ಫಲವಂತನಾಗಿ ನೂರರಷ್ಟಾಗಲಿ ಆರವತ್ತರಷ್ಟಾಗಲಿ ಮೂವತ್ತರಷ್ಟಾಗಲಿ ಫಲವನ್ನುಕೊಡುತ್ತಾನೆ ಇವನೇ ಒಳ್ಳೆಯ ನೆಲವಾಗಿರುವವನು ಎಂದು ಹೇಳಿದನು.**

**ಅಪೊಸ್ತಲರ ಕೃತ್ಯಗಳು 17 : 11**
**ಆ ಸಭೆಯವರು ಥೆಸಲೋನಿಕದವರಿಗಿಂತ ಸದ್ಗುಣವುಳ್ಳವರಾಗಿದ್ದು ದೇವರ ವಾಕ್ಯವನ್ನು ಶುದ್ದ ಮನಸ್ಸಿನಿಂದ ಅಂಗೀಕರಿಸಿ ಇವರು ಹೇಳುವ ಮಾತು ಹೌದೋ ಏನೋ ಎಂಬ ವಿಷಯದಲ್ಲಿ ಪ್ರತಿದಿನವೂ ಶಾಸ್ತ್ರಗ್ರಂಥಗಳನ್ನು ಶೋಧಿಸುತ್ತಿದ್ದರು.**

**2 ತಿಮೋಥೆಯನಿಗೆ 2 : 15**
**ನೀನು ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಪ್ರಯಾಸಪಡು ಅವಮಾನಕ್ಕೆ ಗುರಿಯಾಗದ ಕೆಲಸದವನೂ ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು.**

- ✓ ಕ್ರಿಸ್ತನಲ್ಲಿ ಒಂದು ಸತ್ಯವಾದ " ಸ್ವ – ಚಿತ್ರಣ " ಪಾಲಿಸುವುದು.

**ಯಾಕೋಬನು 1 : 22 – 24**
**22 ವಾಕ್ಯದ ಪ್ರಕಾರ ನಡೆಯುವವರಾಗಿರಿ ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ.**
**23 ಯಾವನಾದರೂ ವಾಕ್ಯವನ್ನು ಕೇಳುವವನಾದರೂ ಅವರ ಪ್ರಕಾರ ನಡೆಯದಿದ್ದರೆ ಅವನು ಕನ್ನಡಿಯಲ್ಲಿ ತನ್ನ ಹುಟ್ಟು ಮುಖವನ್ನು ನೋಡಿದ ಮನುಷ್ಯನಂತಿರುವನು**
**24 ಇವನು ತನ್ನನ್ನು ನೋಡಿಕೊಂಡು ಹೋಗಿ ತಾನು ಹೀಗಿದ್ದೇನೆಂಬದನ್ನು ಆ ಕ್ಷಣವೇ ಮರೆತುಬಿಡುವನು.**

ನಾವು ನಿಜವಾಗಿ ಯಾರಾಗಿದ್ದೇವೆ ಎಂಬುದರ ನಮ್ಮ ಸತ್ಯವಾದ ಸ್ವರೂಪವನ್ನು ಸತ್ಯವೇದವು ಪ್ರಕಟಿಸುತ್ತದೆ.

- ✓ ಆತ್ಮನ ಸ್ವರವನ್ನು, ಸಾಕ್ಷಿಯನ್ನು ಮತ್ತು ನಡೆಸುವಿಕೆಯನ್ನು ಗ್ರಹಿಸುವುದು.

**ಯೋಹಾನ 16 : 13 – 15**
**13 ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೋ ಆಡುವನು ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು**

**14 ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆಪಡಿಸುವನು.**
**15 ತಂದೆಗೆ ಇರುವದೆಲ್ಲಾ ನನ್ನದು ಆದದರಿಂದಲೇ ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುವನೆಂದು ಹೇಳಿದೆನು.**

**ರೋಮಾಪುರದವರಿಗೆ 8 : 14 – 16**
**14 ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು**
**15 ನೀವು ತಿರಿಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ ಮಗನ ಭಾವವನ್ನು ಹೊಂದಿದವರಾಗಿದ್ದೀರಿ. ಈ ಭಾವದಿಂದ ನಾವು ದೇವರನ್ನು ಅಪ್ಪಾ ತಂದೆಯೇ ಎಂದು ಕೂಗುತ್ತೇವೆ.**
**16 ನಾವು ದೇವರ ಮಕ್ಕಳಾಗಿದ್ದೇವೆಂಬದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ**.

ನಮ್ಮ ಸ್ವಂತ ಭಾವನೆಗಳ ಸ್ವರ ಮತ್ತು ಆತ್ಮನ ಸ್ವರದ ಸ್ವರದ ನಡುವಿನ ವ್ಯತ್ಯಾಸವನ್ನು ತಿಳಿಯಲು ನೂತನವಾದ ಮನಸ್ಸು ಸಹಾಯ ಮಾಡುತ್ತದೆ.

- ✓ ನಮ್ಮನ್ನು (ಮತ್ತು ನಮ್ಮ ಮನಸ್ಸುಗಳನ್ನು) ಭ್ರಷ್ಟಗೊಳಿಸದಂತೆ ಇಟ್ಟುಕೊಳ್ಳುವುದು.

**2 ಕೊರಿಂಥದವರಿಗೆ 11 : 3**
**ಆದರೆ ಹೇಗೆ ಹವ್ವಳು ಸರ್ಪದ ಕುಯುಕ್ತಿಗೆ ಒಳಬಿದ್ದು ಮೋಸಹೋದಳೋ ಹಾಗೆಯೇ ನಿಮ್ಮ ಮನಸ್ಸು ಕ್ರಿಸ್ತನ ವಿಷಯದಲ್ಲಿರಬೇಕಾದ ಯಥಾರ್ಥತ್ವವನ್ನೂ ಪಾತಿವೃತ್ಯವನ್ನೂ ಬಿಟ್ಟು ಕೆಟ್ಟುಹೋದೀತೆಂದು ನನಗೆ ಭಯವುಂಟು.**

**1 ತಿಮೊಥೆಯನಿಗೆ 6 : 5**
**ಇದಲ್ಲದೆ ಬುದ್ಧಿಗೆಟ್ಟು ಸತ್ಯವಿಹೀನರಾಗಿದ್ದು ದೇವ ಭಕ್ತಿಯನ್ನು ಲಾಭ ಸಾಧನವೆಂದೆನಿಸುವ ಈ ಮನುಷ್ಯರಲ್ಲಿ ನಿತ್ಯವಾದ ಕಚ್ಚಾಟಗಳು ಉಂಟಾಗುತ್ತವೆ.**

**2 ತಿಮೊಥೆಯನಿಗೆ 3 : 8.**
**ಯನ್ನ ಯಂಬ್ರ ಎಂಬುವರು ಮೋಶೆಯನ್ನು ವಿರೋಧಿಸಿದಂತೆಯೇ ಆ ಮನುಷ್ಯರು ಸಹ ಸತ್ಯವನ್ನು ವಿರೋಧಿಸುತ್ತಾರೆ. ಬುದ್ಧಿಗೆಟ್ಟವರೂ ಕ್ರಿಸ್ತ ನಂಬಿಕೆಯಿಂದ ಭ್ರಷ್ಟರೂ ಆಗಿದ್ದಾರೆ**.

ತಪ್ಪು ಭೋಧನೆಗಳು ಮತ್ತು ಪ್ರಭಾವಗಳು ನಮ್ಮ ಮನಸ್ಸುಗಳನ್ನು ಭ್ರಷ್ಟಗೊಳಿಸುತ್ತದೆ. ದೇವರ ವಾಕ್ಯಕ್ಕೆ ನಮ್ಮ ಮನಸ್ಸುಗಳನ್ನು ನೂತನ ಮಾಡಿಕೊಂಡಾಗ, ನಮ್ಮ ಮನಸ್ಸುಗಳು ಭ್ರಷ್ಟವಾಗಿರುವುದರ ಹಾನಿಯಿಂದ ಸಂರಕ್ಷಿಸಿಕೊಳ್ಳಬಹುದು.

## 4.5. ಕಲಿಯುವುದರ ಪ್ರಕ್ರಿಯೆ.

ಅರ್ಥಮಾಡಿಕೊಳ್ಳುವುದು-> ಅನುಭವ -> ಪುನರಾವರ್ತನೆ -> ವೀಕ್ಷಣೆ -> ಪ್ರತಿಫಲನ ಅಥವಾ ವಿಶ್ಲೇಷಣೆ -> ಏಕಾಗ್ರತೆ.

ನಮ್ಮ ಹೃದಯಗಳಿಗೆ ಮತ್ತು ಮನಸ್ಸುಗಳಿಗೆ ದೇವರ ವಾಕ್ಯದ ಕಲಿಯುವಿಕೆಯ ಪ್ರಕ್ರಿಯೆಯ ನಮ್ಮ ಸಂಯೋಜನೆಯನ್ನು ನಾವು ಉಪಯೋಗಿಸಬೇಕು.

## 4.6. ದೇವರ ವಾಕ್ಯದಲ್ಲಿ ಧ್ಯಾನಿಸುವುದು.

**ಯೆಹೋಶುವ 1 : 8**
**ಈ ಧರ್ಮ ಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ ಹಗಲಿರುಳು ಅದನ್ನು ದ್ಯಾನಿಸುತ್ತಾ ಅದರಲ್ಲಿ ಬರೆದಿರುವದನ್ನೆಲ್ಲಾ ಕೈಕೊಂಡು ನಡಿ ಆಗ ನಿನ್ನ ಮಾರ್ಗದಲ್ಲೆಲ್ಲಾ ಸಫಲನಾಗುವಿ ಕೃತಾರ್ಥನಾಗುವಿ**.

**ಕೀರ್ತನೆಗಳು 1 : 3**
**ಅವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು ಅಂಥ ಮರವು ತಕ್ಕ ಕಾಲದಲ್ಲಿ ಫಲಕೊಡುತ್ತದಲ್ಲಾ ಅದರ ಎಲೆ ಬಾಡುವದೇ ಇಲ್ಲ. ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವದು**.

ಆತನ ವಾಕ್ಯವನ್ನು ಧ್ಯಾನಿಸಬೇಕೆಂಬುದಾಗಿ ಆತನ ಜನರಿಗೆ ದೇವರು ಉಪದೇಶಿಸಿದ್ದಾನೆ.

ದೇವರ ವಾಕ್ಯವನ್ನು ತಾತ್ಕಾಲಿಕವಾಗಿ ಓದುವುದಕ್ಕಿಂತ ಇನ್ನೂ ಮೇಲೆ ನಾವು ಹೋಗುವುದು ಅವಶ್ಯಕವಾಗಿದೆ. ದೇವರ ವಾಕ್ಯದಲ್ಲಿ ಧ್ಯಾನ ಮಾಡುವುದನ್ನು ನಾವು ಕಲಿಯಬೇಕು.

ಧ್ಯಾನದ ಪ್ರಕ್ರಿಯೆಯು ಇದನ್ನು ಒಲಗೊಂಡಿರುತ್ತದೆ.

- ✓ ಚಿಂತನೆ
- ✓ ದೃಶ್ಯೀಕರಣ ಮತ್ತು
- ✓ ಅರಿಕೆ

( ಅಲ್ ಪೀಪಲ್ಸ್ ಸಭೆಯ ಪುಸ್ತಕ " ದೇವರ ವಾಕ್ಯ " ಎಂಬುದರಲ್ಲಿ ದೇವರ ವಾಕ್ಯದ ಧ್ಯಾನದ ಕುರಿತು ಆಧ್ಯಯನ ಮಾಡಿರಿ ).

## 4.7. ಕಂಠಪಾಠದ ಶಿಸ್ತು.

**ಕೀರ್ತನೆಗಳು 119 : 9.**
**ಯೌವನಸ್ಥನು ತನ್ನ ನಡತೆಯನ್ನು ಶುದ್ಧಪಡಿಸಿಕೊಳ್ಳುವದು. ಯಾವದರಿಂದ ನಿನ್ನ ವಾಕ್ಯವನ್ನು ಗುರುತಿಸಿ ನಡೆಯುವುದರಿಂದಲೇ.**

ಜ್ಞಾಪಕಾರ್ಥಶಕ್ತಿಯ ಮೂಲಕವಾಗಿ ನಮ್ಮ ಹೃದಯಗಳಲ್ಲಿ ದೇವರ ವಾಕ್ಯವನ್ನು ಉದ್ದೇಶಪೂರ್ವಕವಾಗಿ ಅಡಗಿಸಿ. ಇಟ್ಟುಕೊಳ್ಳಬೇಕು.

ದೇವರ ವಾಕ್ಯವನ್ನು ಬಾಯಿಪಾಠ ಮಾಡಲೂ ಕೆಲವು ಪ್ರಾಯೋಗಿಕ ಮಾರ್ಗಗಳು :

- ✓ ಚಿಕ್ಕ ರಟ್ಟಿನ ಕಾಗದಗಳಲ್ಲಿ ಒಲೆಗಳಲ್ಲಿ ದೇವರ ವಚನಗಳನ್ನು ಬರೆಯಿರಿ ಮತ್ತು ಪ್ರತಿದಿನ ಅವುಗಳನ್ನು ವಿಮರ್ಶೆ ಮಾಡಿರಿ.
- ✓ ಪ್ರತಿದಿನ ಆಯ್ಕೆಮಾಡಿಕೊಂಡ ವಚನಗಳನ್ನು ಪರಿಶೀಲನೆ ಮಾಡಲೂ ನಿಮ್ಮ ಕಂಪ್ಯೂಟರ್ ಗೆ ಒಂದು ಟಿಪ್ಪಣಿ  ಅಥವಾ ಇತರೆ ಅಂಟಿಸುವ ಟಿಪ್ಪಣಿಗಳನ್ನು ಹಾಕಿರಿ.
- ✓ ನಿಮ್ಮ ಸತ್ಯವೇದದಲ್ಲಿ ಅದೇ ವಚನಭಾಗಗಳಿಗೆ ಪ್ರತಿದಿನ ನಿಯಮಿತವಾಗಿ ಹಿಂತುರಿಗಿ ಓದಿ ನೋಡಿರಿ ಮತ್ತು ಅವುಗಳಲ್ಲಿ ಧ್ಯಾನಮಾಡಿರಿ.

**ಜ್ಞಾನೋಕ್ತಿಗಳು 6 : 20 – 24**
**20 ಕಂದಾ ತಂದೆಯು ಆಜ್ಞೆಯನ್ನು ಕೈಕೊಳ್ಳು ತಾಯಿಯ ಉಪದೇಶವನ್ನು ಬಿಡಬೇಡ**
**21 ಅವುಗಳನ್ನು ನಿನ್ನ ಹೃದಯಕ್ಕೆ ನಿರಂತರವಾಗಿ ಬಂಧಿಸು ನಿನ್ನ ಕಂಠಕ್ಕೆ ಧರಿಸಿಕೋ**
**22 ನೀನು ನಡೆಯುವಾಗ ಆ ಉಪದೇಶವು ನಿನ್ನನ್ನು ನಡಿಸುವುದು. ಮಲಗಿಕೊಂಡಾಗ ಕಾಯುವದು, ಎಚ್ಚರ ಗೊಂಡಾಗ ನಿನ್ನೊಂದಿಗೆ ಮಾತಾಡುವುದು.**
**23 ಆಜ್ಞೆಯೇ ದೀಪ ಉಪದೇಶವೇ ಬೆಳಕು.  ಶಿಕ್ಷಣ ಪೂರ್ವಕವಾದ  ಭೋಧನೆಯೇ ಜೀವದ ಮಾರ್ಗ**
**24 ಅದು ಕೆಟ್ಟ ಹೆಂಗಸಿನಿಂದಲೂ ಪರಸ್ತ್ರೀಯ ನಾಲಿಗೆಯ ಸಿಹಿನುಡಿಯಿಂದಲೂ ನಿನ್ನನ್ನು ರಕ್ಷಿಸತಕ್ಕದ್ದಾಗಿದೆ.**

ನಮ್ಮ ಹೃದಯಗಳಲ್ಲಿ ಆತನ ವಾಕ್ಯವನ್ನು ನಾವು ಬಚ್ಚಿಟ್ಟುಕೊಂಡಿರುವಾಗ, ಆಮೇಲೆ ನಾವು ಎಲ್ಲಿಯಾದರೂ ಇದ್ದರೂ ಹಗಲು ಅಥವಾ ರಾತ್ರಿಯ ಯಾವುದೇ ಸಮಯದಲ್ಲಿ – ಆತನ ವಾಕ್ಯಗಳು ನಮ್ಮ ಆಲೋಚನೆಯ ಭಾಗಗಳಾಗುತ್ತವೆ. ಆತನ  ವಾಕ್ಯಗಳು ನಮ್ಮನ್ನು ನಡೆಸುತ್ತವೆ, ಸಂರಕ್ಷಿಸುತ್ತವೆ ಮತ್ತು ನಮೊಂದಿಗೆ ಮಾತಾಡುತ್ತವೆ.

**ಕೀರ್ತನೆಗಳು 17 : 4**
**ನಾವಂತೂ ಲೋಕವ್ಯವಹಾರಗಳಲ್ಲಿ ಬಲಾತ್ಕಾರಿಗಳಂತೆ ನಡೆಯದೆ ನಿನ್ನ ಮಾತನ್ನೇ ಅನುಸರಿಸಿದ್ದೇನೆ.**

ನಾಶಗೊಳಿಸುವವರಿಂದ ದೇವರ ವಾಕ್ಯದಿಂದ ನಾವು ಸಂರಕ್ಷಿಸಲ್ಪಟ್ಟಿದ್ದೇವೆ.

## ಕ್ರಿಯೆಯ ಅಂಶ.

ಜೀವನದಲ್ಲಿ ಈ ಸಮಯದಲ್ಲಿ ನಿಮಗೆ ಬಹಳ ಮುಖ್ಯವಾದ ಮೂರು ವಿಷಯಗಳನ್ನು ಪಟ್ಟಿ ಮಾಡಿರಿ. ( ಉದಾಹರಣೆ : ಕೆಲಸ ಭವಿಷ್ಯತ್ತು, ಕುಟುಂಬ, ಮುಂತಾದವುಗಳು ) ಮೂರು ವಚನ ಬಾಗಗಳಿಂದ ಮೂರು ಇಂತಹ ವಿಷಯಾಂಶಗಳನ್ನು ಗುರ್ತಿಸಿರಿ. ಮತ್ತು ಅವುಗಳನ್ನು ಕಂಠಪಾಠ ಮಾಡಲೂ ಪ್ರಾರಂಭಿಸಿರಿ.

1.

2.

3.

## 4.8. ನಮ್ಮ ಭಾವಚಿತ್ರಗಳನ್ನು ಮತ್ತೆ ಚಿತ್ರಿಸುವುದು.

ದೇವರು ನಮ್ಮ ಕುರಿತು ಹೇಳಿದ್ದರ ಆಧಾರದ ಮೇಲೆ ನಾವೇ ನಮ್ಮ ಒಂದು ನವೀನ ಭಾವಚಿತ್ರವನ್ನು ಚಿತ್ರಿಸಬೇಕು. ನಾವು ಇರುವ ಹಾಗೇ ನೋಡಿಕೊಳ್ಳಬೇಕು. ಮತ್ತು ನಾವು ಏನಾಗಿರಬೇಕೆಂಬುದಾಗಿ ದೇವರು ಹೇಳಿದ್ದವು ನಾವಾಗಲು ಮತ್ತು ಮಾಡುವವರಾಗಿರಬೇಕು.

**ಯಾಕೋಬನು 1 : 22 – 24**
**22 ವಾಕ್ಯದ ಪ್ರಕಾರ ನಡೆಯುವವರಾಗಿರಿ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ.**
**23 ಯಾವನಾದರೂ ವಾಕ್ಯವನ್ನು ಕೇಳುವವನಾದರೂ ಅದರ ಪ್ರಕಾರ ನಡೆಯದಿದ್ದರೆ ಅವನು ಕನ್ನಡಿಯಲ್ಲಿ ತನ್ನ ಹುಟ್ಟು ಮುಖವನ್ನು ನೋಡಿದ ಮನುಷ್ಯನಂತಿರುವನು;**
**24 ಇವನು ತನ್ನನ್ನು ನೋಡಿಕೊಂಡು ಹೋಗಿ ತಾನು ಹೀಗಿದ್ದೇನೆಂಬದನ್ನು ಆ ಕ್ಷಣವೇ ಮರೆತುಬಿಡುವನು.**

**ಫಿಲೆಮೋನನಿಗೆ 1 : 6**
**ಕ್ರಿಸ್ತನಲ್ಲಿ ನಮಗೆ ದೊರಕಿರುವ ಎಲ್ಲಾ ಸುವರಗಳನ್ನು ಕುರಿತು ನೀನು ತಿಳುವಳಿಕೆಯನ್ನು ಹೊಂದುತ್ತಿರುವಲ್ಲಿ ಕ್ರಿಸ್ತ ನಂಬಿಕೆಯಲ್ಲಿರುವ ನಿನ್ನ ಅನ್ಯೋನ್ಯತೆಯು ಕ್ರಿಸ್ತನಿಗೆ ಹೆಚ್ಚಾದ ಮಹಿಮೆಯನ್ನು ಉಂಟುಮಾಡಬೇಕೆಂದು ಪ್ರಾರ್ಥಿಸುತ್ತೇನೆ.**

## 4.9. ಹಿಂದಿನ ನಕಾರಾತ್ಮಕವಾದವುಗಳೊಡನೆ ವ್ಯವಹರಿಸಬೇಕು.

ಪ್ರಜ್ಞೆಯು ಮತ್ತು ಉಪಪ್ರಜ್ಞೆಯು ನಮ್ಮ ಮನಸ್ಸುಗಳ ಭಾಗಗಳಾಗಿರುತ್ತವೆ. ನಮ್ಮ ಉಪಪ್ರಜ್ಞೆಯು ಹಳೆಯ ಅನುಭವಗಳ ಜ್ಞಾಪಕಗಳನ್ನುಇಟ್ಟಿರುತ್ತದೆ : ನಮ್ಮ ಸ್ವಂತ ಕ್ರಿಯೆಗಳು, ನಮ್ಮೆಡೆಗೆ ಇತರರ ಕೃತ್ಯಗಳು, ಮುಂತಾದವು ಉದಾಹರಣೆಗೆ ಬಗೆಹರಿಸಲಾದ ದುಃಖ ಆಘಾತ, ನಿಂದನೆ, ದ್ರೋಹ ಮುಂತಾದವು.

ಇವುಗಳಲ್ಲಿ ಕೆಲವು ಅಳಿಸಿ ಹಾಕಲ್ಪಟ್ಟದಿದ್ದರೆ ಅಥವಾ ಸ್ಥಳದಲ್ಲಿ ಇರಿಸಲ್ಪಟ್ಟಿದ್ದರೆ, ಪ್ರಸ್ತುತದಲ್ಲಿ ನಮಗೆ ಅವು ಹಾನಿಯನ್ನುಂಟು ಮಾಡುತ್ತೇವೆ. ಇದು "ಅಳಿಸಿಹಾಕಲ್ಪಡಬೇಕು" ಅಥವಾ ಸೂಕ್ತವಾಗಿ ವ್ಯವಹರಿಸಬೇಕು. ಪ್ರತಿಕೂಲವಾಗಿ ಹಾನಿಗೊಳಗಾಗದೇ ಅವುಗಳ ಕುರಿತು ನೀವು ಮಾತಾಡಲು ಶಕ್ತರಾಗಬೇಕು.

ಸೇವೆಯಲ್ಲಿರುವಂತಹವರು, ಭಾವನೆಗಳ ಗಾಯದಿಂದ ಸ್ವಸ್ಥತೆಯನ್ನು ಮತ್ತು ಹಳೆಗಾಲದಲ್ಲಿ ನಾವು ಅನುಭವಿಸಿದಂತಹ ನೋವುಗಳಿಗೆ ಸ್ವಸ್ಥತೆ ಪಡೆಯಲು ತುಂಬಾ ಜಾಗರೂಕರಾಗಿರಬೇಕು. ಇಲ್ಲದಿದ್ದರೆ, ನಾವು ಪ್ರಸಂಗಿಸುವುದು ಮತ್ತು ಭೋಧಿಸುವುದು ನಮ್ಮ ನಕಾರಾತ್ಮಕವಾದವುಗಳೊಡನೆ ಕಳಂಕಿತವಾಗಿ ಕಂಡುಬರುತ್ತದೆ. ಮತ್ತು ಇದು ಆಮೇಲೆ ನಮ್ಮ ಕೇಳುಗರಿಗೂ ಅದು ನೀಡಲ್ಪಡುತ್ತದೆ.

ಉದಾಹರಣೆಗೆ, ಒಬ್ಬ ಸ್ತ್ರೀಯ ಆಕೆಯ ಮದುವೆಯಲ್ಲಿ ಒಂದು ಕಹಿಯಾದ ಅಥವಾ ಕೆಟ್ಟದಾದ ಅನುಭವಗಳನ್ನು ಹೊಂದಿರಬಹುದು. ಆಕೆಯು ತನ್ನ ನಕಾರಾತ್ಮಕ ಅನುಭವದ ಮೇಲೆ ಆಧಾರಿತಗೊಂಡ ವಚನಗಳನ್ನು ವಿವರಣೆ ನೀಡಲೂ ಪ್ರಾರಂಭಿಸಬಹುದು. ಆಕೆ ಸೇವೆ ಸಲ್ಲಿಸುವಂತಹ ಇತರೆ ಸ್ತ್ರೀಯರಿಗೂ ಇದನ್ನು ಪ್ರಸಂಗಿಸಬಹುದು. ದೇವರ ವಾಕ್ಯದ ಆಕೆಯ ಸೇವೆಯು ಆಕೆಯ ಮದುವೆಯಲ್ಲಿನ ನೋವಿನ ಅನುಭವಗಳು ಮತ್ತು ಬಗೆಹರಿಸಲಾಗದಂತಹ ಗಾಯಗಳ ನಕಾರಾತ್ಮಕ ಭಾವನೆಗಳೊಡನೆ ಬೆರೆತಿರುವುದಾಗಿ ಕಂಡುಬರುತ್ತದೆ. ಆಕೆಯ ಸಂದೇಶ ಕೇಳುತ್ತಿರುವವರಿಗೂ ಅದು ನೀಡಲ್ಪಡುತ್ತದೆ. ಅವರು ಗ್ರಹಿಸಿಕೊಳ್ಳಲೂ ಆಗದವರಾಗಿದ್ದರೆ ಪುರುಷ – ಸಂಬಂಧಗಳಲ್ಲಿ ಮತ್ತು ಮದುವೆಯ ಮೇಲೆ ಅವರು ಅದೇ ರೀತಿಯ ದೃಷ್ಟಿಕೋನ ಹೊಂದಲು ಪ್ರಾರಂಭಿಸುತ್ತಾರೆ. ಆದರೂ ಇದೆ ಸ್ತ್ರೀಯು ಆಕೆಯ ಭಾವನೆಗಳ

ಗಾಯಗಳಿಂದ ಮತ್ತು ನೋವುಗಳಿಂದ ಸ್ವಸ್ಥತೆಯನ್ನು ಪಡೆದುಕೊಂಡಿದ್ದರೆ ಜೀವಿತದಲ್ಲಿ ಅದೇ ರೀತಿಯ ಅನುಭವಗಳನ್ನುಹೊಂದಿರುವಂತಹ ಇತರೆ ಸ್ತ್ರೀಯರಿಗೂ ಸಹ ಆಕೆಯು ಸ್ವಸ್ಥತೆಯ ಒಂದು ಸಂಪರ್ಕ ದಾರಿಯಾಗಬಹುದು!

**1 ತಿಮೊಥೆಯನಿಗೆ 4 : 16**
**ನಿನ್ನ ವಿಷಯದಲ್ಲಿಯೂ ನಿನ್ನ ಉಪದೇಶದ ವಿಷಯದಲ್ಲಿಯೂ ಎಚ್ಚರಿಕೆಯಾಗಿರು. ನೀನು ಈ ಕಾರ್ಯಗಳಲ್ಲಿ ನಿರತನಾಗಿರು ಹೀಗಿರುವದರಿಂದ ನಿನ್ನನ್ನೂ ನಿನ್ನ ಉಪದೇಶ ಕೇಳುವವರನ್ನೂ ರಕ್ಷಿಸುವಿ.**

## 4.9.1. ಯಾಕೋಬನು ಮತ್ತು ಏಸಾವನು

ಯಾಕೋಬನು ತನ್ನ ಹಿಂದಿನದನ್ನು ಎದುರಿಸಲು ಸಿದ್ದನಾಗಿದ್ದಾಗ ದೇವರು ಅವನ ಹೆಸರನ್ನು ಯಾಕೋಬನಿಂದ ಇಸ್ರಾಯೇಲ ಎಂಬುದಾಗಿ ಬದಲಾಯಿಸಿದನು. ಅವನ ಹೆಸರನ್ನು ಬದಲಾಯಿಸುವುದರಿಂದ ಅವನು ಹಿಂದೆ ಏನಾಗಿದ್ದನೋ ಅನ್ನುವುದನ್ನೆ ದೇವರು ಬದಲಾಯಿಸಿದನು.( ಆದಿಕಾಂಡ : 32)

## 4.9.2. ಯೋಸೆಫನು ಮತ್ತು ಸಹೋದರರುಗಳು

**ಆದಿಕಾಂಡ 41:50–52**
**50 ಬರಗಾಲ ಬರುವುದಕ್ಕಿಂತ ಮುಂಚೆ ಯೋಸೇಫನಿಗೆ ಇಬ್ಬರು ಗಂಡು ಮಕ್ಕಳು ಹುಟ್ಟಿದರು. ಇವರು ಓನ್ ಪಟ್ಟಣದ ಆಚಾರ್ಯನಾಗಿದ್ದ ಪೋಟೀಫರನ ಮಗಳಾದ ಆಸನತೆಂಬಾಕೆಯಲ್ಲಿ ಹುಟ್ಟಿದರು**
**51 ಚೊಚ್ಚಲು ಮಗನು ಹುಟ್ಟಿದಾಗ ಯೋಸೇಫನು - ನಾನು ನನ್ನ ಎಲ್ಲಾ ಕಷ್ಟವನ್ನೂ ತಂದೆಯ ಮನೆಯವರನ್ನೂ ಮರೆತುಬಿಡುವಂತೆ ದೇವರು ಮಾಡಿದ್ದಾನಲ್ಲಾ ಎಂದು ಹೇಳಿ ಅವನಿಗೆ ಮನಸ್ಸೆ ಎಂದು ಹೆಸರಿಟ್ಟನು**
**52 ಎರಡನೆಯ ಮಗನು ಹುಟ್ಟಿದಾಗ ಅವನು - ನನಗೆ ಸಂಕಟ ಬಂದ ದೇಶದಲ್ಲೇ ದೇವರು ಅಭಿವೃದ್ಧಿಯನ್ನು ದಯಪಾಲಿಸಿದ್ದಾನೆಂದು ಹೇಳಿ ಆ ಮಗನಿಗೆ ಎಫ್ರಾಯೀಮ್ ಎಂದು ಹೆಸರಿಟ್ಟನು.**

**ಆದಿಕಾಂಡ. 50:18-21**
**18 ಇದಲ್ಲದೇ ಅಣ್ಣಂದಿರು ತಾವೇ ಬಂದು ಅವನ ಮುಂದೆ ಅಡ್ಡಬಿದ್ದು – ಇಗೋ, ನಾವು ನಿನಗೆ ಗುಲಾಮರು ಅಂದರು**
**19 ಯೋಸೇಫನು ಅವರಿಗೆ - ಹೆದರಬೇಡಿರಿ; ನಾನೇನು ದೇವರ ಪ್ರತಿನಿಧಿಯೇ? ನೀವಂತೂ ನನಗೆ ಕೇಡಾಗಬೇಕೆಂದಯ ನೆನೆಸಿದ್ದಿರಿ;**
**20 ಆದರೆ ದೇವರು ಮೇಲಾಗಬೇಕೆಂದು ಸಂಕಲ್ಪಸಿದನು. ಈಗ ಅನುಭವಕ್ಕೆ ಬಂದ ಪ್ರಕಾರವೇ ಅನೇಕ ಪ್ರಾಣಿಗಳಿಗೆ ಸಂರಕ್ಷಣೆಯುಂಟಾಗುವುದಕ್ಕೆ ಮಾಡಿದನು.**

**21 ಆದದರಿಂದ ನೀವು ಸ್ವಲ್ಪವೂ ಭಯಪಡಬೇಡಿರಿ; ನಾನು ನಿಮ್ಮನ್ನೂ ನಿಮಗೆ ಸೇರಿದವರೆಲ್ಲರನ್ನೂ ಪೋಷಿಸುವೆನು ಎಂದು ಹೇಳಿ ಅವರನ್ನು ಸಂತೈಸಿ ಅವರ ಸಂಗಡ ಪ್ರಿತಿಯಿಂದ ಮಾತಾಡಿದನು**

ದೇವರು ಯೋಸೇಫನನ್ನು ಉನ್ನತ ಸ್ಥಳಕ್ಕೇರಿಸಿ, ಆ ಯೋಸೇಫನು ತನ್ನ ಸಹೋದರರುಗಳ ತಪ್ಪುಗಳನ್ನು ಮರೆತು ಕ್ಷಮಿಸಿಬಿಟ್ಟಹಾಗೆ, ಇಂದಿಗೂ ದೇವರು ನಮ್ಮ ಜೀವಿತಗಳಲ್ಲಿ ಹಾಗೇ ಮಾಡುವನು!

**ಕೀರ್ತನೆಗಳು. 23:3**
**ನನ್ನ ಪ್ರಾಣವನ್ನು ಉಜ್ಜೀವಿಸಮಾಡಿ ತನ್ನ ಹೆಸರಿಗೆ ತಕ್ಕಂತೆ ನೀತಿಮಾರ್ಗದಲ್ಲಿ ನನ್ನನ್ನು ನಡಿಸುತ್ತಾನೆ"**

ಆತನು ನನ್ನ ಪ್ರಾಣವನ್ನು ಉಜ್ಜೀವಿಸಮಾಡುತ್ತಾನೆ- ಪ್ರಜ್ಞಾಯುತ ಮತ್ತು ಉಪಪ್ರಜ್ಞಾಯುತ ಮನಸ್ಸುಗಳನ್ನು.

**ಯೋಹಾನ. 1:4-5**
**4 ಆತನಲ್ಲಿ ಜೀವವಿತ್ತು; ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು**
**5 ಆ ಬೆಳಕು ಕತ್ತಲಲ್ಲಿ ಪ್ರಕಾಶಿಸುತ್ತದೆ; ಕತ್ತಲು ಅದನ್ನು ಮುಸುಕಲಿಲ್ಲ**

ಆತನಲ್ಲಿರುವ ಜೀವವು ನನ್ನಲ್ಲಿ ಬೇಳಕಾಗಿದೆ. ಅದು ನನ್ನಲ್ಲಿ ಬೆಳಗುತ್ತದೆ.ಅಂಧಕಾರವು ಅದನ್ನು ಮುಸುಕುವುದಿಲ್ಲ.

## ಕ್ರಿಯಾಂಶ

ಗತಕಾಲದಿಂದಲೂ ಈವರೆಗೆ ನಿಮ್ಮಲ್ಲಿ ಪ್ರತಿಕೂಲವಾಗಿ ಪರಿಣಾಮ ಬೀರುತ್ತಿರುವ ವಿಷಯಗಳನ್ನು ಮತ್ತು ಅವುಗಳನ್ನೂ ಈಗಲೂ ಒಪ್ಪಂದ ಮಾಡಬೇಕಿರುವ ಪಟ್ಟಿಮಾಡಿರಿ:

1.

2.

3.

ಈಗ ಮೇಲೆ ನೀವು ಮಾಡಿರುವ ಪಟ್ಟಿಗಳಿಗೆ ಕೆಳಗಿನವುಗಳನ್ನು ಅನುಸರಿಸಿರಿ:

- ✓ ಕ್ರಿಸ್ತನಲ್ಲಿ ನಿಮ್ಮ ಪ್ರಸ್ತುತ ಗುರುತಿನಿಂದ ಹಿಂದಿನದ್ದನ್ನು ಗ್ರಹಿಸಿ (ಹೊಸ ಸೃಷ್ಟಿ).
- ✓ ನಿಮ್ಮ ಪ್ರಸ್ತುತ ಅನುಗ್ರಹದ ಸ್ಥಾನದಿಂದ ಹಿಂದಿನದ್ದನ್ನು ಗ್ರಹಿಸಿ (ಕ್ಷಮಿಸಲಾಗಿದೆ).
- ✓ ದೇವರು ನಿಮ್ಮ ಮೂಲಕ ಏನು ಮಾಡಬಹುದು ಎಂಬುದರ ಆಧಾರದ ಮೇಲೆ ಹಿಂದಿನದ್ದನ್ನು ತಿಳಿಸಿ (ಕ್ಷಮಿಸಿ ಮತ್ತು ನಿಮಗೆ ನೋವುಂಟು ಮಾಡಿದವರನ್ನು ಗೌರವಿಸಿ).

- ✓ ಆ ಸಮಸ್ಯೆಗಳ ಕುರಿತು ಅನ್ಯಭಾಷೆಯಲ್ಲಿ ಪ್ರಾರ್ಥಿಸಿ ಪವಿತ್ರಾತ್ಮನಿಗೆ ನಮ್ಮ ವಿಚಾರದಲ್ಲಿ ಮಡಬೇಕೆಂದು ತಿಳಿದಿದ್ದಾನೆ ಏನುಮಾಡಬೇಕೆಂದು ತಿಳಿದಿದ್ದಾನೆ, ಆ ಮೂಲಕ ಸ್ವಸ್ಥತೆಗಳು ನಮ್ಮಲ್ಲಿ ಸಂಭವಿಸುತ್ತದೆ.

- ✓ ಭವಿಷ್ಯದತ್ತ ಗಮನಹರಿಸಿ (ನಕಾರಾತ್ಮಕ ಭಾವನೆಗಳನ್ನು ತಿರಸ್ಕರಿಸಿ).

## 4.10. ತಪ್ಪಾದ ಮನಸ್ಥಿತಿಗಳನ್ನು ಎಳೆದುಹಾಕುವುದು.

ತಪ್ಪಾದ ಮನಸ್ಥಿತಿಗಳು ನಮಗೆ ತರಬೇತಿ ಪಡೆದ ಅಥವಾ ಆಗುವ ವಿಧಾನಗಳಿವೆ, ಅದು ಆಲೋಚನೆಗೆ ಒಗ್ಗಿಕೊಂಡಿರುವ, ಅದು, (ಅ) ದೇವರ ಮೂಲಕ ಮತ್ತು ನಮ್ಮ ಮೂಲಕ ಕೆಲಸ ಎರಡಕ್ಕೂ ಅಡ್ಡಿಯಾಗಿ ಕಾರ್ಯನಿರ್ವಹಿಸುತ್ತದೆ. (ಆ) ನಮಗೆ ಸ್ವತಂತ್ರರಾಗಿರುವುದು ಮತ್ತು ಎಲ್ಲವೂ ನಾವು ಆಗಬಹುದು.

- ಧಾರ್ಮಿಕ ಮನಸ್ಥಿತಿಗಳು .
- ಪೂರ್ವಾಗ್ರಹಗಳು ಮತ್ತು
- ಪೂರ್ವಭಾವಿ ಕಲ್ಪನೆಗಳು.

ನೀವು ಸತ್ಯವನ್ನು ಎದುರಿಸಬೇಕಾಗುತ್ತದೆ ಮತ್ತು ತಪ್ಪು ಮನಸ್ಥಿತಿಗಳನ್ನು ತ್ಯಜಿಸಲು ಆಯ್ಕೆ ಮಾಡಿಕೊಳ್ಳಬೇಕು.

## 4.11. ನಮ್ಮ ಮನಸ್ಸುಗಳನ್ನು ದಂಡಿನ ಪಟ್ಟಣವಾಗಿ ಮಾಡುವುದು.

ನಮ್ಮಮನಸ್ಸುಗಳನ್ನು ಕಾಪಾಡಬೇಕಿದೆ.ಇಲ್ಲಿ ನಮ್ಮ ನಮಸ್ಸುಗಳನ್ನು ಕಾಪಾಡಿಕೊಳ್ಳಲು ಕೆಲವು ಪ್ರಾಯೋಗಿಕವಾದ ವಿಷಯಗಳ ವಿವರಣೆ ಇರುತ್ತದೆ,.

- ✓ ನಿರಾಕರಣೆಯ ವಿರುದ್ಧ ಕಾವಲು – ವಿಷಯಗಳನ್ನು ವಸ್ತುನಿಷ್ಠವಾಗಿ ನೋಡಿ.

ನಮ್ಮ (ಮುಖ್ಯ, ಜೀವನ-ಪ್ರಭಾವ ಬೀರುವ) ಆಲೋಚನೆಗಳು ಅಥವಾ ನಿರ್ಧಾರಗಳು, ಇತ್ಯಾದಿ, ಇತರರು ಪರಿಶೀಲಿಸುತ್ತಾರೆ. ನಿಮ್ಮೊಳಗೆ ಪ್ರಾಮಾನಿಕವಾಗಿರಬೇಕು.

- ✓ ಸ್ವಯಂ ವಂಚನೆಯ ವಿರುದ್ಧ ಕಾವಲಾಗಿರಿ

**ಗಲಾತ್ಯದವರಿಗೆ. 6:3**
**ಯಾವನಾದರೂ ಅಲ್ಪನಾಗಿದ್ದು ತಾನು ದೊಡ್ಡವನೆಂದು ಭಾವಿಸಿಕೊಂಡರೆ ತನ್ನನ್ನು ತಾನೇ ಮೋಸಗೊಳಿಸಿದವನಾಗಿದ್ದಾನೆ**

- ✓ ಆತ್ಮೀಯ ಲಗತ್ತುಗಳ ವಿರುದ್ಧ ಕವಲು - ಸ್ವಯಂ ನಿಯಂತ್ರಣವನ್ನು ಹೊಂದಿರಿ.
- ✓ ಭಾವನಾತ್ಮಕ ವ್ಯಭಿಚಾರ ಅಥವಾ ವ್ಯಭಿಚಾರದ ವಿರುದ್ಧ ಕಾವಲು - ನಮ್ಮ ಮನಸ್ಸನ್ನು ಅನುಮತಿಸಲು ನಿರಾಕರಿಸುವುದು ಅಂತಹ ಆಲೋಚನೆಗಳೊಂದಿಗೆ ಆಟಗಳನ್ನು ಆಡಬಾರದು

## 4.12. ಮನಸ್ಸಿನ ಚೌಕಟ್ಟು

**ಕೊಲೊಸ್ಸೆಯವರಿಗೆ 3:1,2**
**1 ಆದಕಾರಣ ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವದರಿಂದ ಮೇಲಿರುವವುಗಳನ್ನು ಹುಡುಕಿರಿ; ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ**
**2 ಮೇಲಿರುವಂಥವುಗಳ ಮೇಲೆ ಮನಸ್ಸಿಡಿರಿ, ಭೂಸಂಬಂಧವಾದವುಗಳ ಮೇಲೆ ಇಡಬೇಡಿರಿ.**

"ನಿಮ್ಮ ವಾತ್ಸಲ್ಯವನ್ನು ಹೊಂದಿಸಿ" –, ಆಲೋಚನೆ, ನಿಮ್ಮ ಮನಸ್ಸನ್ನು ಸರಿಪಡಿಸಿಕೊಳ್ಳಲು ಒಂದೇ ಮನಸ್ಸುವುಳ್ಳವರಾಗಿರಿ.

"ಹುಡುಕು" ಪ್ರಾಯೋಗಿಕ ಪ್ರಯತ್ನವನ್ನು ಒಳಗೊಂಡಿರುತ್ತದೆ. "ಮನಸ್ಸನ್ನು ಇಡಿರಿ", "ಆಂತರಿಕ ಪ್ರಚೋದನೆ ಮತ್ತು ಇತ್ಯರ್ಥ ಒಳಗೊಂಡಿರುತ್ತದೆ. ಎರಡನ್ನೂ ವಿಷಯಗಳತ್ತ ನಿರ್ದೇಶಿಸಬೇಕು"

"ನೀವು ಸ್ವರ್ಗವನ್ನು ಮಾತ್ರ ಹುಡುಕಬಾರದು, ನೀವು ಸ್ವರ್ಗವನ್ನು ಯೋಚಿಸಬೇಕು".

ನೂತನ ಮಾಡಲ್ಪಟ್ಟಿರುವ ಮನಸ್ಸು ಹೊಸ ದೃಷ್ಟಿಕೋನ, ಹೊಸ ಮಾದರಿ, ಹೊಸ ವಿಶ್ವದ ದೃಷ್ಟಿಕೋನ ಹೊಂದಿದೆ.

ಸ್ವರ್ಗದಿಂದ ನೋಡಿದಾಗ ಜಗತ್ತು ವಿಭಿನ್ನವಾಗಿ ಕಾಣುತ್ತದೆ!

## 4.13. ಕ್ರಿಸ್ತನ ಮನಸ್ಸು

ಹೊಸ ಒಡಂಬಡಿಕೆಯಲ್ಲಿ ಹೇಳಿರುವ ಪ್ರಕಾರ ಕ್ರಿಸ್ತನ ಮನಸ್ಸನ್ನು ಹೊಂದಲು ಮೂರು ಆಯಾಮಗಳಿವೆ.

- ✓ ಕ್ರಿಸ್ತನ ಮನಸ್ಸು – ತಗ್ಗಿಸುವಿಕೆ ಮತ್ತು ವಿಧೇಯತೆ.

**ಫಿಲಿಪ್ಪಿಯವರಿಗೆ. 2: 3**
**ಪಕ್ಷಪಾತದಿಂದಾಗಲಿ ಒಣಹೆಮ್ಮೆಯಿಂದಾಗಲಿ ಯಾವದನ್ನೂ ಮಾಡಿದ ಪ್ರತಿಯೊಬ್ಬನು ದೀನಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಠರೆಂದು ಎಣಿಸಲಿ**

**ಫಿಲಿಪ್ಪಿಯವರಿಗೆ 2: 5**
**ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ**

ಸತ್ಯವೇದವು ನಮಗೆ ಕ್ರಿಸ್ತನ ಮನಸ್ಸು (ಮನೋಭಾವನೆ, ಮಾನಸಿಕತೆ, ಇತ್ಯರ್ಥತೆ) ಇರುವುದಕ್ಕಾಗಿ ಸೂಚಿಸುತ್ತದೆ. ಸಂಕ್ಷಿಪ್ತವಾಗಿಹೇಳಬೇಕೆಂದರೆ, ತಗ್ಗಿಸುವಿಕೆಯ ಮನೋಭಾವನೆ ಮತ್ತು ದಾಸನ ಮನೋಭಾವನೆ ಇರಬೇಕು.

ಮನಸ್ಸಿನ ವಿಜಯ

- ✓ ಕ್ರಿಸ್ತನ ಮನಸ್ಸು - ಪಾಪವನ್ನು ಎದುರಿಸಲು ಶಾರೀರಿಕ ನೋವನ್ನು ಅನುಭವಿಸಲು ಸಿದ್ಧವಾಗಿರುವುದು

**1ಪೇತ್ರ. 4:1**
**ಕ್ರಿಸ್ತನು ಶರೀರದಲ್ಲಿ ಬಾಧೆಪಟ್ಟಿದ್ದರಿಂದ ನೀವೂ ಸಹ ಆತನಿಗಿದ್ದ ಭಾವವನ್ನೇ ಹಿಡಿದುಕೊಳ್ಳಿರಿ**

ಹಿಡಿದುಕೋ = ಆಯುಧಗಳೊಂದಿಗೆ ಸಜ್ಜುಗೊಳ್ಳುವುದು
.
ಮನಸ್ಸು (ಗ್ರೀಕ್ ಭಾಷೆಯಲ್ಲಿ ಎನ್ನೋಯ್ಯಾ) ಚಿಂತನಶೀಲತೆ, ಅಂದರೆ ನೈತಿಕ ತಿಳುವಳಿಕೆ, ದ್ವೇಶ, ಮನಸ್ಸು.

ನಾವು ಆ ಯೇಸುವಿನ ಮನಸ್ಸನ್ನೇ ಹಿಡಿದುಕೊಳ್ಳಬೇಕು ಅಂದರೆ ಶಾರೀರಿಕ ವೇದನೆಯನ್ನು ಅನುಭವಿಸಬೇಕು, ಶಿಲುಬೆಗೆ ಹಾಕಿಸಿಕೊಳ್ಳಬೇಕು ನಮ್ಮ ಶರೀರಕ್ಕೆ ಪಾಪಭರಿತ ಆಶೆಗಳಿಗೆ (ಇಲ್ಲವೆಂದು ಹೇಳಿರಿ), ಪಾಪವನ್ನು ಎದುರಿಸಲು ನಮ್ಮನ್ನು ನಾವು ಹಿಡಿದುಕೊಳ್ಳಬೇಕು.

- ✓ ಕ್ರಿಸ್ತನ ಮನಸ್ಸು – ಆತನ ಆಲೋಚನೆಗಳು ಮತ್ತು ತಿಳುವಳಿಕೆಗಳು.

**1 ಕೊರಿಂಥದವರಿಗೆ. 2:16**
**ಕರ್ತನ ಮನಸ್ಸನ್ನು ತಿಳುಕೊಂಡು ಆತನಿಗೆ ಉಪದೇಶಿಸುವವನ್ಯಾರು ಎಂದು ಬರದದೆಯಲ್ಲಾ ನಮಗಾದರೋ ಕ್ರಿಸ್ತನ ಮನಸ್ಸು ದೊರಕಿತು**

ಆದರೆ ಬರೆದಿರುವ ಪ್ರಕಾರ – ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದ್ದೆಲ್ಲವನ್ನೂ ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ" (1ಕೊರಿಂಥ. 2:9)
ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡೆಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತನಾಡದೇ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆಪಡಿಸುವನು" (ಯೋಹಾನ. 16:13,14)

## 4:14. ಒಂದೇ ಮನುಸ್ಸುಳ್ಳ ಜನರಾಗಿರುವುದು

ಹೊಸ ಒಡಂಬಡಿಕೆಯ ಅನೇಕ ಸ್ಥಳಗಳಲ್ಲಿ ವಿಶ್ವಾಸಿಗಳು "ಒಂದೇ ಮನಸ್ಸು" ಉಳ್ಳವರಾಗಿರಬೇಕೆಂಬುದಾಗಿ ಒತ್ತಾಯಿಸುತ್ತದೆ.

ನಮ್ಮ ಮಧ್ಯದಲ್ಲಿ ದೇವರು ಸಾಮೂಹಿಕವಾಗಿ ಮಾಡುತ್ತಿರುವಂತಹವುಗಳೊಡನೆ ನಾವೇ ಮುಂದುವರೆಯುವುದನ್ನು ಕಲಿಯುವುದು ಅವಶ್ಯಕವಾಗಿದೆ.

ಕೆಲವು ಬಾರಿ ನಮ್ಮ "ಅವಲಂಬನೆಯ" ಕ್ರಿಯೆಯು ಒಂದೇ ಮನಸ್ಸುಳ್ಳ ಜನರಾಗಿ ಕಂಡುಬರಲೂ ಒಂದು ದೊಡ್ಡ ಅಡ್ಡಿಯಾಗಿರುತ್ತದೆ.

**1 ಕೊರಿಂಥದವರಿಗೆ 1:10**
**ಸಹೋದರರೇ ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು. ನಿಮ್ಮಲ್ಲಿ ಭೇದಗಳಿರಬಾರದು ನೀವು ಒಂದೇ ಮನಸ್ಸೂ ಒಂದೇ ಅಭಿಪ್ರಾಯವೂ ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು ಎಂಬುದಾಗಿ ನಾನು ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ.**

- ಅದೇ ಮನಸ್ಸು

**ರೋಮಾಪುರದವರಿಗೆ 12:16**
**ನಿಮ್ಮ ನಿಮ್ಮೊಳಗೆ ಏಕಮನಸ್ಸುಳ್ಳವರಾಗಿರ್ರಿ ದೊಡ್ಡಸ್ತಿಕೆಯ ಮೇಲೆ ಮನಸ್ಸಿಡದೆ ದೀನರ ಸಂಗಡ ಬಳಿಕೆಯಾಗಿರ್ರಿ. ನಿಮ್ಮನ್ನು ನೀವೇ ಬುದ್ಧಿವಂತರೆಂದು ಎಣಿಸಿಕೊಳ್ಳಬೇಡಿರಿ.**

- ಏಕ ಮನಸ್ಸು

**ರೋಮಾಪುರದವರಿಗೆ 15:6**
**ಹೀಗೆ ನೀವು ಏಕ ಮನಸ್ಸಿನಿಂದ ಒಮ್ಮುಖವಾಗಿ ನಮ್ಮ ಕರ್ತನಾದ ಯೇಸುಕ್ರಿಸ್ತನ ತಂದೆಯಾದ ದೇವರನ್ನು ಕೊಂಡಾಡುವಿರಿ**.

ಆಧಿಸಭೆಯ ಒಂದು ಪ್ರಮುಖವಾದ ಗುಣಲಕ್ಷಣದ ಅಂಶವು ಅವರು ಏಕಮನಸ್ಸು, ಒಂದೇ ಒಪ್ಪಂದ ಅಥವಾ ಒಗ್ಗಟ್ಟಾಗಿ ಇದ್ದರು.

ಒಂದು ಸ್ಥಳೀಯ ಸಭೆಯ ಅಂಗವಾಗಿ ನಮ್ಮ ಮಧ್ಯದಲ್ಲಿ ದೇವರು ಸ್ಥಾಪಿಸಿದಂತಹ "ಏಕ ಮನಸ್ಸು" "ಸಾಂಸ್ಥಿಕ ಮನಸ್ಥಿತಿಯನ್ನು" ನಾವು ಅಳವಡಿಸಿಕೊಳ್ಳುವುದನ್ನು ಕಲಿಯಬೇಕು.

# 5
# ಒಂದು ಸಕಾರಾತ್ಮಕ ಮಾನಸಿಕ ಮನೋಭಾವವನ್ನು ಅಭಿವೃದ್ಧಿ ಪಡಿಸುವುದು

## ದೇವರು ನಮ್ಮ ಆಲೋಚನೆಗಳಲ್ಲಿ ಆಸಕ್ತನಾಗಿದ್ದಾನೆ.

**ಕೀರ್ತನೆಗಳು 139:1,2**
**1 ಯೆಹೋವನೇ ನೀನು ನನ್ನನ್ನು ಪರೀಕ್ಷಿಸಿ ತಿಳುಕೊಂಡಿದ್ದೀ**
**2 ನಾನು ಕೂತುಕೊಳ್ಳುವದೂ ಏಳವದೂ ನಿನಗೆ ಗೊತ್ತದೆ. ದೂರದಿಂದಲೇ ನನ್ನ ಆಲೋಚನೆಗಳನ್ನು ಬಲ್ಲವನಾಗಿರುತ್ತೀ..**

## 5.1. ನಾವು ಹೇಗೆ ಯೋಚಿಸುತ್ತೇವೆಂಬುದರ ಪ್ರಭಾವ

**ಜ್ಞಾನೋಕ್ತಿಗಳು 23:7**
**ಅವನು ತನ್ನ ಒಳಗಿನ ಯೋಚನೆಯಂತೆಯೇ ಇದ್ದಾನೆ. ಉಣ್ಣು ಕುಡಿ ಎಂದು ಹೇಳಿದರೂ ನಿನ್ನಲ್ಲಿ ಅವನಿಗೆ ಪ್ರೀತಿಯಿಲ್ಲ.**

ನಮ್ಮ ಯೋಚನೆಯು ನಮ್ಮ ನಡವಳಿಕೆಗಳು ಮತ್ತು ಜೀವನ ಶೈಲಿಗಳನ್ನು ಪ್ರಭಾವಿಸುತ್ತವೆ.

ಒಂದು ಸಾಧಾರಣ ಆಲೋಚನೆ ಅಥವಾ ವಿಚಾರ ಒಂದು ಜೀವನ ಶೈಲಿಯಾಗಬಹುದು.

ಮನಸ್ಸು ಹೋಗುವ ಕಡೆಗೆ ಮನುಷ್ಯನು ಹಿಂಬಾಲಿಸುತ್ತಾನೆ.

**3 ಯೋಹಾನನು 1:2**
**ಪ್ರಿಯನೇ ನೀನು ಆತ್ಮ ವಿಷಯದಲ್ಲಿ ಅಭಿವೃದ್ಧಿ ಹೊಂದಿರುವ ಪ್ರಕಾರ ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿ ಹೊಂದಿ ಸುಕ್ಷೇಮವಾಗಿರಬೇಕೆಂದು ಪ್ರಾರ್ಥಿಸುತ್ತೇನೆ.**

### 5.1.1. ಮಿಡತೆಯ ಚಿತ್ರ ಹೊಂದಿರುವ ಯೋಧರು

ಎಲ್ಲಾ ಹನ್ನೆರಡು ಗೂಢಚಾರರು ದೇಶವನ್ನು ಸಂಚರಿಸಿ ನೋಡಲೂ ಕಳುಹಿಸಲ್ಪಟ್ಟರು ಅವರು ಒಂದೇ ದೈತ್ಯರುಗಳನ್ನು ಕಂಡರು. ಅವರಲ್ಲಿ ಹತ್ತು ಗೂಢಚಾರರು ತಮ್ಮನ್ನು ತಾವೇ ದೈತ್ಯರುಗಳ ಮುಂದೆ ಮಿಡತೆಗಳಂತೆ ಕಂಡುಕೊಂಡರು ಮತ್ತು ತಕ್ಷಣವೇ ಅವರ ಆಲೋಚನೆಯಲ್ಲಿ ಸೋಲಿಸಲ್ಪಟ್ಟರು. ಆ ಒಂದು ಕ್ಷಣದಲ್ಲಿಯೇ ಅವರು ಯುದ್ದವನ್ನು ಸೋತು ಹೋದರು. ಇನ್ನುಳಿದ ಇಬ್ಬರು ದೈತ್ಯರುಗಳನ್ನು ತಿನ್ನಲೂ ಸಿದ್ದವಾಗಿರುವಂತಹ

'ರೊಟ್ಟಿಯಂತೆ' ಕಂಡರು. ಅವರು ಜಯವನ್ನು ಕಂಡರು. ಅವರು ಸಂಬಂಧಿಸಿಕೊಂಡಂತೆ ಯುದ್ಧವನ್ನು ಈಗಾಗಲೇ ಗೆದ್ದಿದ್ದಾರೆ. ನಕಾರಾತ್ಮಕ ಆಲೋಚನೆಗಳು ಅಥವಾ ಮಾತುಗಳು ಹೋರಾಟ ಪ್ರಾರಂಭವಾಗುವ ಮೊದಲೇ ನಮ್ಮನ್ನು ಕುಂಟರನ್ನಾಗಿಸಬಹುದು ಮತ್ತು ಸೋಲಿಸಬಹುದು. (ಅರಣ್ಯಕಾಂಡ 13, ಅರಣ್ಯಕಾಂಡ 14:1-9)

## 5.1.2. ಅಬ್ರಹಾಮನು ನಕ್ಷತ್ರಗಳನ್ನು ನೋಡುತ್ತಾನೆ.

**ಆದಿಕಾಂಡ 15:5**
**ಆಕಾಶದ ಕಡೆಗೆ ನೋಡು ನಕ್ಷತ್ರಗಳನ್ನು ಲೆಕ್ಕಿಸುವುದು ನಿನ್ನಿಂದಾದರೆ ಲೆಕ್ಕಿಸು. ನಿನ್ನ ಸಂತಾನವು ಅಷ್ಟಾಗುವುದು ಅಂದನು.**

ದೇವರ ವಾಗ್ದಾನಗಳು ನಮ್ಮ ಜೀವಿತಗಳಲ್ಲಿ ನಿಜಸ್ಥಿತಿಯಲ್ಲಿ ಕಂಡು ಬರುವುದನ್ನು ದೃಶ್ಯೀಕರಿಸುವುದು ಅವಶ್ಯಕವಾಗಿದೆ.

## 5.1.3. ಸಾಧ್ಯತೆಯ ಆಲೋಚನೆಗಳು

ಸಭಾಪಾಲಕರಾದ ಸೀಸರ್ ಕ್ಯಸ್ಟೆಲ್ಲಾನೋಸ್, ಕೊಲಂಬಿಯಾದ ಬೊಗೋಟಾ ಸ್ಥಳದ ಇವರು ಮೊದಲ ಒಂಭತ್ತು ವರ್ಷಗಳ ಸೇವೆಯ ಕೊನೆಯಲ್ಲಿ ತುಂಬಾ ನಿರುತ್ಸಾಹಗೊಂಡಿದ್ದರು. ಅವರು ಹೊಂದಿದ್ದಂತಹ ದೊಡ್ಡ ಸಭಿಕರ ಸಂಖ್ಯೆಯು 120 ಜನರಿದ್ದಾಗಿತ್ತು. ಆದ್ದರಿಂದ 1982ರ ಅಂತ್ಯಭಾಗದಲ್ಲಿ ಅವರು ಸಭಾಪಾಲಕರಾಗಿ ಸೇವೆ ಸಲ್ಲಿಸುತ್ತಿದ್ದ ಸಭೆಗೆ ರಾಜಿನಾಮೆ ನೀಡಿದರು. ಸುಮಾರು ನಾಲ್ಕು ತಿಂಗಳುಗಳ ನಂತರ ದೇವರು ಈ ರೀತಿಯಾಗಿ ಅವರೊಂದಿಗೆ ಮಾತನಾಡಿ ಹೇಳಿದರು.

"ನಾನು ನಿಮ್ಮ ಕುರ್ಚಿಯನ್ನು ನಾನೇ ಅಲ್ಲಾಡಿಸಬಹುದು. ಆದರೆ ನಿನ್ನ ಮೂಲಕವಾಗಿ ಇದನ್ನು ಮಾಡಲೂ ನಾನು ಇಷ್ಟಪಡುತ್ತೇನೆ. ನಶಿಸಿ ಹೋಗುವ ಆತ್ಮಗಳಿಗೆ ನಾನೇ ಸ್ವತಃ ಮಾತಾಡಬಹುದು. ಆದರೆ ನಿನ್ನ ಮೂಲಕ ಇದನ್ನು ಮಾಡಲು ನಾನು ಬಯಸುತ್ತೇನೆ. ನಾನು ನಿನ್ನನ್ನು ಒಬ್ಬ ಸಭಾಪಾಲಕನಾಗಿ ಆರಿಸಿಕೊಂಡಿದ್ದೇನೆ. ಒಂದು ದೊಡ್ಡದಾದ ಸಭೆಯ ಕನಸ್ಸನ್ನು ಕಾಣು ಯಾಕಂದರೆ ಕನಸ್ಸುಗಳು ನನ್ನ ಆತ್ಮನ ಭಾಷೆಯಾಗಿದೆ!

ನೀನು ಕುರುಬನಾಗಿ ನೋಡಿಕೊಳ್ಳುವಂತಹ ಸಭೆಯು ಆಕಾಶದಲ್ಲಿರುವ ನಕ್ಷತ್ರಗಳಂತೆ ಮತ್ತು ಕಡಲ ತೀರದ ಮರಳಿನಂತೆ ಅಸಂಖ್ಯಾತವಾಗಿರುತ್ತದೆ. ಇದು ಅಸಂಖ್ಯಾತವಾಗಿರುವಂತಹ ತುಂಬಾ ದೊಡ್ಡದಾಗಿರುತ್ತದೆ" .

ಒಂದು ನೂತನ ದರ್ಶನದೊಡನೆ ಅವರು ಮಾರ್ಚ್ 1983ರಲ್ಲಿ ಎಂಟು ಜನರೊಂದಿಗೆ ಇಂಟರ್ ನ್ಯಾಷನಲ್ ಛರಿಸ್ಮಾಟಿಕ್ ಮಿಷನ್ (ಅಂತರಾಷ್ಟ್ರೀಯ ವರ್ಚಸ್ಸು ಮಿಷನ್) ಪ್ರಾರಂಭಿಸಿದರು. ಸಭೆಯು ಸುಮಾರು 350,000 ಜನರುಗಳವರೆಗೂ ಬೆಳೆಯಿತು.

## 5.2. ದೇವರ ಮಾರ್ಗದಲ್ಲಿ ಆಲೋಚಿಸುವುದು.

✓ ದೇವರು ಹೇಗೆ ಆಲೋಚಿಸುತ್ತಾನೆಂಬುದನ್ನು ತಿಳಿಯುವುದು.

**ಕೀರ್ತನೆಗಳು 19:1-3**
**1 ಆಕಾಶವು ದೇವರ ಪ್ರಭಾವವನ್ನು ಪ್ರಚುರ ಪಡಿಸುತ್ತದೆ. ಗಗನವು ಆತನ ಕೈ ಕೆಲಸವನ್ನು ತಿಳಿಸುತ್ತದೆ**
**2 ದಿನವು ದಿನಕ್ಕೆ ಪ್ರಕಟಿಸುತ್ತಿರುವುದದು. ರಾತ್ರಿಯು ರಾತ್ರಿಗೆ ಅರುಹುತ್ತಿರುವುದು**
**3 ಶಬ್ದವಿಲ್ಲ, ಮಾತಿಲ್ಲ ಅವುಗಳ ಸ್ವರ ಕೇಳಿಸುವುದಿಲ್ಲ.**

**ರೋಮಾಪುರದವರಿಗೆ 1:20**
**ಹೇಗೆಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯ ಶಕ್ತಿಯೂ ದೇವತ್ವವೂ ಜಗದುತ್ಪತ್ತಿಗೆ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ದಿಗೆ ಗೊತ್ತಾಗಿ ಕಾಣಬರುತ್ತವೆ. ಹೀಗಿರುವುದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ.**

ದೇವರ ಆಲೋಚನೆಯು ದೊಡ್ಡದಾಗಿದೆ, ವಿವಿಧತೆ, ವಿವರಣೆ, ಸಂಸ್ಥೆ ಮತ್ತು ಪರಸ್ಪರ ಅವಲಂಬನೆ ಹೊಂದಿದೆ.

**ರೋಮಾಪುರದವರಿಗೆ 4:17**
**ನಾನು ನಿನ್ನನ್ನು ಅನೇಕ ಜನಾಂಗಗಳಿಗೆ ಮೂಲ ಪಿತೃವಾಗಿ ನೇಮಿಸಿದ್ದೇನೆಂದು ಶಾಸ್ತ್ರದಲ್ಲಿ ಬರೆದಿರುವ ಪ್ರಕಾರ ಅಬ್ರಹಾಮನು ನಮ್ಮೆಲ್ಲರಿಗೂ ದೇವರ ಸನ್ನಿಧಿಯಲ್ಲಿ ಮೂಲ ಪಿತೃವಾಗಿದ್ದಾನೆ. ದೇವರು ಸತ್ತವರನ್ನು ಬದುಕಿಸುವವನಾಗಿಯೂ ಇಲ್ಲದ್ದನ್ನು ಇರುವುದಾಗಿ ಕರೆಯುವವನಾಗಿಯೂ ಇದ್ದಾನೆಂದು ಅಬ್ರಹಾಮನು ನಂಬಿದನು.**

✓ ದೇವರು ಇಲ್ಲದ್ದನ್ನು ಇರುವುದಾಗಿ ಕರೆಯುವವನಾಗಿ ಇದ್ದಾನೆ.

**ಯೆರೆಮೀಯ 29:11**
**ಇವರಿಗೆ ಗತಿಯಾಗಲಿ ನಿರೀಕ್ಷೆಯಿರಲಿ ಎಂದು ನಾನು ನಿಮ್ಮ ವಿಷಯದಲ್ಲಿ ಮಾಡಿಕೊಳ್ಳುತ್ತಿರುವ ಆಲೋಚನೆಗಳನ್ನು ನಾನೇ ಬಲ್ಲೆನು ಅವು ಅಹಿತದ ಯೋಚನೆಗಳಲ್ಲ ಹಿತದ ಯೋಚನೆಗಳೇ.**

- ✓ ಗಡಿಪಾರು ಆಗಿರುವವರಿಗೆ ದೇವರ ಒಂದು ಭವಿಷ್ಯತ್ತಿನ ಹಿತವನ್ನು ಘೋಷಿಸಸುತ್ತಾನೆ.

## 5.3. ನಾವು ಸಕಾರಾತ್ಮಕ ಮನೋಭಾವನೆ ಬೆಳೆಸಿಕೊಳ್ಳಬಹುದು?

**ಜ್ಞಾನೋಕ್ತಿಗಳು 4:20-22**
**20 ಕಂದಾ ನನ್ನ ಮಾತುಗಳನ್ನು ಆಲಿಸು ನನ್ನ ನುಡಿಗಳಿಗೆ ಕಿವಿಗೊಡು**
**21 ನಿನ್ನ ದೃಷ್ಟಿಯು ಅವುಗಳ ಮೇಲೆ ತಪ್ಪದಿರಲಿ ಅವುಗಳನ್ನು ನಿನ್ನ ಹೃದಯದೊಳಗೆ ಇಟ್ಟುಕೋ**
**22 ಅವುಗಳನ್ನು ಹೊಂದುವವರಿಗೆ ಅವು ಜೀವವು ದೇಹಕ್ಕೆಲ್ಲಾ ಅವೇ ಆರೋಗ್ಯವು.**

- ✓ ನಮ್ಮ ಯೋಚನೆಗಳನ್ನು ದೇವರ ಯೋಚನೆಗಳೊಡನೆ ಜೋಡಿಸಬೇಕು.
- ✓ ನಮ್ಮ ಯೋಚನೆಗಳನ್ನು ದೇವರ ವಾಕ್ಯಗಳೊಂದಿಗೆ ಜೋಡಣೆ ಮಾಡಬೇಕು.ನಮ್ಮ ಯೋಚನೆಗಳನ್ನು ಪವಿತ್ರಾತ್ಮನ ನಮಗೆ ನೀಡುತ್ತಿರುವಂತಹ ದರ್ಶನಗಳು, ಕನಸ್ಸುಗಳು ಮತ್ತು ವಿಚಾರಗಳೊಂದಿಗೆ ಜೋಡಣೆ ಮಾಡಬೇಕು.
- ✓ ನಕಾರಾತ್ಮಕ ಯೋಚನೆಗಳನ್ನು ತ್ಯಜಿಸಿಬಿಡರಿ.

**ಕೀರ್ತನೆಗಳು 119:113**
**ಚಪಲಚಿತ್ತರನ್ನು ದ್ವೇಷಿಸುತ್ತೇನೆ ನಿನ್ನ ಧರ್ಮಶಾಸಸ್ತ್ರವನ್ನು ಪ್ರೀತಿಸುತ್ತೇನೆ.**

**ಫಿಲಿಪ್ಪಿಯವರಿಗೆ 4:8,9**
**8 ಕಡೇ ಮಾತೇನೆಂದರೆ ಸಹೋದರರೇ ಯಾವಾವುದು ಸತ್ಯವೂ, ಮಾನ್ಯವೂ, ನ್ಯಾಯವು, ಶುದ್ಧವೂ, ಪ್ರೀತಿಕರವೂ, ಮನೊಹರವೂ ಆಗಿದೆಯೋ, ಯಾವುದು ಸದ್ಗುಣವಾಗಿದೆಯೋ, ಯಾವುದು ಕೀರ್ತಿಗೆ ಯೋಗ್ಯವೋ ಅವೆಲ್ಲವುಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ**
**9 ನೀವು ಯಾವುದನ್ನು ನನ್ನಿಂದ ಕಲಿತು ಹೊಂದಿದಿರೋ ಮತ್ತು ಯಾವುದನ್ನು ನನ್ನಲ್ಲಿ ಕೇಳಿ ಕಂಡಿರೋ ಅದನ್ನೇ ಮಾಡುತ್ತಾ ಬನ್ನಿರಿ. ಹೀಗೆ ಮಾಡಿದರೆ ಶಾಂತಿದಾಯಕನಾದ ದೇವರು ನಿಮ್ಮೊಂದಿಗಿರುವನು.**

- ✓ ಸತ್ಯವೇದ ಆಧಾರಿತ ಸ್ವ- ಸ್ವರೂಪ ಬಳೆಸಿಕೊಳ್ಳಿರಿ.

**ರೋಮಾಪುರದವರಿಗೆ 12:3**
**ದೇವರು ನನಗೆ ಕೃಪೆ ಮಾಡಿದ ಸೇವೆಯನ್ನು ನಡೆಸಿ ನಿಮ್ಮಲ್ಲಿ ಒಬ್ಬೊಬ್ಬನಿಗೂ ಹೇಳುವುದೇನಂದರೆ ಯಾರೂ ತನ್ನ ಯೋಗ್ಯತೆಗೆ ಮೀರಿ ತನ್ನನ್ನು ಭಾವಿಸಿಕೊಳ್ಳದೆ ದೇವರು ಒಬ್ಬೊಬ್ಬನಿಗೆ ಎಂಥೆಂಥ ವಿಶ್ವಾಸ  ಬಲವನ್ನು ಕೊಟ್ಟನೋ ಅದಕ್ಕೆ ತಕ್ಕ ಹಾಗೆ ನ್ಯಾಯವಾದ ಅಭಿಪ್ರಾಯದಿಂದ ತನ್ನನ್ನು ಭಾವಿಸಿಕೊಳ್ಳಬೇಕು.**

## 5.4. ಚುರುಕ್ಕಿಲ್ಲದ – ಮನಸ್ಸಿನ ಲಕ್ಷಣವನ್ನು ದೂರವಿರಿಸಿರಿ.

**ಇಬ್ರಿಯರಿಗೆ 12:3**
**ನೀವು ಮನಗುಂದಿದವರಾಗಿ ಬೇಸರಗೊಳ್ಳದಂತೆ ಆತನನ್ನು ಆಲೋಚಿಸಿರಿ ಆತನು ಪಾಪಿಗಳಿಂದ ಎಷ್ಟೋ ವಿರೋಧವನ್ನು ಸಹಿಸಿಕೊಂಡನು**.

ಬಗೆ ಹರಿಸಲಾಗದ ಭಾವನಾತ್ಮಕ ಮತ್ತು ಬಿಡುವಿಲ್ಲದ ವೇಳಾಪಟ್ಟಿಯ ಬದಲಿಗೆ ಆತ್ಮಿಕ ಸಮಸ್ಯೆಗಳಿಂದ ದಂಟುಗಳನ್ನು ಆಗಾಗ್ಗೆ ಭಸ್ಮ ಮಾಡುತ್ತೀರಿ.

ಬಗೆಹರಿಸಲಾಗದ ಭಾವನಾತ್ಮಕ ಸಮಸ್ಯೆಗಳು ಭಾವನಾತ್ಮಕ ಬಳಲಿಕೆಗಳಿಗೆ ಕಾರಣವಾಗುತ್ತವೆ ಮತ್ತು ದೈಹಿಕ ಆಯಾಸದಲ್ಲಿ (ಸೈಕೋಸೊಮ್ಯಾಟಿಕ್ = ಮಾನಸಿಕ ಒತ್ತಡದಿಂದ ಉಂಟಾಗುವ ದೈಹಿಕ ರೋಗ) ಬೀಳಿಸುವ ಫಲಿತಾಂಶ ನೀಡುತ್ತದೆ.

- ✓ ನಿರೀಕ್ಷೆ – ಆತ್ಮದ ಆಧಾರ ಅಥವಾ ಲಂಗರು.

**ಇಬ್ರಿಯರಿಗೆ 6:19**
**ಈ ಆಧಾರಗಳನ್ನು ಕೊಟ್ಟದ್ದರಲ್ಲಿ ದೇವರು ಸುಳ್ಳಾಡಿರಲಾರೆನು ಆ ನಿರೀಕ್ಷೆಯು ನಮ್ಮ ಪ್ರಾಣಕ್ಕೆ ಲಂಗರದ ಹಾಗಿದ್ದು ಭರವಕ್ಕೆ ಯೋಗ್ಯವಾದದ್ದೂ ಸ್ಥಿರವಾದದ್ದೂ ಆಗಿದೆ. ಅದು ತೆರೆಯೊಳಗಣ ದೇವ ಸಾನ್ನಿಧ್ಯವನ್ನು ಪ್ರವೇಶಿಸುವಂಥದು.**

ನಮ್ಮ ನಿರೀಕ್ಷೆಯನ್ನು ಜೀವಂತವಾಗಿರಿಸಬೇಕು (ಸಕಾರಾತ್ಮಕ ಫಲಿತಾಂಶದ ಪೂರ್ವ ನಿರೀಕ್ಷಣೆ).

## 5.5. ಆಲೋಚನೆಗಳನ್ನು ಜಯಿಸುವುದು.

**ಎಫೆಸದವರಿಗೆ 3:20**
**ನಮ್ಮಲ್ಲಿ ಕಾರ್ಯ ಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವುದಕ್ಕಿಂತಲೂ, ಯೋಚಿಸುವುದಕ್ಕಿಂತಲೂ, ಅತ್ಯಧಿಕವಾದದ್ದನ್ನು ಮಾಡಲೂ ಶಕ್ತನಾದ ದೇವರಿಗೆ**………

- ✓ ನಾವು ಬೇಡುವುದಕ್ಕಿಂತಲೂ ಅಥವಾ ಯೋಚಿಸುವುದಕ್ಕಿಂತಲೂ ಅತ್ಯಧಿಕವಾದದ್ದನ್ನು ದೇವರು ಮಾಡುತ್ತಾನೆ.

**1 ಕೊರಿಂಥದವರಿಗೆ 2:9**
**ಆದರೆ ಬರೆದಿರುವ ಪ್ರಕಾರ ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನುಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ,ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ.**

## 5.6. ನಮ್ಮ ಮನಸ್ಸಿನೊಳಗೆ ಮನವೊಲಿಸಿಕೊಳ್ಳುವ ಹಾಗೆ.

**ರೋಮಾಪುರದವರಿಗೆ14:5**
**ಒಬ್ಬ ವ್ಯಕ್ತಿಯು ಒಂದು ದಿನ ಇನ್ನೊಂದಕ್ಕಿಂತ ಹೆಚ್ಚು ಗೌರವಿಸುತ್ತಾನೆ; ಇನ್ನೊಬ್ಬರು ಪ್ರತಿದಿನ ಗೌರವಿಸುತ್ತಾರೆ ಸಮಾನವಾಗಿ. ಪ್ರತಿಯೊಬ್ಬರೂ ತನ್ನ ಮನಸ್ಸಿನಲ್ಲಿ ಸಂಪೂರ್ಣವಾಗಿ ಮನವರಿಕೆಯಾಗಲಿ**

**ಯಾಕೋಬನು. 1:5-7**
**5 ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ, ಅದು ಅವನಿಗೆ ದೊರಕುವುದು; ದೇವರು ಹಂಗಿಸದೇ ಎಲ್ಲರಿಗೂ ಉದಾರ ಮನಸ್ಸಿನಿಂದ ಕೊಡುವವನಾಗಿದ್ದಾನೆ**
**6 ಸ್ವಲ್ಪವೂ ಸಂದೇಹಪಡದೆ ನಂಬಿಕೆಯಿಟ್ಟು ಕೇಳಿಕೊಳ್ಳಬೇಕು. ಸಂದೇಹಪಡುವವನೋ ಗಾಳಿಯಿಂದ ಬಡಿಯಲ್ಪಟ್ಟ ಸಮುದ್ರದ ತೆರೆಯಂತೆ ಅಲೆಯುತ್ತಿರುವನು**
**7 ಆ ಮನುಷ್ಯನು ತಾನು ಕರ್ತನಿಂದ ಏನಾದರೂ ಹೊಂದುವೆನೆಂದು ಭಾವಿಸದೆ ಇರಲಿ**

**ಯಾಕೋಬನು. 4:8**
**ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು. ಪಾಪಿಗಳೇ, ನಿಮ್ಮ ಕೈಗಳನ್ನು ಶುಚಿಮಾಡಿಕೊಳ್ಳಿರಿ; ಎರಡು ಮನಸ್ಸುಳ್ಳವರೇ, ನಿಮ್ಮ ಹೃದಯಗಳನ್ನು ನಿರ್ಮಲಮಾಡಿಕೊಳ್ಳಿರಿ**

- ✓ ಎರಡು ಮನಸ್ಸು ಅಸ್ಥಿರತೆಯನ್ನು ತರುತ್ತದೆ.

ನಮ್ಮ ಕ್ರಿಸ್ತೀಯ ನಡತೆಯಲ್ಲಿ, ಕೆಲುವು ಸಮಸ್ಯೆಗಳು ಅಂದರೆ, ಮಧ್ಯಸೇವನೆ, ನಗ್ನ ಚಿತ್ರಗಳ ವೀಕ್ಷಣೆ, ಧೂಮಪಾನ, ಮಾದಕವಸ್ತು ಸೇವನೆ, ಭಕ್ತಿ ಇಲ್ಲದ ಗೀತೆಗಳನ್ನು ಕೇಳುವುದು ಇತ್ಯಾದಿಗಳನ್ನು ಬಹಳ ಬಲವಾಗಿ ವಿರೋಧಿಸಬೇಕು. ನಾವು ಸಂಪೂರ್ಣ ಮನದಿಂದ ಅವುಗಳನ್ನು ಎಷ್ಟು ಮಾತ್ರಕ್ಕೂ ನಮ್ಮೊಳಗೆ ಸಮ್ಮತಿಸದೇ ಅವುಗಳಿಂದ ದೂರವಿರಬೇಕು.

## 5.7. ಖಿನ್ನತೆಯನ್ನು ಸ್ವಾಧಿನಪಡಿಸಿಕೊಳ್ಳುವುದು.

ಖಿನ್ನತೆ ಕೆಲವೊಮ್ಮೆ ಅನಿರೀಕ್ಷೆ, ಭಾರ ಮತ್ತು ಕತ್ತಲೆಯ ಅನುಭವದ ರೀತಿಯಲ್ಲಿ ಆಗಾಗ್ಗೆ ತೋರ್ಪಡಿಸುತ್ತದೆ.

**ಯೋಬ.7:7**
**ಎಲ್ಯೆ ನನ್ನ ಜೀವವು ಗಾಳಿಯಂತಿದೆಯಂತಲೂ ನನ್ನ ಕಣ್ಣು ಇನ್ನೂ ಸುಖವನ್ನು ಕಾಣುವುದಿಲ್ಲವೆಂತಲೂ ನೆನಪು ಮಾಡಿಕೋ**

**ಯೆಶಾಯ. 61:3**
**ದುಃಖಿತರೆಲ್ಲರನ್ನು ಸಂತೈಸುವುದಕ್ಕೂ ಚೀಯೋನಿನಲ್ಲಿ ಶೋಕಿಸುವವರಿಗೆ ಬೂದಿಗೆ ಬದಲಾಗಿ ಶಿರೋಭೂಷಣ, ದುಃಖವಿದ್ದಲ್ಲಿ ಆನಂದ ತೈಲ, ಕುಂದಿದ ಮನಕ್ಕೆ ಪ್ರತಿಯಾಗಿ ಉತ್ಸಾಹಸ್ತೋತ್ರದ ವಸ್ತ್ರ ಇವುಗಳನ್ನು ಒದಗಿಸಿಕೊಡುವುದಕ್ಕೂ ಆತನು ನನ್ನನ್ನು ಕಳುಹಿಸಿದ್ದಾನೆ. ಯೆಹೋವನು ತನ್ನ ಪ್ರಭಾವಕ್ಕೋಸ್ಕರ ಹಾಕಿದ ನೀತಿ ವೃಕ್ಷಗಳು ಎಂಬ ಬಿರುದು ಇವರಿಗಾಗುವುದು**

ಖಿನ್ನತೆಗೆ ಕಾರಣವನ್ನು ನಾವು ಗುರುತಿಸಬೇಕು ಮತ್ತು ಕ್ರಮಗಳನ್ನು ತೆಗೆದುಕೊಳ್ಳಬೇಕು ಆ ಕಾರಣಗಳನ್ನು ಎದುರಿಸಬೇಕು, ಇಲ್ಲಿ ಕೆಲವು ಪಟ್ಟಿಮಾಡಲ್ಪಟಿವೆ:

| **ಕಾರಣ** | **ಸಕಾರಾತ್ಮಕ ಕೃತ್ಯ** |
|---|---|
| ದ್ವೇಷ, ಕ್ಷಮಿಸದಿರುವಿಕೆ, | ಕ್ಷಮಾಪಣೆ |
| ಅತೃಪ್ತನಿರೀಕ್ಷೆಗಳು. | ನಿರೀಕ್ಷೆ,<br>ನವೀಕರಿಸಲ್ಪಟ್ಟ ವಾಗ್ದಾನಗಳು,<br>ನಂಬಿಕೆ |
| ಅತಿಸೂಕ್ಷ್ಮತೆ.<br>ಸುಲಭವಾಗಿ ಮನನೊಂದ , | ಪ್ರೀತಿ<br>ತಗ್ಗಿಸುವಿಕೆ |
| ನಕಾರಾತ್ಮಕಅನಿಸುವಿಕೆಗಳು.<br>. | ಸರಿಯಾಗಿ ಒಪ್ಪಿಕೊಳ್ಳುವಂಥದ್ದು<br>ಸ್ತೋತ್ರ<br>ಧನ್ಯವಾದಗಳು<br>ಆನಂದ. |
| ,<br>ಕೋಪ | ಶರಣಾದ ಹಕ್ಕುಗಳ |
| ,<br>ಆನುವಂಶಿಕ ದೌರ್ಬಲ್ಯದ ನಿಮಿತ್ತದಿಂದ ಉಂಟಾದ ಖಿನ್ನತೆ | ಬಿಡುಗಡೆ<br>ಅನ್ಯಭಾಷೆಗಳಲ್ಲಿ ಮಾತನಾಡುವುದು |

# 6 ಆತ್ಮ ಮತ್ತು ಪ್ರಾಣದ ಸಮತೋಲನ

ನಿರ್ಧಾರ ತೆಗೆದುಕೊಳ್ಳುವಲ್ಲಿ ಆತ್ಮ ಮತ್ತು ಪ್ರಾಣದ ಸಮತೋಲನ ಇರಬೇಕು.

## 6.1.ನಮ್ಮ ಮನಸ್ಸುಗಳನ್ನು ಉಪಯೋಗಿಸಲು ದೇವರು ನಮಗೆ ಕೊಟ್ಟಿದ್ದಾನೆ.

- ✓ ಆದ್ದರಿಂದ ಮನಸ್ಸು ಅನ್ನುವುದು ಕೆಟ್ಟ ವಿಷಯವಲ್ಲ !

**ಜ್ಞಾನೋಕ್ತಿಗಳು 4 : 26**
**ನೀನು ನಡೆಯುವ ದಾರಿಯನ್ನು ಸಮಮಾಡು ನಿನ್ನ ಮಾರ್ಗಗಳೆಲ್ಲಾ ದೃಢವಾಗಿರಲಿ.**

- ✓ ನಾವು ಮಾಡುವಂತಹವುಗಳ ಮಾರ್ಗದ ಕುರಿತು ನಾವು ಆಲೋಚಿಸಬೇಕು. ಆದ್ದರಿಂದ ನಮ್ಮ ಮನಸ್ಸುಗಳನ್ನು ಯೋಜನೆ ಮಾಡಲೂ , ಸಿದ್ಧಮಾಡಲೂ ಮತ್ತು ಕಾರ್ಯಗತಗೊಳಿಸಲು ಉಪಯೋಗಿಸಬೇಕು.

**ಜ್ಞಾನೋಕ್ತಿಗಳು 13 : 16**
**ಪ್ರತಿಯೊಬ್ಬ ಜಾಣನು ತನ್ನ ಕೆಲಸವನ್ನು ತಿಳುವಳಿಕೆಯಿಂದ ನಡಿಸುವನು ಮೂಢನು ತನ್ನ ಮೂರ್ಖತನವನ್ನು ಡಂಭವಾಗಿ ತೋರ್ಪಡಿಸುವನು.**

**ಜ್ಞಾನೋಕ್ತಿಗಳು 19 : 2**
**ತಿಳುವಳಿಕೆಯಿಲ್ಲದೆ ಕೋರುವದು ಆಯುಕ್ತ ದುಡುಕುವ ಕಾಲು ದಾರಿತಪ್ಪುವದು,**

**ಜ್ಞಾನೋಕ್ತಿಗಳು 24 : 6**
**ಮಂತ್ರಾಲೋಚನೆಯಿಂದ ಯುದ್ಧವನ್ನು ನಡಿಸು ಬಹುದು ಮಂತ್ರಿಗಳು ಇರುವಲ್ಲಿ ಸುರಕ್ಷಣೆಯಿರುವುದು**

**ಪ್ರಸಂಗಿ 10 : 10**
**ಮೊಂಡು ಕೊಡಲಿಯ ಬಾಯಿ ಮೊನೆ ಮಾಡದಿದ್ದರೆ ಹೆಚ್ಚು ಬಲವನ್ನು ಪ್ರಯೋಗಿಸಬೇಕಲ್ಲವೆ, ಕಾರ್ಯಸಿದ್ಧಿಗೆ ಜ್ಞಾನವೇ ಸಾಧನ**

- ✓ ಜ್ಞಾನ ಅಥವಾ ವಿವೇಕವನ್ನು ನಮ್ಮಲ್ಲಿ ಹೆಚ್ಚಿಸುವುದರಲ್ಲಿ ದೇವರು ನಮಗೆ ವಿರೋಧವಾಗಿಲ್ಲ.

**1 ಕೊರಿಂಥದವರಿಗೆ 14 : 20**
**ಸಹೋದರರೇ ಬುದ್ಧಿಯ ವಿಷಯದಲ್ಲಿ ಬಾಲಕರಾಗಿರಬೇಡಿರಿ ಕೆಟ್ಟತನದ ವಿಷಯದಲ್ಲಿ ಶಿಶುಗಳಾಗಿಯೇ ಇದ್ದು ಬುದ್ಧಿಯ ವಿಷಯದಲ್ಲಿ ಪ್ರಾಯಸ್ಥರಾಗಿರಬೇಕು**.

- ✓ ನಮ್ಮ ಮನಸ್ಸುಗಳಲ್ಲಿ, ನಮ್ಮ ತಿಳುವಳಿಕೆಯಲ್ಲಿ ನಾವು ಪ್ರೌಢರಾಗಿರಬೇಕೆಂಬುದಾಗಿ ದೇವರು ಅಪೇಕ್ಷಿಸುತ್ತಾನೆ.

**ಜ್ಞಾನೋಕ್ತಿಗಳು 3 : 5, 6.**
**5 ಸ್ವ ಬುದ್ಧಿಯನ್ನೇ ಆಧಾರ ಮಾಡಿಕೊಳ್ಳದೆ ಪೂರ್ಣ ಮನಸ್ಸಿನಿಂದ ಯೆಹೋವನಲ್ಲಿ ಭರವಸವಿಡು**
**6 ನಿನ್ನ ಎಲ್ಲಾ ನಡವಳಿಯಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು ಆತನೇ ನಿನ್ನ ಮಾರ್ಗಗಳನ್ನು ಸರಾಗಮಾಡುವನು.**

- ✓ ನಮ್ಮ ತಿಳುವಳಿಕೆಯ ಮೇಲೆ ಆತುಕೊಳ್ಳದೇ, " ಕರ್ತನಲ್ಲಿ ನಿರೀಕ್ಷೆಯಿಡುವ " ಕೆಲವು ಸಮಯಗಳಿವೆ.

**1 ಥೆಸಲೋನಿಕದವರಿಗೆ 5:23**
**ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಲಿ. ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾದಾಗ ನಿಮ್ಮ ಆತ್ಮ ಪ್ರಾಣ ಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ**.

- ✓ ಇವೆಲ್ಲದರ ಮುಖ್ಯ ಅಂಶವು ನಮ್ಮ ಮನಸ್ಸುಗಳನ್ನು ದೇವರಿಗಾಗಿ ಶುದ್ಧೀಕರಿಸಲ್ಪಟ್ಟು (ಪ್ರತ್ಯೇಕಿಸಲ್ಪಟ್ಟು) ಇಡುವುದಾಗಿದೆ.

## 6.2. ನಂಬಿಕೆ ಮತ್ತು ಪೂರ್ವ ಭಾವನೆ

**2 ಕೊರಿಂಥದವರಿಗೆ 5:7**
**ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತೇವಾದದರಿಂದ**

ನಾವು ನೋಡುವವರಾಗಿ ನಡೆಯದೆ ನಂಬಿಕೆಯಿಂದ ನಡೆಯುತ್ತೇವೆ.

- ✓ ಸರಿಯಾದ ನಿರ್ಧಾರಗಳನ್ನು ಮಾಡುವುದರಲ್ಲಿ ಆತ್ಮ ಮತ್ತು ಪ್ರಾಣದ ಸಮತೋಲನವಾಗಿದೆ.
- ✓ ನಮ್ಮ ಆತ್ಮಗಳಲ್ಲಿ ನಾವು ಗ್ರಹಿಸುತ್ತಿರುವುದು ಸತ್ಯವಾಗಿಯು ದೇವರಿಂದ ಬಂದಿರುವುದಾಗಿದೆಯಾ ಎಂಬುದಾಗಿ ನಮ್ಮ ಮನಸ್ಸುಗಳಲ್ಲಿ ವಿಶ್ಲೇಷಿಸಿಕೊಳ್ಳಬೇಕು.

- ✓ ನಮ್ಮ ಮನಸ್ಸುಗಳು ದೇವರ ವಾಕ್ಯವನ್ನು ತಿಳಿಯಬೇಕು ಮತ್ತು ಅರ್ಥಮಾಡಿಕೊಳ್ಳಬೇಕು.
- ✓ ನಾವು ನಿಜವಾಗಿಯು ನಂಬಿಕೆಯಲ್ಲಿ ನಡೆಯುತ್ತಿದ್ದೇವಾ ಅಥವಾ ಇದು ಒಂದು ಊಹೆಯ ಎಂಬುದಾಗಿ ನಮ್ಮ ಮನ್ಸುಗಲು ಗ್ರಹಿಸಬೇಕು.
- ✓ ದೇವರಿಂದ ನಿಕರವಾಗಿ ಕೇಳಿದ ಮೆಲು ಸಹ ನಮ್ಮ ಮನಸ್ಸುಗಳು ಸರಿಯಾದ ಕ್ರಿಯೆಯ ಸ್ಥಿತಿಗೆ ಬರುವುದನ್ನು ತಿಳಿಯಬೇಕು. ಆದ್ದರಿಂದ ನಾವು ಜಯಶಾಲಿಗಲಾಗಬಹುದು.

## 6.3. ದೇವರ ಸ್ವರ ಗ್ರಹಿಸುವುದು.

**ಎಫೆಸದವರಿಗೆ 5:10,17**
**10 ಕರ್ತನಿಗೆ ಮೆಚ್ಚಿಗೆಯಾದದ್ದು ಏನೆಂಬುದನ್ನು ಪರಿಶೋಧಿಸಿ ತಿಳುಕೊಳ್ಳಿರಿ**
**17 ಮತ್ತು ಬುದ್ಧಿಹೀನರಾಗಿ ನಡೆಯದೆ ಕರ್ತನ ಚಿತ್ತವೇನೆಂಬುದನ್ನು ವಿಚಾರಿಸಿ ತಿಳಿದವರಾಗಿರ್ರಿ**

**1 ಥೆಸಲೋನಿಕದವರಿಗೆ 5:19-21**
**19 ಪವಿತ್ರಾತ್ಮನನ್ನು ನಂದಿಬೇಡಿರಿ,**
**20 ಪ್ರವಾದನೆಗಳನ್ನು ಹೀನೈಸಬೇಡಿರಿ**
**21 ಆದರೆ ಎಲ್ಲವನ್ನೂ ಪರಿಶೋಧಿಸಿ ಒಳ್ಳೇದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ.**

ಈ ಒಂದು ಅಧ್ಯಾಯದ ಕೊನೆಯಲ್ಲಿ ರೇಖಾಚಿತ್ರವನ್ನು ನೋಡಿರಿ.

## 6.4. ತಾರ್ಕಿಕ ಕ್ರಿಯೆ ಮತ್ತು ನಂಬಿಕೆ

- ✓ ನಮ್ಮ ತಾರ್ಕಿಕವಾದ ಕ್ರಿಯೆಯು ನಮ್ಮ ನಂಬಿಕೆಯನ್ನು ಕುಂಠಿತಗೊಳಿಸದಂತೆ ಅವಕಾಶ ನೀಡಬಾರದು.

ಪೇತ್ರನು ತನ್ನ ತರ್ಕವು ಅವನ ನಂಬಿಕೆಯನ್ನು ಕುಂಠಿತಗೊಳಿಸುವವರೆಗೂ – ಪೇತ್ರನು ನೀರಿನ ಮೇಲೆ ನಡೆದನು.

**ಮತ್ತಾಯ 14:25-31**
**25 ರಾತ್ರಿಯ ನಾಲ್ಕನೆಯ ಜಾವದಲ್ಲಿ ಯೇಸು ಸಮುದ್ರದ ಮೇಲೆ ನಡೆದು ಅವರ ಕಡೆಗೆ ಬಂದನು.**
**26 ಸಮುದ್ರದ ಮೇಲೆ ನಡೆಯುವ ಆತನನ್ನು ಶಿಷ್ಯರು ನೋಡಿ ಭೂತವೆಂದು ತತ್ತರಿಸಿ ಭಯದಿಂದ ಕೂಗಿದರು.**
**27 ಕೂಡಲೇ ಯೇಸು ಮಾತಾಡಿ ಅವರಿಗೆ ಧೈರ್ಯವಾಗಿರಿ ನಾನು ಅಂಜಬೇಡಿರಿ ಎಂದು ಹೇಳಿದನು.**
**28 ಅದಕ್ಕೆ ಪೇತ್ರನು ಸ್ವಾಮೀ ನೀನೇಯಾದರೆ ನನಗೆ ನೀರಿನ ಮೇಲೆ ನಡೆದು ನಿನ್ನ ಬಳಿಗೆ ಬರುವುದಕ್ಕೆ ಅಪ್ಪಣೆಕೊಡು ಅನ್ನಲು ಆತನು ಬಾ ಅಂದನು.**
**29 ಆಗ ಪೇತ್ರನು ಯೇಸುವಿನ ಬಳಿಗೆ ಹೋಗುವುದಕ್ಕೆ ದೋಣಿಯಿಂದ ಇಳಿದು ನೀರಿನ ಮೇಲೆ ನಡೆದನು .**
**30 ಆದರೆ ಗಾಳಿಯನ್ನು  ನೋಡಿ ಭಯಪಟ್ಟು ಮುಣುಗುತ್ತಾ ಸ್ವಾಮೀ ನನ್ನನ್ನು ಕಾಪಾಡು ಎಂದು ಕೂಗಿಕೊಂಡನು.**
**31 ಆ ಕ್ಷಣವೇ ಯೇಸು ಕೈ ಚಾಚಿ ಅವನನ್ನು ಹಿಡಿದು ಅಲ್ಪವಿಶ್ವಾಸಿಯೇ ಯಾಕೆ ಸಂದೇಹಪಟ್ಟೆ ಎಂದು ಹೇಳಿದನು.**

ಸಾಲುಗಳ ಹೊರಗಡೆ ದೇವರು ಚಿತ್ರ ಬಿಡಿಸುವ ಸಮಯಗಳು ಇವೆ. (ನಾವು ರಚಿಸಬೇಕಾಗಿರುವುದು) ದೇವರು ಹೃದಯವನ್ನು ವ್ಯಕ್ತಪಡಿಸಲು ಮನಸ್ಸನ್ನು ಅಜ್ಞಾನಗೊಳಿಸುತ್ತಾನೆ.

ಬರೆಯಲ್ಪಟ್ಟ ವಾಕ್ಯಗಳಿಗಿಂತ ದೇವರು ದೊಡ್ಡವನಾಗಿದ್ದಾನೆ. ದೇವರು ಬರೆಯಲ್ಪಟ್ಟ ವಾಕ್ಯಗಳಿಗೆ ಯಾವುದೇ ರೀತಿಯಲ್ಲಿ ವಿರೋಧವಾಗಿರುವುದಿಲ್ಲ.ಅವನು ಮಾರ್ಗಗಳಲ್ಲಿ ಕೆಲಸ ಮಾಡಲು ಸ್ವತಂತ್ರನಾಗಿರುತ್ತಾನೆ ಮತ್ತು ಆತನು ಯಾರೆಂಬುದಕ್ಕೆ ಹೊಂದಿಕೆಯಾಗುವಂತಹ ಕೆಲಸಗಳನ್ನು ಮಾಡುತ್ತಾನೆ ಆದರೆ ಲಿಖಿತ ಗ್ರಂಥಗಳಲ್ಲಿ ಅಗತ್ಯವಾಗಿ ವಿವರಿಸಲಾಗುವುದಿಲ್ಲ

- ✓ ಸಂಶಯವುಳ್ಳ ಮನಸ್ಸುವುಳ್ಳವರಾಗಿರುವಂತದ್ದನ್ನು ನಿವಾರಿಸುವುದು.

**ಲೂಕ 12:29**
**29ಏನು ಊಟಮಾಡಬೇಕು? ಏನು ಕುಡಿಯಬೇಕು ಎಂದು ತವಕಪಡಬೇಡಿರಿ ಮತ್ತು ಅನುಮಾನ ಪಡಬೇಡಿರಿ**

**2 ಥೆಸಲೋನಿಕದವರಿಗೆ 2:2**
**ಕರ್ತನ ದಿನವು ಈಗಲೇ ಹತ್ತಿರವಾಯಿತೆಂಬದಾಗಿ ದೇವರಾತ್ಮಪ್ರೇರಿತವಾದ ನುಡಿ ಇದೆ ಎಂದಾಗಲಿ ಪೌಲನು ಹಾಗೆ ಹೇಳಿದನೆಂದಾಗಲಿ ಪೌಲನು ಹಾಗೆ ಬರೆದನೆಂದಾಗಲಿ ಯಾರಾದರೂ ಹೇಳಿದರೂ ನೀವು ಬೇಗನೆ ಬುದ್ಧಿಗೆಟ್ಟು ಚಂಚಲರಾಗಿ ಕಳವಳಪಡಬೇಡಿರಿ.**

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ ಸೇವಕರ ಸಮಾವೇಸವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು.
Account Name:All Peoples Church
Account Number: 0057213809,
IFSC Code: CITI0000004
Bank : Citibank N.A. 506-507
Level 5 Prestige Meridian 2,#30.
M.G. Road Banglore – 560 001

ದಯವಿಟ್ಟು ಗಮನಿಸಿ: ಆಲ್ ಪೀಪಲ್ಸ್ ಸಭೆಯು **FCRA** ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.
ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು-
-ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜಸ್ಥಳ
ದೇವರ ಉದ್ದೇಶಗಳಿಗೆ ಜನ್ಮಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು-
-ನೆರವೇರಿಸುವುದು.
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ,ಪ್ರಕಟನೆ ಮತ್ತು ಬಲದ ಆತ್ಮನು

ದೇವರು ಒಳ್ಳೆಯ ದೇವರಾಗಿದ್ದಾನೆ

ಆಸ್ತಿವಾರಗಳು ಭಾಗ-1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ದೇವರ ರಾಜ್ಯ
ಪ್ರಾಚೀನ ಹೆಗ್ಗುರುತು
ಯೇಸುವಿನ ಪ್ರಬಲ ಹೆಸರು

ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ
ದೇವರ ಮನೆ
ಮದುವೆ ಮತ್ತು ಕುಟುಂಬ
ದೈವಿಕ ದಯೆ
ದೈವಿಕ ಕ್ರಮ -ನಗರ ವ್ಯಾಪ್ತಿ ಸಭೆಗಳಲ್ಲಿ
ಶುದ್ಧೀಕರಿಸುವ ಬೆಂಕಿ
ಬದ್ಧತೆಯ ಬಲ
ಜಗಳ ರಹಿತವಾದ ಜೀವಿತ ಜೀವಿಸುವುದು
ಕೆಲಸ ಮತ್ತುಆದರ ಮೂಲ ವಿನ್ಯಾಸ
ನಾವು ವಿಭಿನ್ನರು

ತಂದೆಯ ಪ್ರೀತಿ
ನಮ್ಮ ವಿಮೋಚನೆ
ಆತ್ಮಿಕವಾಗಿಮನಸುಳ್ಳವರಾಗಿರುವುದು
ಲೌಕಿಕ ಜ್ಞಾನವಂತರಾಗಿರುವುದು
ದೇವರ ಮಾರ್ಗದರ್ಶನ ಪಡೆದುಕೊಳ್ಳುವುದು

ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ
ಪ್ರತಿ ಉದ್ದೇಶಕ್ಕೂ ಒಂದು ಸಮಯವಿದೆ
ಶ್! ಹರಟೆ ಬೇಡ
ದೇವರ ವಿಮೋಚನ ಹೃದಯ
ಪವಿತ್ರಾತ್ಮನ ವರಗಳು
ಕೆಲಸದ ಸ್ಥಳದಲ್ಲಿನ ಸ್ತ್ರೀಯರು
ಮನಸ್ಸಿನ ವಿಜಯ

ಉಚಿತ ಇ- ಪುಸ್ತಕಗಳು ನಮ್ಮ ಚರ್ಚ್ ವೆಬ್ ಸೈಟ್ apcwo.org/publications. ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ.ಡಿ.ಎಫ್ ಅನುವಾದನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ.ಇಂತಹ ಉಚಿತ ಪುಸ್ತಕಗಳಿಗಾಗಿ ಇ –ಮೇಲ್ ಅಥವಾಅಂಚೆಯಮೂಲಕವಾಗಿನಮ್ಮನ್ನುಸಂಪರ್ಕಿಸಹುದಾಗಿದೆ.bookrequest@apcwo.org ಉಚಿತ ಆಡಿಯೋ,ವಿಡಿಯೋ ಸಂದೇಶಗಳು ಪ್ರಸಂಗದ ಟಿಪ್ಪಣಿಗಳಿಗಾಗಿ ನಮ್ಮ ವೆಬ್ ಸೈಟನ್ನುಸಂಪರ್ಕಿಸಿ(apcwo.org/sermons)ಮತ್ತು ಇತರೆ ಅನೇಕ ಅಧ್ಯಯನ ಸಂಗ್ರಹ ಬಳಸಹುದು.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು

ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕ ಕಾರ್ಯ, ಅಧ್ಭುತಕಾರ್ಯ, ಮಹಾತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2:4,5, ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಆಲ್ ಪೀಪಲ್ಸ್ ಸಭೆಯು ಭಾರತದಲ್ಲಿ ಅನೇಕ ಸಭೆಗಳನ್ನು ಹೊಂದಿದೆ ಮತ್ತು ಹೊಸ ಸಭೆಗಳು ನಿಯತಕಾಲಿಕವಾಗಿ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿರಿ. www.apcwo.org ಅಥವಾ Contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ – ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಕಾರ್ಯಗಳು,ದೇವರು, ಒಳ್ಳೆಯ ದೇವರಾಗಿದ್ದಾನೆ , ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ನಮಗೆ ಪ್ರಕಟಿಸುತ್ತವೆ**.

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು **"ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ**

**ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ” ಎಂದು ಹೇಳುತ್ತದೆ. ( ರೋಮಪುರ 6:23)** ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ,ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.
**“ ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು” (ಅಪೊಸ್ತಲರ ಕೃತ್ಯ 10:43)**

**“ ನೀನು ಯೆಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವುದು ಎಂಬುದೇ” (ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು.

ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

ಪ್ರಿಯ ಕರ್ತನಾದ ಯೇಸುವ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರು ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.

ಈ ದಿನ ನಾನು ನಿನ್ನನ್ನು  ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ.
ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.

ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ " ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ದೀಕರಣ ಪಡೆದುಕೊಂಡೆ" ಎಂದು ಹೇಳುತ್ತೇನೆ.

ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು. ಆಮೆನ್

# ಆಲ್ ಪೀಪಲ್ಸ್ ಚರ್ಚ್
# ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC-BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು—ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿವುದನ್ನು ನಾವು ನಂಬುತ್ತೇವೆ.

ಏ.ಪಿ.ಸಿ-ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೆಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳು ನೀಡುತ್ತೇವೆ.
ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (C.Th.)
ಎರಡು ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (D.Th.)
ಮೂರು ವರ್ಷದ ಬ್ಯಾಚುಲರ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ ಸೋಮವಾರದಿಂದ ಶುಕ್ರವಾರ ಬೆಳಿಗ್ಗೆ 9 ರಿಂದ ಮದ್ಯಾಹ್ನ 1 ರವರೆಗೆ ಜರುಗುತ್ತದೆ. ದಿನದ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು ಮತ್ತು ಮನೆಯಲ್ಲಿ ಇರುವವರು ಇಂತಹ ತರಗತಿಗಳಿಗೆ ಹಾಜರಾಗಬಹುದು ಮತ್ತು ಮಧ್ಯಾಹ್ನ 1 ರ ನಂತರ ಅವರ ಕೆಲಸಗಳನ್ನು ಮುಂದುವರೆಸಬಹುದು.

ವಸತಿನಿಲಯ ಇಚ್ಛಿಸುವಂತಹ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ದೊರೆಯುತ್ತದೆ. ವಿದ್ಯಾರ್ಥಿಗಳು ಸೇವಾಕಾರ್ಯಗಳು ವಿಶೇಷ ಸಮಾವೇಶಗಳು ಮಧ್ಯಾಹ್ನದ ಅವಧಿಗಳಲ್ಲಿ ಪ್ರಾರ್ಥನೆ ಮತ್ತು ಆರಾಧನೆ ಸಮಯದಲ್ಲಿ ಪ್ರತಿವಾರದ ದಿನ ಮದ್ಯಾಹ್ನ 2 ರಿಂದ 5 ರವರೆಗೆ ಭಾಗವಹಿಸಬೇಕು. ಮಧ್ಯಾಹ್ನದ ತರಗತಿಗಳು ದಿನದ ತರಗತಿಗಳಿಗೆ (ವಸತಿ ಬಯಸದ) ಐಚ್ಛಿಕ ವಿಷಯವಾಗಿದೆ. ಎಲ್ಲಾ ವಿದ್ಯಾರ್ಥಿಗಳು ವಾರಾಂತ್ಯದ ದಿನದಲ್ಲಿ ಒಂದು ಅಥವಾ ಅನೇಕ ಸ್ಥಳೀಯ ಸಭೆಗಳಲ್ಲಿ ಸೇವೆ ಮಾಡಲು ಪ್ರೋತ್ಸಾಹಿಸಲಾಗುತ್ತದೆ.

ಸತ್ಯವೇದ ಶಾಲೆ, ಕೊಡಲ್ಪಟ್ಟಂತಹ ವಿವಿಧ ಕಾರ್ಯಕ್ರಮಗಳು, ಕಲಿಕಾ ವಿಷಯಾಂಶಗಳು ಮತ್ತು ಅರ್ಜಿಯನ್ನು ಡೌನ್ ಲೋಡ್ ಮಾಡಲು apcwo.org/biblecollege ಅನ್ನು ಸಂಪರ್ಕಿಸಿರಿ.

APC-BC is accredited by the Nations Association for Thelogical

ನಾವು ನೂತನವಾಗಿ ಹುಟ್ಟಿದಾಗ, ನಮ್ಮ ಆತ್ಮಗಳು ಮಾತ್ರವೇ ಹೊಸದಾಗಿ ಹುಟ್ಟುತ್ತವೆ. ದೇವರ ಸ್ವಾರೂಪ್ಯದಲ್ಲಿ ಪುನಃ ಸೃಷ್ಟಿಸಲ್ಪಡುತ್ತವೆ. ಮತ್ತು ದೇವರ ಸ್ವಭಾವ ಮತ್ತು ಜೀವದೊಡನೆ ತುಂಬಿಸಲ್ಪಡ್ಡುತ್ತವೆ. ನಮ್ಮ ಮನಸ್ಸುಗಳು ಮತ್ತು ದೇಹಗಳು ಹುಟ್ಟುವುದಿಲ್ಲ

ದೇವರ ವಾಕ್ಯ ಮತ್ತು ಪವಿತ್ರಾತ್ಮನ ಮೂಲಕವಾಗಿ ನಮ್ಮ ಮನಸ್ಸನ್ನು ನವೀಕೃತಗೊಳಿಸಿಕೊಳ್ಳುವುದು ಮತ್ತು ಶರೀರವನ್ನು ಶಿಲುಬೆಗೇರಿಸುವುದರ ಜವಬ್ದಾರಿಯನ್ನು ದೇವರು ನಮ್ಮ ಮೇಲೆ ಇರಿಸಿದ್ದಾನೆ.

ಈ ಒಂದು ಪುಸ್ತಕದಲ್ಲಿ ನೂತನ ಮನಸ್ಸಿನ ಮೇಲೆ ನಾವು ದೃಷ್ಟಿಸೋಣ- ಏನು ಮಾಡಬೇಕು ಮತ್ತು ಅದನ್ನು ಹೇಗೆ ಮಾಡಬೇಕೆಂಬುದನ್ನು ನೋಡೋಣ. ಇದು ಪ್ರತಿನಿಧಿಸುವ ಅಧ್ಯಯನ ರೂಪುರೇಖೆಗಳು:

- ಮನಸ್ಸು ಒಂದು ಸತ್ಯವೇದದ ದೃಷ್ಟಿಕೋನ
- ಮನಸ್ಸು ಒಂದು ಯುದ್ಧಭೂಮಿ
- ನಿಮ್ಮ ಮನಸ್ಸನ್ನು ನವೀಕರಿಸುವುದು
- ಒಂದು ಸಕಾರಾತ್ಮಕ ಮಾನಸಿಕ ವರ್ತನೆಯನ್ನು ವೃದ್ಧಿಸಿಕೊಳ್ಳುವುದು
- ಆತ್ಮ ಮತ್ತು ಪ್ರಾಣಾತ್ಮವನ್ನು ಸಮತೋಲನ ಮಾಡುವುದು

ಇದು ವೈಯಕ್ತಿಕ ಅಧ್ಯಯನ ಮಾರ್ಗದರ್ಶಿಯಾಗಿ, ಸಣ್ಣ ಗುಂಪು ಚರ್ಚೆಗಳಲ್ಲಿ ಅಥವಾ ಉಪನ್ಯಾಸ / ಸೆಮಿನಾರ್ / ಕಾನ್ಫರೆನ್ಸ್ ಟಿಪ್ಪಣಿಗಳಾಗಿ ಬಳಸಲು ಉದ್ದೇಶಿಸಿರುವ ಅಧ್ಯಯನದ ರೂಪರೇಖೆಯಾಗಿದೆ

ಆಶಿಷ್ ರಾಯ್‌ಚೂರ್

All Peoples Church & World Outreach
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043 Karnataka, INDIA

Phone: +91-80-25452617
Email: contact@apcwo.org
Website: apcwo.org